ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ

(ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆ ಅವರನ್ನು ಅನುಲಕ್ಷಿಸಿ)

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಅಧ್ಯಯನಕಾರರು
ಕೊರಮರ ಚಂದ್ರಶೇಖರ
ನೋಂ. ಸಂ. ಕೆ.ಯು.ಕೆ.ಎಸ್/೦೦೫೦೬

ಮಾರ್ಗದರ್ಶಕರು
ಡಾ. ಅಮರೇಶ ಎನ್.
ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ -೫೮೩ ೨೭೬
೨೦೧೩

ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ

(ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆ ಅವರನ್ನು ಅನುಲಕ್ಷಿಸಿ)

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಅಧ್ಯಯನಕಾರರು

ಕೊರಮರ ಚಂದ್ರಶೇಖರ

ನೊಂ. ಸಂ. ಕೆ,ಯು,ಕೆ,ಎಸ್/೦೦೫೦೬

ಮಾರ್ಗದರ್ಶಕರು

ಡಾ. ಅಮರೇಶ ಎನ್.

ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ –೫೮೩ ೨೭೬

೨೦೧೩

ಪ್ರಮಾಣ ಪತ್ರ

ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ (ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆ ಅವರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಅಮರೇಶ ಎನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಈ ಸಂಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಂಪಿ, ವಿದ್ಯಾರಣ್ಯ

ದಿನಾಂಕ : 30.07.13

ಚಂದ್ರಶೇಖರ. ಕೆ.

(ಕೊರಮರ ಚಂದ್ರಶೇಖರ)

ಸಂಶೋಧನ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಕೊರಮರ ಚಂದ್ರಶೇಖರ ಇವರು ನನ್ನ ಮಾರ್ಗದರ್ಶನದಲ್ಲಿ **ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ (ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆ ಅವರನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್ ಪದವಿಗಾಗಿ ಸಿದ್ಧಪಡಿಸಿದ್ದು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಸದರಿ ಸಂಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಇದರ ಯಾವುದೇ ಭಾಗ ಮತ್ತು ವಿಷಯವನ್ನು ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ ಮತ್ತು ಈ ಮೊದಲು ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಂಪಿ, ವಿದ್ಯಾರಣ್ಯ

ದಿನಾಂಕ : 30.07.13

(ಡಾ. ಅಮರೇಶ ಎನ್)

ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೨೦ನೇ ಶತಮಾನ ಎಲ್ಲಾ ಕ್ಷೇತ್ರದಲ್ಲೂ ವೈವಿಧ್ಯತೆಯನ್ನು ಕಂಡ ಕಾಲಮಾನ. ೧೯ನೇ ಶತಮಾನದಲ್ಲಿ ಆದ ಕ್ರಾಂತಿ ಮತ್ತು ಅದರಿಂದ ಉಂಟಾದ ಜ್ಞಾನ ಶಾಖೆಗಳು ವಿಶ್ವದಾದ್ಯಂತ ಹೊಸ ಆವಿಷ್ಕಾರಗಳಿಗೆ ನಾಂದಿಯಾದವು. ಈ ಕಾಲಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತದಲ್ಲಿನ ರಾಜ್ಯಾಡಳಿತ ವ್ಯವಸ್ಥೆ ವಸಾಹತುಶಾಯಿಗಳ ಆಗಮನಕ್ಕೆ ಸೂಕ್ತದಾರಿ ಮಾಡಿಕೊಟ್ಟಿತು. ಬ್ರಿಟೀಷರ ಆಗಮನದಿಂದ ಭಾರತವು ತನ್ನ ಮೂಲ ತಲ್ಲಣಗಳ ಜೊತೆಯಲ್ಲೇ ವಸಾಹತುಶಾಯಿಯ ಆಧುನಿಕತೆಯ ಆರಂಭಕ್ಕೆ ಕಾರಣವಾಯಿತು. ಇದರ ಪರಿಣಾಮವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಗಿಂತ ಬ್ರಿಟೀಷರು ಕೊಟ್ಟ ಭಿನ್ನವಾದ ಶಿಕ್ಷಣ ವ್ಯವಸ್ಥೆ ಭಾರತೀಯ ಮನಸ್ಸುಗಳಲ್ಲಿ ಹೊಸ ದೃಷ್ಟಿಕೋನ ಮೂಡಲು ಕಾರಣವಾಯಿತು.

ಭಾರತದಲ್ಲಿ ದೇಶೀಯವಾದಂತಹ ಮಠಾಶ್ರಮಗಳ ಶಿಕ್ಷಣ ವ್ಯವಸ್ಥೆ ಸಡಿಲಗೊಂಡು ಇಂಗ್ಲೀಷ್ ಶಿಕ್ಷಣ ಕ್ರಮ ಜಾರಿಗೆ ಬಂದಿತು. ಇದರಿಂದಾಗಿ ಭಾರತೀಯ ಸಾಮಾಜಿಕ ಬದುಕಿನಲ್ಲಿ ಹೊಸ ವಿಚಾರ ಕ್ರಾಂತಿಯೊಂದು ತಳೆಯಿತು. ಎಲ್ಲರಿಗೂ ಸಮಾನ ಶಿಕ್ಷಣವೆಂಬ ಸರ್ವಶಿಕ್ಷಣಕ್ರಮ ತಂದುಕೊಟ್ಟ ಪ್ರಜ್ಞೆ ಮತ್ತು ಎಚ್ಚರಗಳು ಭಾರತೀಯರನ್ನು ಬದಲಾವಣೆಗೆ ಸಜ್ಜುಗೊಳಿಸಿದವರು. ಈ ವಸಾಹತುಶಾಯಿ ಜೊತೆಯಲ್ಲಿಯೇ ಬಂದ ಕೈಗಾರಿಕಾ ಕ್ರಾಂತಿಯಿಂದ ಔದ್ಯೋಗಿಕ ಕ್ರಾಂತಿಯಾಗಿ ಅದು ರೈತರನ್ನು ಬೀದಿಪಾಲು ಮಾಡಿತು. ಗ್ರಾಮ ಸಂಸ್ಕೃತಿ ಒಡೆದು ನಗರ ಸಂಸ್ಕೃತಿ ನಿರ್ಮಾಣ ಮಾಡಿತು ಎಂದೆಲ್ಲಾ ಏನೇ ವಾದಗಳನ್ನು ಹೂಡಿದರೂ ಆ ಶತಮಾನ ಅಭೂತಪೂರ್ವ ಬದಲಾವಣೆಗೆ ಕಾರಣವಾಯಿತು. ಈ ಹೊಸ ರೀತಿಯ ದೃಷ್ಟಿಕೋನದಿಂದ ಭಾರತೀಯ ಮನಸ್ಸು

ಹಿಂದಿನಂತೆ ಜಡವಾಗಿ ಕೂರದೆ ಹೊಸ ಆಯಾಮದ ದಾರಿಯನ್ನು ಕಂಡುಕೊಳ್ಳಲು ಸಿದ್ಧವಾಯಿತು. ಇದರ ಪರಿಣಾಮವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳು ಭಾರತೀಯರ ಅಲೋಚನೆಯನ್ನು ಮೀರಿ ಆಗತೊಡಗಿದವು. ಈ ಎಲ್ಲದರ ಬದಲಾವಣೆಯ ರೂಪವಾಗಿ ೨೦ನೇ ಶತಮಾನ ಕಂಗೊಳಿಸುತ್ತದೆ.

ಈ ಶತಮಾನವು ಭಾರತೀಯ ಸಾಹಿತ್ಯದ ಮಟ್ಟಿಗೆ ಹೊಸ ಒಲವುಗಳನ್ನು ರೂಪಿಸಿಕೊಂಡಂಥ ಸಂದರ್ಭ ಕನ್ನಡ ಸಾಹಿತ್ಯದ ಪಾಲಿಗಂತೂ ಇದು ಹೊಸ ಹುಟ್ಟಿನಯುಗ, ಅದು ತನ್ನ ಸ್ವರೂಪವನ್ನು ಹೊಸ ದೃಷ್ಟಿಕೋನಗಳ ಸಮೇತ ಪಡೆಯಲು ನೆರವು ಮಾಡಿತು. ಬಹುಪಾಲು ಛಂದೋಬದ್ಧವಾಗಿದ್ದ ಸಾಹಿತ್ಯ ಈ ಶತಮಾನದಲ್ಲಿ ಅದನ್ನು ಮೀರುವ ಹೊಸದನ್ನು ಕಟ್ಟುವ ಕನಸಿಗೆ ನಾಂದಿ ಹಾಡಿತು. ಹೆಚ್ಚಿನದಾಗಿ ಚಂಪೂ, ರಗಳೆ, ಷಟ್ಪದಿ ಗದ್ಯ? ಇತ್ಯಾದಿಗಳ ಕಟುನಿಬಂಧನೆಗೆ ತೊಡಗಿದ್ದ ಕನ್ನಡ ಸಾಹಿತ್ಯ ಇವುಗಳ ಬಿಗಿ ಕಟ್ಟಿನಿಂದ ಬಿಡಿಸಿಕೊಳ್ಳಲು ಹಿಂದಿನಿಂದಲೂ ಹೆಣಗುತ್ತಲೇ ಬಂದಿತ್ತು. ಈ ಬಿಗಿ ಸಡಿಲವಾಗಿ ಹೊಸ ಹೊಸ ಪ್ರಕಾರಗಳಿಗೆ ಹೊಸ ಅಭಿವ್ಯಕ್ತಿ ಕ್ರಮಕ್ಕೆ ಪೂರಕ ವಾತಾವರಣವನ್ನು ೨೦ನೇ ಶತಮಾನದ ಆಲೋಚನೆ ರೂಪಿಸಿಕೊಟ್ಟಿತು. ಇದರ ಫಲವಾಗಿ ಕೇವಲ ಕಾವ್ಯ, ಗದ್ಯ, ನಾಟಕಗಳ ಸಾಹಿತ್ಯವಾಗಿದ್ದ ಕನ್ನಡ ಸಾಹಿತ್ಯ ಹಲವು ಮಗ್ಗಲುಗಳನ್ನು ಚಾಚಿತು. ಕವಿತೆ, ಕತೆ, ಕಾದಂಬರಿ, ಸಣ್ಣಕಥೆ, ಲಲಿತ ಪ್ರಬಂಧ, ಅಸಂಗತ ನಾಟಕ, ಮಹಾಕಾವ್ಯ, ಗೀತನಾಟಕ, ಪ್ರವಾಸ ಸಾಹಿತ್ಯ, ಪುಸ್ತಕ ವಿಮರ್ಶೆ, ಹನಿಗವಿತೆ, ಚುಟುಕು, ಸಾಹಿತ್ಯ ವಿಮೆರ್ಶೆ, ಅಂಕಣಬರಹ, ಮಕ್ಕಳ ಸಾಹಿತ್ಯ ಮುಂತಾದ ಹೊಸ ಪ್ರಕಾರಗಳ ಉದಯಕ್ಕೆ ಈ ಶತಮಾನ ಕಾರಣವಾಯಿತು. ಈ ಶತಮಾನ ರೂಪಿಸಿಕೊಟ್ಟ ಆಧುನಿಕ ಶಿಕ್ಷಣ ಕ್ರಮ, ಹೊಸ ಆಲೋಚನೆ, ಪಾಶ್ಚಾತ್ಯರಿಂದ ಹರಿದ ಆಧುನಿಕ ಚಿಂತನೆ ಇವುಗಳೆಲ್ಲದುದರ ಫಲವಾಗಿಯೇ ಕನ್ನಡ ಸಾಹಿತ್ಯ ಹೊಸ ಆಯಾಮವನ್ನು ಪಡೆಯಿತು.

ಅಧ್ಯಯನದ ಉದ್ದೇಶ

ನಿರ್ಲಕ್ಷಿತ ಸಂಗತಿಗಳು ಪ್ರಮುಖ ಅಧ್ಯಯನ ವಸ್ತುವಾಗಿ ರೂಪುಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಪ್ರಸ್ತುತ 'ಪುಸ್ತಕವಿಮರ್ಶೆ'ಯನ್ನು ನಿರ್ಲಕ್ಷಿತ ಸಂಗತಿಗಳ ಅಧ್ಯಯನದ ಭಾಗವಾಗಿಯೇ ಅಧ್ಯಯನ ಮಾಡಲಾಗುತ್ತದೆ. ಈ ಹಿಂದೆ ಗುರುತಿಸಿರುವಂತೆ ಸಾಹಿತ್ಯದಲ್ಲಿ ಕಂಡುಬರುವ ಶ್ರೇಣೀಕರಣ ವ್ಯವಸ್ಥೆಯ ಘಟಕವಾಗಿ ಈ ಅಧ್ಯಯನ ಆರಂಭವಾಗುತ್ತದೆ. ಸಾಹಿತ್ಯದ ಪ್ರಕಾರದಲ್ಲಿ ಮಾಡುವ ತಾರತಮ್ಯದ ಫಲವಾಗಿಯೇ ಈ ಅಧ್ಯಯನ ಬೆಳೆದಿದೆ. ಸಾಹಿತ್ಯದ ಪ್ರಕಾರಗಳನ್ನು ಪಟ್ಟಿ ಮಾಡುವಾಗಲೇ ಶ್ರೇಣಿಯ ರೂಪದಲ್ಲಿ 'ಕಾವ್ಯ'ವೇ ಮೊದಲ ಸ್ಥಾನದಲ್ಲಿ ಬಂದು ನಿಲ್ಲುತ್ತದೆ. ಅನಂತರ ಉಳಿದ ಕತೆ, ಕಾದಂಬರಿ ಹೀಗೆ ಬೆಳೆಯುತ್ತಾ ವಿಮರ್ಶೆ ಸೃಜನೇತರವಾದುದೆಂದು

ಕೊನೆಗೆ ಸೇರಿಸುವ ಪರಿಪಾಟವಿದೆ. ವಿಮರ್ಶೆಯ ಸ್ಥಾನವೇ ಈ ಮಟ್ಟದಲ್ಲಿದೆ. ಇನ್ನು 'ಪುಸ್ತಕ ವಿಮರ್ಶೆ' ಇದಕ್ಕೂ ಹಿಂದೆ ಉಳಿದದ್ದೂ ಅತ್ಯಂತ ಕಡೆಗಣಿಸಲ್ಪಟ್ಟ ಪ್ರಕಾರವಾಗಿದೆ. ಈ ಕಾರಣದಿಂದ ಪುಸ್ತಕ ವಿಮರ್ಶೆಯನ್ನು ಅಧ್ಯಯನದ ವಸ್ತುವಾಗಿ ಆರಿಸಿಕೊಳ್ಳಲು ಸಾಂಸ್ಕೃತಿಕ ವಾತಾವರಣದಲ್ಲಿನ ಶ್ರೇಣೀಕರಣ ವ್ಯವಸ್ಥೆಯ ಬಗೆಗಿನ ಪ್ರಶ್ನೆಯು ಕಾರಣವಾಗಿದೆ. ಕೆಲವು ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಯನ್ನು ಪುಸ್ತಕ ವಿಮರ್ಶೆಯೆಂದು ಕರೆಯದೆ 'ಪುಸ್ತಕ ಪರಿಚಯ' ಎಂಬ ಹೆಸರಿನಲ್ಲಿಯೇ ಕರೆಯಲಾಗುತ್ತಿದೆ. ಹಾಗಾಗಿ ಈ ಸಂದರ್ಭದಲ್ಲಿ ವಿಮರ್ಶಕರು ಅಧ್ಯಯನದ ಅವಶ್ಯಕತೆ ಅದನ್ನು ಪುನರ್ ವಿಮರ್ಶಿಸುವ ಕಾರ್ಯ ನಡೆಯಬೇಕಾಗಿದೆ. ಆ ಮೂಲಕ ವಿಮರ್ಶೆಯ ಸ್ವರೂಪವನ್ನು ಅಧ್ಯಯನ ಮಾಡುವುದರ ಮೂಲಕ ವಿಮರ್ಶೆಯ ಮಹತ್ವವನ್ನು ಮತ್ತು ವಿಮರ್ಶಾ ಬೆಳವಣಿಗೆಯ ಹಂತಗಳ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ತುಂಬಾ ವಿಶಾಲವಾಗಿರುವುದರಿಂದ ಮತ್ತು ನನ್ನ ಎಂ.ಫಿಲ್ ಸಂಶೋಧನಾ ಪ್ರಬಂಧದ ಕಿರು ದೃಷ್ಟಿಯಿಂದ ಮೂರು ಜನರ ಪುಸ್ತಕ ವಿಮರ್ಶೆಗಳ ಒಂದೊಂದು ಪುಸ್ತಕವನ್ನು ಆಯ್ಕೆ ಮಾಡಿಕೊಂಡು ಮತ್ತು ಅದರ ಜೊತೆಗೆ ಮೂರು ಜನ ವಿಮರ್ಶಕರ ಚಿಂತನೆಗಳನ್ನು ಕುರಿತು ತೌಲನಿಕ ಅಧ್ಯಯನವನ್ನು ಸ್ಥೂಲವಾಗಿ ಮಾಡಲಾಗುವುದು.

ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ 'ಕವನಸಂಕಲನ' ಕತೆ, ಕಾದಂಬರಿ, ಆತ್ಮಚರಿತ್ರೆ, ನಾಟಕ, ಲಲಿತಪ್ರಬಂಧ, ಸಾಹಿತ್ಯ ವಿಮರ್ಶೆಗಳ ಪುಸ್ತಕ ವಿಮರ್ಶೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಇದರಾಚೆಗೆ ಒಂದೊಂದು ಪ್ರಕಾರದ ಕೃತಿಗಳು ಪ್ರತ್ಯೇಕ ಅಧ್ಯಯನವನ್ನು ಬಯಸುವುದರಿಂದ ಅವುಗಳ ವಿಶ್ಲೇಷಣೆಗೆ ಇಲ್ಲಿ ಹೋಗಿಲ್ಲ. ಪರಿಸರ, ವೈದ್ಯಕೀಯ ಕ್ಷೇತ್ರ, ವಿಜ್ಞಾನ, ಆರ್ಥಿಕ, ರಾಜಕೀಯ, ಆಯುರ್ವೇದ ಇನ್ನೂ ಮುಂತಾದ ಕ್ಷೇತ್ರಗಳ ಕೃತಿಗಳ ವಿಮರ್ಶೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ ವಾಸ್ತವವಾಗಿ ವಿಭಿನ್ನ ರೂಪಗಳಲ್ಲಿರುವುದನ್ನು ಕಾಣಬಹುದು. ಮೇಲ್ನೋಟಕ್ಕೆ ಪುಸ್ತಕ ವಿಮರ್ಶೆ ಒಂದೇ ಎನಿಸಿದರೂ ಕ್ಷೇತ್ರಾನುಸಾರವಾಗಿ ಭಿನ್ನ ಸ್ವರೂಪವನ್ನು ಪಡೆದಿದೆ. ಹಾಗಾಗಿ ಈ ಮೇಲಿನ ಚಿಂತಕರ ಮೂರು ಪುಸ್ತಕಗಳ ಪುಸ್ತಕ ವಿಮರ್ಶೆಗೆ ಹೆಚ್ಚು ಗಮನ ಕೊಡಲಾಗಿದೆ.

ಅಧ್ಯಯನದ ವೈಧಾನಿಕತೆ

- ಕೃತಿಕೇಂದ್ರಿತವಾದ ವಿಮರ್ಶೆ ಮತ್ತು ಕರ್ತೃಕೇಂದ್ರಿತವಾದ ವಿಮರ್ಶೆಗಳ ಹಿನ್ನೆಲೆಯಲ್ಲಿ ಮೂವರು ಬರಹಗಾರರಾದ ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಮಣ್ಯ ಮತ್ತು ರಹಮತ್ ತರೀಕೆರೆ ಅವರ ಪುಸ್ತಕಗಳನ್ನು ಕುರಿತು ವಿಮರ್ಶೆ ಮಾಡಿರುವ ಇವರ

ಒಂದೊಂದು ಪುಸ್ತಕಗಳಾದ ಪುಸ್ತಕಪ್ರೀತಿ, ಸಾಹಿತ್ಯಸಂಸ್ಕೃತಿ, ಚಿಂತನೆಯಪಾಡು ಅಧ್ಯಯನ ಮಾಡಲಾಗುವುದು.

- ಈ ಪುಸ್ತಕಗಳನ್ನು ಓದಿ ಗ್ರಹಿಸಿ ಸಾಮಾನ್ಯವಾದ ಮತ್ತು ಭಿನ್ನ ಅಂಶಗಳನ್ನು ಸಂಗ್ರಹಿಸಿ ಅವುಗಳಲ್ಲಿ ಅಡಗಿರುವ ಸಾಹಿತ್ಯ ಚಿಂತನೆಯನ್ನು ಗುರುತಿಸಲಾಗುವುದು.
- ಈ ಮೂರು ಪುಸ್ತಕಗಳಲ್ಲಿನ ಸಮಾನ ಮತ್ತು ಭಿನ್ನ ಅಂಶಗಳನ್ನು ಗುರುತಿಸಿ ಅಂತಹ ಹತ್ತಾರು ಅಂಶಗಳನ್ನು ಶೋಧಿಸಿ ವಿವರಿಸುವ, ವಿಶ್ಲೇಷಿಸುವ, ವ್ಯಾಖ್ಯಾನಿಸುವ ಪ್ರಯತ್ನ ಇಲ್ಲಿ ಮಾಡಲಾಗುವುದು.

ಅಧ್ಯಾಯ ೨

ಕನ್ನಡದಲ್ಲಿ ಪುಸ್ತಕ ವಿಮರ್ಶೆ ಪರಂಪರೆ

ಅಧ್ಯಾಯ ೨

ಕನ್ನಡದಲ್ಲಿ ಪುಸ್ತಕ ವಿಮರ್ಶೆ ಪರಂಪರೆ

ಹೊಸಗನ್ನಡದ ಅರುಣೋದಯದಿಂದ ಕನ್ನಡದಲ್ಲಿ ವಿಮರ್ಶೆಯು ಒಂದು ರೂಪ ಪಡೆಯಲಾರಂಬಿಸಿತು. ಆಗ ವಿಮರ್ಶೆಯ ವಿವಿಧ ಬಗೆಗಳಲ್ಲಿ 'ಪುಸ್ತಕ ವಿಮರ್ಶೆ'ಯೂ ಒಂದಾಗಿತ್ತು. ಆದರೆ ಆಗ ಅದು ಕೃತಿ ಪರಿಚಯವಾಗಿಯಷ್ಟೇ ಉಳಿದಿತ್ತು. 'ಪ್ರಬುದ್ಧ ಕರ್ನಾಟಕ', 'ಜಯಂತಿ', 'ಜೀವನ', 'ಜಯಕರ್ನಾಟಕ', 'ವಾಗ್ಭೂಷಣ', 'ಸಾಹಿತ್ಯ ಪರಿಷತ್ಪತ್ರಿಕೆ', 'ಸುವಾಸಿನಿ', 'ಶ್ರೀಕೃಷ್ಣಸೂಕ್ತಿ', 'ಸ್ವದೇಶಾಭಿಮಾನಿ'ಗಳಂತಹ ೨೦ನೇ ಶತಮಾನದ ಮೊದಲ ಹಂತದ ಪತ್ರಿಕೆಗಳ ಮೊದಲ ಸಂಚಿಕೆಗಳಲ್ಲಿನ 'ಪುಸ್ತಕ ವಿಮರ್ಶೆ'ಗಳನ್ನು ಗಮನಿಸಿದರೆ ಅವು ಹೆಸರಿಗೆ ಮಾತ್ರ ಪುಸ್ತಕ ವಿಮರ್ಶೆಯಾಗಿದ್ದವು. ಅವುಗಳಲ್ಲಿ ಕೃತಿ ಕೇವಲ ಪರಿಚಯದ ರೂಪದಲ್ಲೇ ಪ್ರಕಟವಾಗುತ್ತಿತ್ತು. ಇದಕ್ಕೆ ಕಾರಣ ಹಿಂದಿನ ಸಂಪ್ರದಾಯ ಮತ್ತು ಹೊಸ ವಿಮರ್ಶೆಯ ಚಿಂತನೆ ಇವೆರಡನ್ನೂ ಕೂಡಿಕೊಳ್ಳುವ ಸಂದರ್ಭವಾಗಿರುವುದು ಎನಿಸುತ್ತದೆ. ಆದರೂ ಆಗ ಬರುತ್ತಿದ್ದ 'ಪುಸ್ತಕ ವಿಮರ್ಶೆ', ವಿಮರ್ಶೆಗಿಂತ ಭಿನ್ನವಾಗಿತ್ತು. ಹಿಂದೆ ಹಳೆಗನ್ನಡ ಕವಿಗಳೆಲ್ಲಾ ಅನುಸರಿಸಿಕೊಂಡು ಬಂದ ಒಂದು ಸಂಪ್ರದಾಯವೆಂದರೆ ಕಾವ್ಯ ಪ್ರಾರಂಭದಲ್ಲಿ ಇತರ ಅಂಶಗಳ ಜೊತೆ ಮಹಾಕವಿ ಪ್ರಶಂಸೆ, ಕುಕವಿನಿಂದೆಗಳ ಭಾಗಗಳನ್ನು ಸೇರಿಸುತ್ತಿದ್ದುದು, ಮಹಾಕವಿಗಳನ್ನು ಹೊಗಳಿ, ಅವರ ಆಶೀರ್ವಾದಕ್ಕಾಗಿ ಬೇಡಿ ಅವರ ಮಾರ್ಗದಲ್ಲಿ ತಾನು ನಡೆಯುವನೆಂದು ಸಂಕಲ್ಪಿಸಿಕೊಳ್ಳುವ ಕವಿ ತನಗೆ ಪ್ರಿಯರಾದ ಅನೇಕ ಹಿಂದಿನ ಕವಿಗಳನ್ನು ಹೆಸರಿಸಿ ಗೌರವ ಸೂಚಿಸುತ್ತಿದ್ದರು. ಅದರಲ್ಲಿ ಕೆಲವರ ವಿಶೇಷ ಗುಣಗಳನ್ನು ಸ್ತುತಿಸುವ ಪರಿಪಾಠವೂ ಇತ್ತು. 'ಪಂಪನದೇಸಿ'ಯನ್ನು ನಾಗಚಂದ್ರನ 'ಕವಿತಾ ವಿದಗ್ಧಮತಿ', 'ಕಾವ್ಯ ಬರೆಯುವ ಹರಿಹರನ ಶಕ್ತಿ' ಇಂತಹ ಹಲವಾರು ಮಾತುಗಳನ್ನು ಉದ್ಧರಿಸಬಹುದು.

"ಈ ಶತಮಾನದ ಪ್ರಾರಂಭದಲ್ಲಿ ಕನ್ನಡದ ಶ್ರೇಷ್ಠ ವಿದ್ವಾಂಸರು ಹಳೆಗನ್ನಡ ಕಾವ್ಯಗಳನ್ನು ಸಂಪಾದನೆ ಮಾಡಿ ಪ್ರಕಟಿಸುವ ರೂಪದಲ್ಲಿ ಕೆಲವನ್ನು ಸಂಗ್ರಹಿಸುವ ರೀತಿಯಲ್ಲಿ ಅವುಗಳಿಗೆ ಉಪೋದ್ಘಾತ ಬರೆದು ಆ ಕವಿಗಳ ವಿಶಿಷ್ಟತೆಗಳನ್ನು ವಿವರಿಸುವ ಬಗೆಯಲ್ಲಿ ಅಭಿರುಚಿಯನ್ನು ತಿದ್ದುವ ಕೆಲಸ ಮಾಡಿದರು. ನಂತರ ಆ ಮುಂದಿನ ಪೀಳಿಗೆ ಕಾವ್ಯದ ಭಾಗವೊಂದನ್ನು, ಸನ್ನಿವೇಶವೊಂದನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಇತರರಿಗೆ ದರ್ಶನ ಮಾಡಿಸುವ ರೂಢಿಯನ್ನು ತಂದರು. ಕನ್ನಡದಲ್ಲಿ 'ಶ್ರೀ' ಅವರು ಕಾವ್ಯಗಳ ಸ್ವಾರಸ್ಯವನ್ನು ವಿವರಿಸುವ ಪ್ರಯತ್ನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮಾಡಲು ಯತ್ನಿಸಿದರು. ನಂತರ ಅನೇಕ ಸಾಹಿತಿಗಳು ಆ ಕ್ಷೇತ್ರದಲ್ಲಿ ಕೃಷಿ ನಡೆಸಿ 'ವಿಮರ್ಶೆ' ಎಂಬ ಸ್ವತಂತ್ರ ಪ್ರಕಾರ ಅಸ್ತಿತ್ವಕ್ಕೆ ಬರಲು ಕಾರಣರಾದರು."[೧]

ಈ ೨೦ನೇ ಶತಮಾನದ ಮೊದಲ ದಶಕದಲ್ಲಿ ಓದಿಗೆ ತೊಡಗಿಸಿಕೊಂಡವರಿಗೆ ಎರಡು ರೀತಿಯ ಜವಾಬ್ದಾರಿಗಳಿದ್ದವು. ೧. ಹೊಸ ಸಾಹಿತ್ಯ ಸೃಷ್ಟಿಗೆ ಪ್ರೇರೇಪಿಸುವುದು, ೨. ಹಿಂದಿನ ಸಾಹಿತ್ಯವನ್ನು ಪುನರ್ ಅವಲೋಕಿಸಿ ಅದರಿಂದ ಪ್ರೇರಣೆಯನ್ನು ಪಡೆಯುವುದು. ಹೀಗೆ ಹಿಂದಿನ ಸಾಹಿತ್ಯವನ್ನು ಪುನರ್ ವಿಮರ್ಶೆಗೊಳಪಡಿಸುವುದಕ್ಕಿಂತ ಮುಂಚೆ ಹಳೆಗನ್ನಡ ಸಾಹಿತ್ಯದ ಶೋಧನೆಯನ್ನು ಪ್ರಾರಂಭಿಸಿದರು. ಹೀಗಾಗಿ ಹಳೆಗನ್ನಡ ಸಾಹಿತ್ಯದ ಒಂದೊಂದು ಕೃತಿಗಳನ್ನು ಶೋಧಿಸಿ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದರು. ಹಳೆಗನ್ನಡ ಕೃತಿಗಳನ್ನು ಶೋಧಿಸಿ ಅವುಗಳನ್ನು ಓದಿ ವಿಶ್ಲೇಷಿಸುವುದು ಆ ಕಾಲದ ವಿದ್ವಾಂಸರ ಮಹತ್ತರ ಜವಾಬ್ದಾರಿಯಾಗಿತ್ತು. ಹೀಗಾಗಿ ಅವರು ಹಳೆಕೃತಿಗಳ ಓದಿನಲ್ಲಿ ತೊಡಗಿಸಿಕೊಂಡಾಗ ತನಗೆ ತಾನೇ ಕೃತಿಯ ಬಗೆಗೆ ವಿಮರ್ಶೆ ರೂಪುಗೊಳ್ಳುತ್ತಿತ್ತು. ಆ ಮುಖೇನ ಪುಸ್ತಕ ವಿಮರ್ಶೆಯ ಹುಟ್ಟುವಿಕೆಗೆ ಅಪೇಕ್ಷಣ್ಯವಾಗಿ ಈ ವಿದ್ವಾಂಸರು ಕಾರಣರಾದರು.

ಗ್ರಂಥ ಸಂಪಾದನೆಯಲ್ಲಿ 'ಕೃತಿ ವಿಮರ್ಶೆ' ಸಂಪಾದಕರ ಕರ್ತವ್ಯಗಳಲ್ಲಿ ಒಂದಾಗಿದ್ದುದರಿಂದ ಅಲ್ಲಿ ಪುಸ್ತಕ ವಿಮರ್ಶೆಯ ಮೊದಲ ಹೆಜ್ಜೆಗಳನ್ನು ಗುರುತಿಸಬಹುದು. ಅಲ್ಲಿ ಕವಿಯ ಕಾಲ, ದೇಶ, ಕೃತಿಯ ವಿವರಗಳನ್ನು ಹೇಳುತ್ತಿದ್ದರೂ ವಿಮರ್ಶೆಯನ್ನು ಮಾಡುತ್ತಿದ್ದೇವೆ ಎಂಬ ಅರಿವು ಸಂಪಾದಕರಿಗಿರಲಿಲ್ಲ. ಸಂಪಾದನೆಯ ಕೊನೆಯ ಘಟ್ಟದಲ್ಲಿ ಆ ಕೃತಿ ಓದಿ ತಾವು ಅದರಿಂದ ಅನುಭವಿಸಿದ ಸಂತೋಷ ಮತ್ತು ತಿಳಿದುಕೊಂಡ ವಿಚಾರ, ವಿವರಗಳನ್ನು 'ಕೃತಿ ವಿಮರ್ಶೆ'ಯಲ್ಲಿ ನೀಡುತ್ತಿದ್ದರು. ಏಕೆಂದರೆ ಆ ಪುಸ್ತಕದ ಮೊದಲ ಓದುಗರು ಅವರಾಗಿದ್ದುದರಿಂದ ಆ ಕೃತಿಯ ಪರಿಚಯವನ್ನು ಮಾಡಿಕೊಡುವ ಅಗತ್ಯವಿತ್ತು. ಅಷ್ಟೇ ಅಲ್ಲ ಹಳೆಗನ್ನಡ ಕೃತಿಗಳನ್ನು ಪುನರ್ ಶೋಧಿಸಿ ಅವುಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಜವಾಬ್ದಾರಿಯೂ ಅವರ ಮೇಲಿತ್ತು. ಈ ಮೂಲಕ ಅವರು ಒಂದು ಬಗೆಯ 'ಪುಸ್ತಕ ವಿಮರ್ಶೆ'ಗೆ ಸುಗಮವಾದ ಹಾದಿ ಮಾಡಿಕೊಟ್ಟರು.

ಒಂದು ಕೃತಿಯ ಉನ್ನತಿ ಆ ಗ್ರಂಥವನ್ನು ಸಂಪಾದಿಸಿದ ಸಂಪಾದಕರಿಗೆ ಸವಾಲಾಗಿರುವ ಮತ್ತು ಮುಖ್ಯವಾದ ಕೆಲಸವಾಗಿರುತ್ತದೆ. ಒಂದು ಕೃತಿಯನ್ನು ಹಲವು ಹಸ್ತಪ್ರತಿಗಳಿಂದ ಕೇವಲ ಸಂಪಾದಿಸಿದ ತಕ್ಷಣ ಸಂಪಾಕದರ ಕೆಲಸ ಪೂರ್ಣಗೊಳ್ಳುವುದಿಲ್ಲ. ಆ ಕೃತಿಯ ವಿಮರ್ಶೆ ಸಂಪಾದಕರ ಮೊದಲ ಪ್ರತಿಕ್ರಿಯೆಯೂ ಆಗಿರುತ್ತದೆ. ಕೃತಿಯೊಂದು ಸಂಪಾದಿಸಿದ ಕಾಲಕ್ಕೆ ಯಾವ ಬಗೆಯ ಸಾಹಿತ್ಯಕ ಮೌಲ್ಯವನ್ನು ಒಳಗೊಂಡಿದೆ ಎಂಬುದು ಆ ಕೃತಿ ವಿಮರ್ಶೆಯಿಂದ ಖಚಿತವಾಗುತ್ತದೆ. ಆದ್ದರಿಂದ ಕೃತಿ ವಿಮರ್ಶೆ ಸಂಪಾದಕ ಕಾರ್ಯದಲ್ಲಿ ಬಹಳ ಮುಖ್ಯವಾದುದು. ಇದರಿಂದ ಸಹೃದಯರಿಗೂ ಕೃತಿಯನ್ನು ಹಲವು ಕಾರಣಗಳಿಗಾಗಿ ವ್ಯಾಸಂಗ ಮಾಡುವ ಸಂಶೋಧಕರಿಗೂ ಸಹಾಯವಾಗುತ್ತದೆ. ವಸ್ತು, ರಸ, ಶೈಲಿ, ಮತ್ತಿತರ ವಿಷಯಗಳನ್ನು ಅವಲಂಬಿಸಿ ಸಂಪಾದಕರು ಮಾಡುವ 'ಕೃತಿ ವಿಮರ್ಶೆ' ಕೃತಿಯ ಸಾಹಿತ್ಯ ಅನನ್ಯತೆಯನ್ನು ಸಾಬೀತುಪಡಿಸುವ ಹಿನ್ನೆಲೆಯಲ್ಲಿ ಮುಖ್ಯವಾದ ಕೆಲಸವಾಗಿರುತ್ತದೆ.

ಕೃತಿಯ ಸಂಪಾದಕರು ತಾವು ಸಂಪಾದಿಸಿದ ಕೃತಿಯನ್ನು ಕುರಿತು ವಿವರವಾಗಿ ವಿಶ್ಲೇಷಣೆ ನಡೆಸಬೇಕಾಗುತ್ತದೆ. ಇದು ಓದುಗರಿಗೆ ತುಂಬಾ ಉಪಯುಕ್ತವಾದ ಅಂಶವಾಗಿರುತ್ತದೆ. ಕೃತಿಯ ಎಲ್ಲಾ ಮಗ್ಗಲುಗಳನ್ನು ಬಲ್ಲ ಸಂಪಾದಕರು ಕೃತಿ ವಿಶ್ಲೇಷಣೆ ಮಾಡಿದ್ದಲ್ಲಿ ಹೆಚ್ಚು ಸತ್ವಯುತವೂ, ಮೌಲ್ಯಯುತವೂ ಆದ ಕೆಲಸ ನಡೆದಂತಾಗುತ್ತದೆ. ಕೃತಿಯ ಸಂಪಾದನೆಯ ಹಲವು ಹೊಸತನಗಳು ಕೃತಿಯ ವಿಶ್ಲೇಷಣೆಗೆ ಮಾರ್ಗದರ್ಶಿಯಾಗಿರುವುದರಿಂದ ಸಂಪಾದಿತ ಕೃತಿಯನ್ನು ಕುರಿತು ಮಾಡುವ ವಿಶ್ಲೇಷಣೆ ಬಹಳ ಮುಖ್ಯವಾದುದಾಗುತ್ತದೆ.

ಒಂದು ಕೃತಿಯನ್ನು ವಿಮರ್ಶೆ ಮಾಡಲು ಪ್ರವೇಶ ಮಾಡುವುದಕ್ಕೆ ಪುಸ್ತಕ ವಿಮರ್ಶಕರು ಹಿಂದಿನಿಂದಲೂ ಕೆಲವು ತಾತ್ವಿಕವಾದ ಸ್ವರೂಪಗಳನ್ನಿಟ್ಟುಕೊಂಡೇ ಪ್ರವೇಶಿಸಿದ್ದಾರೆ. ನವೋದಯ ಸಂದರ್ಭದಲ್ಲಿ ಕೃತಿ ವಿಮರ್ಶೆಗೆ ಮುನ್ನ ಸಾಹಿತ್ಯದ ಸ್ವರೂಪವನ್ನು ಹೇಳುತ್ತಾ ಅದು ಹೇಗಿರಬೇಕು ಎಂಬುದನ್ನು ಚರ್ಚಿಸುತ್ತಾ ಪುಸ್ತಕ ವಿಮರ್ಶಕರು ಕೃತಿ ವಿಮರ್ಶೆಗೆ ತೊಡಗುತ್ತಿದ್ದರು. ನವ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶಿಸಿ ಕೃತಿ ಪ್ರವೇಶಕ್ಕೆ ಮೊದಲು ಸಾಹಿತ್ಯಿಕ ತತ್ವಗಳನ್ನು ಚರ್ಚೆ ಮಾಡುತ್ತಾ ಕೃತಿಯ ವಿಮರ್ಶಾ ಚೌಕಟ್ಟನ್ನು ಮೊದಲೇ ನಿರ್ಮಿಸಿಕೊಳ್ಳುತ್ತಿದ್ದರು? ಬಂಡಾಯ ವಿಮರ್ಶಕರು ಮೊದಮೊದಲು ಕೃತಿ ವಿಮರ್ಶೆಯನ್ನು ಕೈಗೆತ್ತಿಕೊಳ್ಳುವಾಗ ಸಮಾಜಶಾಸ್ತ್ರಜ್ಞರನ್ನು, ಮಾನವಶಾಸ್ತ್ರಜ್ಞರನ್ನು ಉಲ್ಲೇಖಿಸಿಕೊಂಡು ತಾತ್ವಿಕ ಪೀಠಿಕೆಯನ್ನು ಹಾಕಿಕೊಳ್ಳುತ್ತಿದ್ದರು. ಕೆಲವೊಮ್ಮೆ ವಿಮರ್ಶೆಯ ಮಧ್ಯದಲ್ಲಿಯೇ ಸಾಹಿತ್ಯ ತತ್ವಗಳನ್ನು ಚರ್ಚೆ ಮಾಡಿದರು ಮತ್ತು ಕೆಲವು ಕಡೆ ರಾಜಕೀಯ ಸಾಂಸ್ಕೃತಿಕ ವಿಚಾರಗಳನ್ನು ಹೇಳುತ್ತಾ ಕೃತಿಯ ವಿಮರ್ಶೆಗೆ ತೊಡಗುತ್ತಿದ್ದರು. ಪುಸ್ತಕ ವಿಮರ್ಶೆಯ ಚಾರಿತ್ರಿಕ ಸ್ವರೂಪದ ವಿವೇಚನೆಯನ್ನು ಸ್ಥೂಲವಾಗಿ ಅಧ್ಯಯನದ ದೃಷ್ಟಿಯಿಂದ ಈ ರೀತಿ ವಿಭಾಗ ಕ್ರಮವನ್ನು ಮಾಡಿಕೊಳ್ಳಲಾಗಿದೆ.

೧. ರಸಪ್ರಧಾನ ಪುಸ್ತಕ ವಿಮರ್ಶೆ
೨. ರೂಪ ಪ್ರಧಾನ ಪುಸ್ತಕ ವಿಮರ್ಶೆ
೩. ಆಶಯ ಪ್ರಧಾನ ಪುಸ್ತಕ ವಿಮರ್ಶೆ

೧. ರಸಪ್ರಧಾನ ಪುಸ್ತಕ ವಿಮರ್ಶೆ

೨೦ನೇ ಶತಮಾನದ ಪುಸ್ತಕ ವಿಮರ್ಶೆಯನ್ನು (ಪ್ರಸ್ತಾವನೆಯೇ ವಿಮರ್ಶೆಯಾಗಿತ್ತು), ಗಮನಿಸಿದಾಗ ಗ್ರಂಥ ಸಂಪಾದನೆಯಲ್ಲಿ ಪುಸ್ತಕ ಪರಿಚಯವಿದ್ದುದು ಹೊಸಗನ್ನಡದ ಒತ್ತಾಸೆಗಳಿಗೆ ತೆರೆದುಕೊಳ್ಳುತ್ತಾ ಹೊಸ ರೂಪ ಪಡೆಯಲಾರಂಭಿಸಿತು. ಆಗ ಮಾಸ್ತಿ ಗುರುತಿಸುವಂತೆ 'ವಿಮರ್ಶೆ ಪದವೇ ನಮಗೆ ಹೊಸದು (ವಿಮರ್ಶೆ ಭಾಗ–೧), ಎಂದು ಹೇಳುತ್ತಾ ವಿಮರ್ಶಾ ಪಂಥಕ್ಕೆ ಪೀಠಿಕೆ ಹಾಕಿದರು. ಅವರು ತಿರುಮಲಾಂಬರವರ ಕಾದಂಬರಿಯನ್ನು ವಿಮರ್ಶಿಸಿದ್ದು, ಮೊದಲ ಕೃತಿನಿಷ್ಠ ವಿಮರ್ಶೆಯಾಗಿತ್ತು. ಅವರು ಈ ವಿಮರ್ಶೆಯಲ್ಲಿ ನವಲ್ಲು ಮತ್ತು ರೋಮಾನ್ಸ್ ಪ್ರಕಾರಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಿ ನವಲ್ಲು ಎನ್ನುವ ವಾಸ್ತವಿಕ ಪ್ರಕಾರದ ಲಕ್ಷಣಗಳ ಬೆಳಕಿನಲ್ಲಿ ತಿರುಮಲಾಂಬರ ಕಾದಂಬರಿಗಳ ಲೋಪದೋಷಗಳನ್ನು ಎತ್ತಿ ತೋರಿಸುತ್ತಾರೆ. ಹೊಸದಾಗಿ ಬರೆಯುತ್ತಿದ್ದ ತಿರುಮಲಾಂಬರ ಈ ಕಾದಂಬರಿ ಪ್ರಕಾರವು ನಮ್ಮ ಕನ್ನಡದ ಸಂಪ್ರದಾಯವನ್ನು ಮೀರಿದಂತೆ, ಅಲ್ಲದೇ ಯಾರೂ ಬೇಕಾದರೂ ಮನೆಯಲ್ಲಿ ಕುಳಿತು ಬರೆಯಬಹುದೆಂದು ಮಾಸ್ತಿಯವರು ಭಾವಿಸಿದರು. ಅದರಲ್ಲಿ ಮಾಸ್ತಿಯವರು ಕೃತಿಯಲ್ಲಿನ ವಿವರಗಳನ್ನು ಲೆಕ್ಚರ್‌ಗಳೆಂದು, ಪಾತ್ರಗಳು ಲೆಕ್ಚರ್ ಕೊಡುತ್ತಿವೆಯೇ ಹೊರತು ಅನುಭವವನ್ನು ಹೇಳುವುದಿಲ್ಲವೆಂದು ತಿರುಮಲಾಂಬರ ಕೃತಿಯನ್ನು ಕಟುವಾಗಿ ವಿಮರ್ಶಿಸಿದರು. ಒಂದು ಸ್ತ್ರೀ ಕಾದಂಬರಿಯನ್ನು ಪುರುಷ ಪ್ರಧಾನ ಸಮಾಜದಲ್ಲಿಟ್ಟು ವ್ಯಾಖ್ಯಾನಿಸಿದ್ದು ಒಂದು ರೀತಿಯಾದರೆ, ಸ್ತ್ರೀ ಬರೆಯುತ್ತಿರುವುದನ್ನು ಗಮನಿಸಿ ಲೇಖಕಿ ಅನುಭವದಿಂದ ಪಾಕಗೊಂಡಿಲ್ಲ ಎಂಬುದು ಇನ್ನೊಂದು ರೀತಿಯ ನಿಲುವು ಮಾಸ್ತಿಯವರದ್ದಾಗಿತ್ತು. ಸಾಹಿತ್ಯ ವಿಮರ್ಶೆ ಮತ್ತು ಪುಸ್ತಕ ವಿಮರ್ಶೆಯ ಅಧ್ಯಯನದ ಸಂದರ್ಭದಲ್ಲಿ ಮಾಸ್ತಿಯವರು ತಿರುಮಲಾಂಬ ಕೃತಿ ಬಗ್ಗೆ ಮಾಡಿದ ವಿಮರ್ಶೆ ತುಂಬಾ ಮುಖ್ಯವಾಗುತ್ತದೆ. ಅವರು ಆಗ ಬರುತ್ತಿದ್ದ ಸಾಹಿತ್ಯ ಕೃತಿಗಳ ಬಗೆಗೆ ಇಟ್ಟುಕೊಂಡ ನಿಲುವನ್ನು ಹೀಗೆ ನೋಡಬಹುದು.

"ಸಾಹಿತ್ಯವು ಉದ್ದೇಶ ಆಶಯಗಳಲ್ಲಿ ಬಹುಮುಖವಾದರೆ, ಇಂಥ ವಿಮರ್ಶೆಯು ಅವಶ್ಯಕವಾಗುತ್ತದೆ. ಹಿಂದೆ ಒಬ್ಬರು ಕಲಿಯುತ್ತಿದ್ದ ಕಡೆ ಈಗ ನಲವತ್ತು ಜನ ಅಕ್ಷರವನ್ನು ಕಲಿಯುತ್ತಿದ್ದಾರೆ. ಇದರಿಂದ ಬರೆಯುವ ಜನರ ಸಂಖ್ಯೆಯೂ ಹೆಚ್ಚಿದೆ, ಬರೆಯುವ ಪುಸ್ತಕಗಳ ಸಂಖ್ಯೆಯೂ ಹೆಚ್ಚಿದೆ. ಈ ಕಾರಣಗಳಿಂದ ಒಳ್ಳೆಯ ಪುಸ್ತಕ ಇದು, ಇದು ಒಳ್ಳೆಯದಲ್ಲ ಎಂದು

ನಿರ್ಧರಿಸುವುದೇ ಪ್ರಯಾಸವಾಗಿದೆ. ಅಲ್ಲದೇ ನಮ್ಮ ಜೀವನವು ಬಹುಮುಖವಾದಂತೆ ನಮ್ಮ ಸಾಹಿತ್ಯದ ಭಾಗಗಳೂ ಬಹುಮುಖವಾಗುತ್ತ ಬಂದಿವೆ. ಇವುಗಳನ್ನೆಲ್ಲ ಚರ್ಚೆಮಾಡಿ ಅವುಗಳ ಸಾಧುತ್ವವನ್ನು ನಿರ್ಧರಿಸುವುದು ಅವಶ್ಯಕವಾಗಿದೆ. ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ ಎಂಬ ಮೇಲಿನ ಲೇಖನದಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಲೇ ಈಗ ಸಾಮಾನ್ಯವಾಗಿ ಜನರು ಕೊಳ್ಳಬಹುದಾದ ಪುಸ್ತಕಗಳಿಗೆ ಹತ್ತರಲ್ಲಿ ಒಂದು ಒಳ್ಳೆಯದಿರಬಹುದೋ ಇಲ್ಲವೋ ಸಂದೇಹ ಪಡಬಹುದಾಗಿದೆ . . . . . . ಇದೆಲ್ಲ ಕಾರಣಗಳಿಂದ ನಮ್ಮ ಸಾಹಿತ್ಯದಲ್ಲಿ ವಿಮರ್ಶೆಯು ಈಗ ವ್ಯಕ್ತ ಸ್ವರೂಪವನ್ನು ಹೊಂದಬೇಕಾಗಿದೆ”[೨] ಎಂದು ಸ್ಪಷ್ಟೀಕರಿಸುತ್ತಾರೆ.

ಮಾಸ್ತಿಯವರ ಈ ಆತಂಕವನ್ನು ಗಮನಿಸಿದರೆ ಇವರಿಗೆ ಕಾಡಿರುವುದು ಬರುತ್ತಿರುವ ಹಲವಾರು ಕೃತಿಗಳಲ್ಲಿ ಜನರು ಓದಬಹುದಾದ ಕೃತಿಗಳನ್ನು ಕಾಣುವುದು ವಿರಳ ಎಂಬ ಆತಂಕ ಇದಕ್ಕೆ ಆ ಹೊತ್ತಿನ ಸಾಂಸ್ಕೃತಿಕ ಕಾರಣಗಳು ಮುಖ್ಯವಾಗಿವೆ. ಆ ಹೊತ್ತಿಗೆ ಹೊಸದಾಗಿ ಇಂಗ್ಲೀಷ್ ಶಿಕ್ಷಣ ಕ್ರಮವು ಭಾರತಕ್ಕೆ ಆಗಮಿಸಿದ್ದರಿಂದ ಭಾರತದ ಗುರುಕುಲ ಪದ್ಧತಿಯ ಶಿಕ್ಷಣ ವ್ಯವಸ್ಥೆ ಪರಿವರ್ತನೆಯಾಗಿ ಎಲ್ಲರಿಗೂ ಶಿಕ್ಷಣ ದೊರೆಯುವ ಅವಕಾಶ ಒದಗಿಬಂತು. ಸಾಕ್ಷರತೆಯ ಬಗ್ಗೆ ಬಂದ ಹೊಸ ಅರಿವಿನಿಂದಾಗಿ ಕೇವಲ ಕೆಲವರ ಕೈಯಲ್ಲಿಯೇ ಇದ್ದ ಸಾಹಿತ್ಯ ಬಿಡುಗಡೆಗೊಂಡು ಎಲ್ಲರೂ ಪ್ರವೇಶಿಸಬಹುದಾದ ಮುಕ್ತ ಅವಕಾಶ ದೊರೆಯಿತು. ಇಲ್ಲಿ ಸ್ಪಷ್ಟವಾಗಿಯೇ ಮಾಸ್ತಿಯವರಿಗೆ ಆಧುನಿಕ ವಿಚಾರಧಾರೆಗಳು ಹೊಸ ಹೊಸ ಸಮುದಾಯಗಳು ಸಾಹಿತ್ಯ ಕ್ಷೇತ್ರವನ್ನು ಪ್ರವೇಸಿಸುತ್ತಿರುವುದರ ಬಗ್ಗೆ ಆತಂಕವಿದೆ. ಈ ಆತಂಕಕ್ಕೆ ಸ್ತ್ರೀ ಬರೆದ ಕೃತಿಯು ಕಾರಣವಾಗಿ ಕಂಡಿದೆ. ಆದ್ದರಿಂದ ಸಾಹಿತ್ಯವನ್ನು ಹೆಚ್ಚಿನ ಜನರು ಬರೆಯಲು ಪ್ರಯತ್ನಿಸಿದಾಗ ಕೆಟ್ಟ ಸಾಹಿತ್ಯ ಬರಬಹುದೆಂಬ ಸಹಜ ಆತಂಕ ಮಾಸ್ತಿಯವರಿಗೆ ಕಾಡಿದೆ. ಹಾಗಾಗಿ ಮಾಸ್ತಿಯವರ ನಿಲುವು ವಿಮರ್ಶೆಯ ಕಡೆಗೆ ತಿರುಗಿದೆ.

ಈ ಕಾರಣದಿಂದ ಮಾಸ್ತಿಯವರು ತಿರುಮಲಾಂಬರ ಕೃತಿಗಳ ಬಗೆಗೆ ಸಾಂಪ್ರದಾಯಿಕ ಮನಸ್ಥಿತಿಯಲ್ಲಿ ಮಾಡಿದ ಈ ವಿಮರ್ಶೆ ಆಧುನಿಕ ಕನ್ನಡ ವಿಮರ್ಶೆಯ ಮೊದಲ ವಸ್ತುನಿಷ್ಠ ಮತ್ತು ಕೃತಿನಿಷ್ಠ ವಿಮರ್ಶೆ ಎಂದು ಹೇಳಬಹುದು. ಆದರೆ ಮಾಸ್ತಿಯವರ ವಿಮರ್ಶೆ ಆ ಕಾಲಕ್ಕೆ ತಂದಂತಹ ಬದಲಾವಣೆ ಇತ್ತೀಚಿನ ದಶಕಗಳಲ್ಲಿ ತೀವ್ರ ಚರ್ಚೆಗೆ ಒಳಗಾಯಿತು.

ಮಾಸ್ತಿಯವರೇ ತಮ್ಮ ಲೇಖನವನ್ನು ಪುಸ್ತಕ ರೂಪದಲ್ಲಿ ತರುವ ಸಂದರ್ಭದಲ್ಲಿ ವಿಮರ್ಶೆಯ ಕಟುತ್ವದ ಬಗ್ಗೆ ತಮ್ಮ ನಿಲುವನ್ನು ಬದಲಾಯಿಸಿಕೊಂಡರು. “ಗ್ರಂಥ ಕರ್ತಿಯವರ ವಿಷಯದಲ್ಲಿ ಆ ಗೌರವರ ಇಲ್ಲದಿದ್ದರೆ ನಾನು ಆ ವಿಮರ್ಶೆಯನ್ನು ಬರೆಯುತ್ತಿರಲಿಲ್ಲ. ಆದರೆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿಣವಾದುದೆಂದು ಇತ್ತೀಚೆಗೆ ನನಗೆ ತೋರಿವೆ.”[೩]

ಈ ನಿಲುವಿನ ಬದಲಾವಣೆ 'ಪುಸ್ತಕ ವಿಮರ್ಶೆ'ಯಲ್ಲಿ ಒಂದು ಚಾರಿತ್ರಿಕ ಘಟನೆ. ಹೀಗೆ ನಿಲುವು ಬದಲಾಯಿಸಿಕೊಂಡ ಕಾರಣವೇ ಅಮೂರ್ತವಾಗಿ ಕೃತಿ ಬಗ್ಗೆ ಇಂತಿಷ್ಟೇ ಎಂದು ತೀರ್ಮಾನ ಕೊಡುವ ನ್ಯಾಯದೀಶನ ಹಾಗೆ ವಿಮರ್ಶನ ಕಾರ್ಯ ನಿರ್ವಹಿಸುವಂತಿಲ್ಲ ಎಂಬುದು ಗೊತ್ತಾಗುತ್ತದೆ. ಹೀಗಾಗಿ ಪುಸ್ತಕ ವಿಮರ್ಶೆಯು ಆಯಾ ಕಾಲದ ಮನಸ್ಥಿತಿ, ಚಾರಿತ್ರಿಕ, ಒತ್ತಡಗಳಿಂದ ಹುಟ್ಟುವ ತಾತ್ಕಾಲಿಕ ಪ್ರತಿಕ್ರಿಯೆ ಎಂದು ಗೊತ್ತಾಗುತ್ತದೆ. ಈ ಬದಲಾದ ನಿಲುವು, ಮತ್ತೆ ಮತ್ತೆ ಮಾಡುವ ಹೊಸ ಓದುಗಳು ಹಳೆ ನಿರ್ಣಯಗಳನ್ನು ಬದಲಿಸುತ್ತದೆ. ಕೃತಿಯನ್ನು ಬೇರೆಯಾಗಿ ನೋಡಲು ಒತ್ತಾಯಿಸುತ್ತವೆ ಎಂದು ಸೂಚಿಸುತ್ತದೆ.

೨. ರೂಪಪ್ರಧಾನ ಪುಸ್ತಕ ವಿಮರ್ಶೆ

ರೂಪಪ್ರಧಾನ ವಿಮರ್ಶೆ ವಿಮರ್ಶಾಕ್ಷೇತ್ರದಲ್ಲಿ ದೊಡ್ಡಛಾಪನ್ನು ಹರಡಿದ, ಗುರುತಿಸಿಕೊಂಡಂಥ ವಿಭಾಗ. ಇದರ ತಾತ್ವಿಕ ಗತಿಗಳು ಸಾಹಿತ್ಯ ವಿಮರ್ಶೆ, ಪುಸ್ತಕ ವಿಮರ್ಶೆಯನ್ನು ಬಹಿರ್ಮುಖಿಯತ್ತ ಹೊರಳಿಸಿದವು. ಇಲ್ಲಿನ ಸಾಹಿತ್ಯ ಹೇಗೆ ಪಾಶ್ಚಾತ್ಯರ ಅನುಕರಣೆ ಮತ್ತು ಅನುಸರಣೆಯಿಂದ ಹುಟ್ಟಿತೋ ಹಾಗೆಯೇ ವಿಮರ್ಶೆಯು ತನ್ನ ಪ್ರಮುಖ ನಿಲುವುಗಳನ್ನು ಮತ್ತು ತತ್ವಗಳನ್ನು ಪಾಶ್ಚಾತ್ಯರಿಂದ ಎರವಲಾಗಿ ಪಡೆಯಿತು. ಅದರ ಪರಿಣಾಮವಾಗಿಯೇ ಪುಸ್ತಕ ವಿಮರ್ಶೆಯೆಂಬುದು ರೂಪ ಪ್ರಧಾನವಾಗಿ ಬೆಳೆಯಿತು. ಕನ್ನಡ ಸಾಹಿತ್ಯದಲ್ಲಿ ಈ ಕಾಲಘಟ್ಟದ ಅವಿರ್ಭಾವಕ್ಕೆ ಪ್ರಧಾನ ಶಕ್ತಿಗಳಾಗಿ ಮಾರ್ಕ್ಸ್‌ವಾದ ಮತ್ತು ಮನಃಶಾಸ್ತ್ರಗಳು ಕಾಣಿಸಿಕೊಂಡವು. ಮಾರ್ಕ್ಸವಾದ ಸಾಮಾಜಿಕ, ಆರ್ಥಿಕ ಪ್ರಪಂಚದಲ್ಲಿ ಕ್ರಾಂತಿ ಮಾಡಿದರೆ, ಮನಃಶಾಸ್ತ್ರ ಮಾನವ ಜೀವನದ ಅಂತರಂಗದ ಪರಿಶೋಧನೆಯಲ್ಲಿ ತೊಡಗಿತು. ಇವೆರಡರ ಪ್ರೇರಣೆಯಿಂದಾಗಿ ಈ ಕಾಲದ ಸಾಹಿತ್ಯ ಬೆಳೆಯತೊಡಗಿತು. ಹಾಗೆಯೇ ಪುಸ್ತಕ ವಿಮರ್ಶೆಯ ಪ್ರೇರಣೆಗಳು ಪಾಶ್ಚಾತ್ಯರಿಂದ ಪಡೆದ ರೂಪ ಪ್ರಧಾನವಾದ ಅಂಶಗಳ ಕಡೆಯೇ ಇದ್ದವು. ರೂಪಪ್ರಧಾನ ವಿಮರ್ಶೆಯ ಆಳ ವಿಸ್ತಾರಗಳನ್ನು ಅರಿಯುತ್ತ ಹೋದಂತೆಲ್ಲ ಅದು ಆರಂಭದ ದಿಸೆಯಲ್ಲಿ ನಮ್ಮ ಕನ್ನಡ ಪುಸ್ತಕ ವಿಮರ್ಶಕರು ಹೆಚ್ಚಾಗಿ ಆಂಗ್ಲ–ವಿಮರ್ಶಕರು, ಆಂಗ್ಲ ಸಾಹಿತ್ಯ ಕೃತಿಗಳ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಕನ್ನಡ ಸಾಹಿತ್ಯಕ್ಕೂ, ಕೃತಿಗಳಿಗೂ ಹೊಂದಿಸಿ ಹೇಳುವುದರತ್ತ ಗಮನ ಹರಿಸಿದರು. ಹಾಗೆ ಹೊಂದಿಸುವಿಕೆಯಲ್ಲಿ ಹೇರುವ ಒತ್ತಡದಿಂದ ವಿಮರ್ಶೆ ಬಿಳುಚಿಕೊಂಡಿತು; ಕನ್ನಡದ ಮಟ್ಟಿಗೆ ನಲುಗಿತು. ಆಂಗ್ಲ ವಿಮರ್ಶೆಯನ್ನು ಕನ್ನಡದಲ್ಲಿ ತುಂಬಲು ಹೆಣಗಾಡಿದುದೇ ಬಹುಪಾಲು ಈ ಸಂದರ್ಭದ ವಿಮರ್ಶೆಯ ದೊಡ್ಡ ಚರಿತ್ರೆ. ಕೆಲವೊಮ್ಮೆ ಪಾಶ್ಚಾತ್ಯ ವಿಮರ್ಶೆಯಾಗಿಯೇ ಪರಿಣಮಿಸಿ ಬಿಟ್ಟಿತು. ಎಲಿಯೆಟ್‌ನ 'The Waste Land' ಕವಿತೆಯನ್ನು ಕುರಿತು ಲೀವಿಸ್ ಹೇಳಿದುದನ್ನೇ ಅನಂತಮೂರ್ತಿ ಅಡಿಗರ 'ಭೂಮಿಗೀತ'ಕ್ಕೆ ಒರೆ ಹಚ್ಚಿ ಹೇಳಿದುದನ್ನು ಗಮನಿಸಬಹುದು.

ಈ ಸ್ವರೂಪದ ಪುಸ್ತಕ ವಿಮರ್ಶೆ ಹುಟ್ಟಿ ಬಂದಂಥ ಸಂದರ್ಭ ಈಗಾಗಲೇ ತಿಳಿದಿರುವಂತೆ ಪಾಶ್ಚಾತ್ಯ ಪ್ರೇರಣೆ ಹಾಗೂ ಇಂಗ್ಲೀಷ್ ಪ್ರಾಧ್ಯಾಪಕರನ್ನು ಒಳಗೊಂಡಿದ್ದು, ಈ ಪುಸ್ತಕ ವಿಮರ್ಶೆ ಬಹುದೊಡ್ಡ ಮಿತಿಯನ್ನು ತನ್ನ ಸುತ್ತ ಹಾಕಿಕೊಳ್ಳಲು ಕಾರಣವಾಯಿತು. ಹಾಗಾಗಿ ಈ ಪುಸ್ತಕ ವಿಮರ್ಶಕರು ತಮ್ಮ ಘಟ್ಟಕ್ಕೆ ಸಂಬಂಧಪಟ್ಟ ಕೃತಿಗಳನ್ನು ಮಾತ್ರ ವಿಮರ್ಶಿಸಿದರು. ಅವುಗಳ ಮೌಲ್ಯವನ್ನು ಗುರತಿಸಿದರು. ಹಾಗೆ ಗುರುತಿಸಿದಾಗ ಸಹಜವಾಗಿ ತಮ್ಮ ಎದುರಾಳಿಗಳಂತಿದ್ದ ರಸಪ್ರಧಾನ ಪುಸ್ತಕವಿಮರ್ಶಕರನ್ನು ಕಡೆಗಣಿಸಿದರು. ಮತ್ತು ಅವರ ಕೃತಿಗಳಲ್ಲಿ ಕಂಡು ಬರುವ ಪ್ರಧಾನ ಧೋರಣೆ, ಆಶಯಗಳನ್ನು ಅಲ್ಲಗಳೆದರು. ಆದರೆ ಈ ಸಂದರ್ಭದಲ್ಲಿನ ಕೃತಿಗಳಿಗೆ ಅತಿ ಮನ್ನಣೆ ನೀಡಿದರು. ಗಿರಿಯವರ 'ಗತಿಸ್ಥಿತಿ' ಕೃತಿ ಪ್ರಕಟವಾಗುವುದಕ್ಕಿಂತ ಮುಂಚೆಯೇ 'ಗತಿಸ್ಥಿತಿ' ಕುರಿತು ರಿವ್ಯೂಗಳು ಪ್ರಕಟವಾದವು. ಅನಂತಮೂರ್ತಿಯವರು 'ಈಚಿನ ಕನ್ನಡ ಕಾವ್ಯ' ಎಂಬ ಶೀರ್ಷಿಕೆಯಲ್ಲಿ 'ಗಿರಿಯವರ' ಗತಿಸ್ಥಿತಿ ಕುರಿತು ಹೀಗೆ ಬರೆದಿದ್ದಾರೆ.

"ಗಿರಿ–ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೆಲವರಿಗೆ ಆತ್ಮೀಯವಾದ ಹಲವರಿಗೆ ತಿಳಿಯದ ಹೆಸರು ಇದು. ಬಹಳ ವರ್ಷಗಳ ಹಿಂದೆ ಕೆಲವು ಜಾಣ ಕಥೆಗಳನ್ನು ಬರೆದಿದ್ದರು. ಮತ್ತೆ ಮನೋವಿಜ್ಞಾನಿಯಾಗಿ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಲೇಖನಗಳನ್ನು ಕನ್ನಡದಲ್ಲಿ ಬರೆದರು. ತೇಜಸ್ವಿ, ರಾಮಾನುಜನ್ ಕಾದಂಬರಿಗಳನ್ನು ಕುರಿತು ವಿಮರ್ಶೆ ಬರೆದರು. ಮೈಸೂರಿನಲ್ಲಿದ್ದಾಗ ಒಂದು ಕಾದಂಬರಿ ಬರೆಯುತ್ತಾ ಇದ್ದು ಈಗ ಅಮೇರಿಕಾದಿಂದ ಅದನ್ನು ಮುಗಿಸಿ ಕಳುಹಿಸಿದ್ದಾರೆ. ಹೆಚ್ಚು ಮಾತಾಡದ, ಆಡಿದರೆ ನೆನಪಿಸುವಂತೆ ಮಾತನಾಡಬಲ್ಲ, ಗುಪ್ತವಾಗಿ ತನ್ನೊಳಗೆ ಬೆಳೆಯುವ, ಹೊಚ್ಚ ಹೊಸ ಸಂವೇದನೆಯ ಮನುಷ್ಯ ಈ ಗಿರಿ. ಇವರ ಕಾದಂಬರಿ ಗತಿಸ್ಥಿತಿ 'ಕನ್ನಡ ಭಾಷೆಗೆ ನಡೆಸಿದ ಚಿಕಿತ್ಸೆ' ಎನ್ನಬಹುದು. ಈ ದಶಕದ ಮಹತ್ವದ ಕೃತಿಗಳಲ್ಲಿ ಇದೊಂದು ಎಂಬುದನ್ನಂತೂ ಖಂಡಿತ ಹೇಳಬಹುದು. ಅಥವಾ ನಮ್ಮ ಸಮಕಾಲೀನ ನಾಗರೀಕ ಜೀವನವನ್ನು ಕುರಿತು ಇಷ್ಟು ಒಳ್ಳೆ ಕಾದಂಬರಿ ಇನ್ನೂ ಬಂದಿಲ್ಲವೆಂದು ಹೇಳಿದರೆ ಉತ್ಪ್ರೇಕ್ಷಯಾಗಲಾರದು.

ಈ ಕಾದಂಬರಿ ಓದಿ ನನಗಾದ ಸಂತೋಷಗಳನ್ನೆಲ್ಲ ಹೇಳಬೇಕಾದರೆ ಕೃತಿಯಿಂದ ಎಷ್ಟು ಭಾಗಗಳನ್ನು ಉದ್ಧರಿಸಿದರೂ ತೀರದು. ನನ್ನ ಕಾಪಿಯಲ್ಲಿ ಪ್ರತಿಪೇಜಿನ ಮೇಲೂ ಗುರುತು ಹಾಕಿಕೊಂಡಿದ್ದೇನೆ. ನನ್ನ ಮನಸ್ಸನ್ನು ಕೃತಿ ಆವರಿಸಿ ಬಿಟ್ಟಿದೆ.

ಕಾಫ್ಕ, ಕಮೂರ ಪ್ರಭಾವವಿಲ್ಲದಿದ್ದರೆ, ಗಿರಿ ಈ ಕೃತಿ ಬರೆಯುತ್ತಿರಲಿಲ್ಲ ನಿಜ. ಆದರೆ ಈ ಪ್ರಭಾವಕ್ಕೆ ಒಳಗಾದ ಮನಸ್ಸು ತನ್ನ ಪ್ರಜ್ಞೆಯಲ್ಲೇ ಅಂದರೆ ತನಗೆ ವಿಶಿಷ್ಟವಾದ ರೀತಿಯಲ್ಲೇ– ಬೆಂಗಳೂರಲ್ಲಿ, ಮೈಸೂರಲ್ಲಿ, ಜೋಗದಲ್ಲಿ, ಎಲ್ಲಕಿಂತ ಹೆಚ್ಚಾಗಿ ಭಾರತದ ಸದ್ಯದ ನವನಗರಿಗಳಿಗೆಲ್ಲಾ ಸಾಂಕೇತಿಕವಾದ ಹೆಸರಿಲ್ಲದ ನಗರದಲ್ಲಿ ಬದುಕಿ ಬೇಯದಿದ್ದರೆ, ಈ ಕೃತಿ ಹುಟ್ಟುತ್ತಿರಲಿಲ್ಲ.

ಕನ್ನಡ ಭಾಷೆಯನ್ನು ಯಾರೂ ಹಾಗೆ ಗಿರಿ ಉಪಯೋಗಿಸುವುದನ್ನು ಕಲಿಯದಿದ್ದರೂ, ಈ ಕೃತಿ ಹೀಗಿರುತ್ತಿರಲಿಲ್ಲ. ಕಮೂ, ಕಾಫ್ಕ ಓದಿದವರಿಗೆ ತಮಗೆ ಪರಿಚಿತವಾದ ವಿಚಾರವನ್ನು ಈ ಆವರಣದಲ್ಲಿ ಮತ್ತೆ ಜೀವಂತಿಸಿಕೊಂಡು ಅನುಭವದ ಜೊತೆಗೆ ಗಿರಿಯು ವಿಶಿಷ್ಟ ಪ್ರಜ್ಞೆಯ ಮೂಲಕ ನಮ್ಮ ಸಮಕಾಲೀನತೆಯನ್ನು ಹೊಸದಾಗಿ ಕಂಡಂತೆಯೂ ಆಗುತ್ತದೆ. . . . .

ಈ ಕಾದಂಬರಿಯನ್ನು ಹೇಗೇಗೋ ವಿಶ್ಲೇಷಿಸಬಹುದು. ವಿಮರ್ಶಕರಿಗೆ ಇಲ್ಲಿ ಔತಣ ಕಾಡಿದೆ. 'ನೋಡುವುದು' ಎಂತಹ ಕ್ರಿಯೆ ಎನ್ನುವುದರ ಬಗ್ಗೆಯೇ ಈ ಕಾದಂಬರಿ ಯಾವ ಮನಸ್ಥಿತಿಯಲ್ಲಿದ್ದಾಗ ನಾವು ಹೇಗೆ ನೋಡುತ್ತೇವೆ. ಈ ಗ್ರಹಣಕ್ರಿಯೆ ಪ್ರಜ್ಞೆಗೂ, ಆವರಣಕ್ಕೂ ಇರುವ ಸಂಬಂಧದ ಬಗ್ಗೆ, ಜೀವನದ ಬಗ್ಗೆ ತಾತ್ವಿಕವಾಗಿ ಏನು ಹೇಳುತ್ತದೆ. ಇದು ಕಾದಂಬರಿಯ ಉದ್ದೇಶವೆಂದು ತಿಳಿದು ಕೃತಿ ವಿಶ್ಲೇಷಣೆ ಮಾಡಬಹುದು. ಕೃತಿಯಲ್ಲಿ 'ಈತ'ನಿಗಾಗುವ ಅನುಭವ ಮಾತ್ರ ಸ್ಪಷ್ಟ. ಆದರೆ ಈತನಿಗೇ ಅನುಭವದ ಅರ್ಥ ತಿಳಿಯದು.

ಕಾದಂಬರಿ ತನ್ನ ಅರ್ಥವನ್ನೆಲ್ಲ ವಿವರಗಳಲ್ಲಿ ಹುಟ್ಟಿಸಿಕೊಳ್ಳುತ್ತದೆ. ಒಂದು ದೃಷ್ಟಿಯಲ್ಲಿ ವಿವರಗಳೇ, ಈತ ವಿವರಗಳನ್ನು ಗಮನಿಸುವುದೇ, ಏಕೆ ಗಮನಿಸುತ್ತಾನೆಂಬುದೇ ಕಾದಂಬರಿ. ಈತ ಎಲ್ಲವನ್ನು ಸೂಕ್ಷ್ಮವಾಗಿ ವಿವರಿಸುತ್ತ ಹೋದರೂ ಆಕೆ ಮತ್ತು ಮೂರ್ತಿ ಇಬ್ಬರನ್ನು ಮಾತ್ರ ವಿವರಿಸುವುದಿಲ್ಲವೆಂಬುದು. ಇದು ಏಕೆ ಎಂಬುದು ನಮ್ಮನ್ನು ಕಾಡುತ್ತದೆ. ನಮ್ಮ ಸಾಮಾನ್ಯ ಗ್ರಹಣಶಕ್ತಿ ಮಹತ್ವಪೂರ್ಣವಾದ ವಿವರವನ್ನು ಮಾತ್ರ ಗಮನಿಸುತ್ತದೆ. ಒಂದು ವಸ್ತುವನ್ನು ಅತಿಯಾಗಿ ವಿವರಿಸುವುದೆಂದರೆ ಆ ವಸ್ತುವನ್ನು Atomire ಮಾಡಿದಂತೆ. ವಿವರಿಸುತ್ತ, ವಿವರಿಸುತ್ತ ವಸ್ತುವೇ ಮಾಯವಾಗುತ್ತದೆ. ಎಲ್ಲವನ್ನೂ ವಿವರವಾಗಿ ನೋಡುವುದು ಈತ, ಆಕೆ ಮತ್ತು ಮೂರ್ತಿಯನ್ನು ಮಾತ್ರ ಹೀಗೆ ವಿವರಿಸದೇ ಇರುವುದು. ಏಕೆಂದರೆ ಈ ಇಬ್ಬರೂ ಮಾತ್ರ ಈತನಿಗೆ ಆಪ್ತರಾದ್ದರಿಂದ ಆಪ್ತಳಾಗಿದ್ದ ಲೀಲಾ ಬಗ್ಗೆ ಬೇಸರ ಬಂದ ಕೂಡಲೇ ಅವಳನ್ನು ವಿವರವಾಗಿ ನೋಡಲು ಶುರು ಮಾಡುತ್ತಾನೆಂಬುದು ಗಮನಾರ್ಹ. ಉಳಿದದ್ದಕ್ಕೆಲ್ಲ ಇವನು ಪರಕೀಯ.

ವಿವರಗಳೇ ಈ ಕಾದಂಬರಿ ತನ್ನ ಅರ್ಥದ ಉತ್ಪತ್ತಿಗೆ ಬಳಸುವ ಸಾಧನಗಳು ಎಂದು ಹೇಳಿದೆ. ವಿವರದಲ್ಲಿ ನೋಡುತ್ತ ಹೋಗುವ ಈ ಕಾದಂಬರಿಯ ಹಿಂದಿರುವ ಪ್ರಜ್ಞೆ ಒಟ್ಟಿನಲ್ಲಿ ಅನುಭವವನ್ನು ಹೇಳಲು ಪ್ರಯತ್ನಿಸಿದಾಗೆಲ್ಲಾ ಬರವಣಿಗೆ ಸುಳ್ಳೆನಿಸುತ್ತದೆ. ಬೇರೆ ಕಾದಂಬರಿಗಳಲ್ಲಿ ಸರಿಯೆನಿಸುವ ಮಾತುಗಳು ಈ ಕಾದಂಬರಿಗಳಲ್ಲಿ ಏಕೆ ನಿಶ್ಚೇಷ್ಟಿತವಾಗುತ್ತವೆಂಬುದನ್ನು ಯೋಚಿಸಬೇಕು.

ಒಂದು ಕಡೆ ಮಾತ್ರ ಗಿರಿ ಜಾರಿದ್ದಾರೆ ಎನಿಸುತ್ತದೆ. ಇದು ಸಣ್ಣ ವಿಷಯವಾದರೂ ಎದ್ದು ಕಾಣುತ್ತದೆಂದು, ಹೀಗೆ ಕಾಣುವುದು ಈ ರೀತಿಯ ಕಾದಂಬರಿಯ ವೈಶಿಷ್ಟ್ಯವೆಂದು

ಹೇಳುತ್ತಿದ್ದೇನೆ. ಗುಮಾಸ್ತನೊಬ್ಬ ಮೇಜನ್ನು ಕ್ಷುಲ್ಲಕ ಕಾಗದ ಪತ್ರಗಳ ಗೊಬ್ಬರ ಗುಂಡಿಯನ್ನಾಗಿಸುವ ದೃಶ್ಯ (ಪುಟ ೧೯-೨೦) 'ಈತ'ನ ಕಣ್ಣೆದುರು ನಡೆಯುವುದಿಲ್ಲ. ಆದ್ದರಿಂದ ಈ ವಿವರಗಳು ಏಕೆಂದು ನಮಗೆ ಅರ್ಥವಾಗುವುದಿಲ್ಲ.

ಒಂದೇ ಒಂದು ಸಾರಿ ಓದಿ ಅತ್ಯುತ್ಸಾಹದಲ್ಲಿ ಬರೆದ ಮಾತುಗಳು ಮೇಲಿನವು. ಆದರೆ ಇನ್ನೊಮ್ಮೆ ಓದಬೇಕು, ಗೆಳೆಯರ ಜೊತೆ ಚರ್ಚಿಸಬೇಕು ನನ್ನ ಉತ್ಸಾಹವನ್ನು ಓದುಗರಲ್ಲಿ ಹಂಚಿಕೊಳ್ಳುವುದು ಈಗ ಸದ್ಯದ ನನ್ನ ಉದ್ದೇಶವೇ ಹೊರತು ಕೃತಿಯ ವಸ್ತುನಿಷ್ಠ ವಿಮರ್ಶೆಯಲ್ಲ. ಏಕೆಂದರೆ ಇದೇ ಕಾದಂಬರಿ ಕಾಫ್ಕ ಕಮೂರಿಂದ ಕಲಿತ ಒಂದು ಬೌದ್ಧಿಕ ಆಟವೆಂದೂ, ತುಂಬಾ ಬುದ್ಧಿಶಾಲಿಯೊಬ್ಬ ಆಡಿದ ಆಟವೆಂದು ಮೆಚ್ಚಬೇಕೆಂದೂ ಭಾವಿಸಬಹುದೇನೋ. ಆದರೆ ನನ್ನ ಮಟ್ಟಿಗೆ ಈ ಕಾದಂಬರಿ ಮನಸ್ಸನ್ನು ಗಾಢವಾಗಿ ಕಲಕಿದೆ.

ವಸ್ತುನಿಷ್ಠ ವಿಮರ್ಶೆಯೆಂದರೂ, ಕೃತಿ ಪರೀಕ್ಷೆಯೆಂದರೂ ನನಗೆ ಈಚೆಗೆ ಬೇಜಾರು. ನಮ್ಮ ವಿಮರ್ಶೆಯ ಭಾಷೆ ಎಷ್ಟು ಉಸಿರು ಕಟ್ಟಿಸುತ್ತಿದೆ ನೋಡಿ, ಯಾರಿಗಾದರೂ ಒಂದು ಪದ್ಯವನ್ನೋ, ಕಥೆಯನ್ನೋ ಕೊಡಿ, ಅವರು ಅದನ್ನು ಓದಿ ತುಂಬ ಯೋಚಿಸುವ ಗಂಟು ಮುಖ ಮಾಡಿ ಇನ್ನೊಮ್ಮೆ ಓದಬೇಕು ಅನ್ನುತ್ತಾರೆ. ಎಲ್ಲಿ ಏನು ಹೇಳಿದರೆ ಸಿಕ್ಕಿ ಬೀಳುತ್ತೇನೋ ಎನ್ನುವ ದಿಗಿಲು. ಉತ್ಸಾಹವೇ ತಪ್ಪೆನ್ನುವ ಧೋರಣೆ ಕಂಡರೆ ರೇಗುತ್ತಾರೆ. ಬೇದಿ ಇಲ್ಲವೆ ಮಲಬದ್ಧತೆಯಿಂದ ನಮ್ಮ ವಿಮರ್ಶಾ ಪ್ರಜ್ಞೆ ನರಳುತ್ತದೆ.

ಎಲ್ಲಾಬಗೆಯ ಸಾಹಿತ್ಯದಲ್ಲೂ ಒಂದಲ್ಲ ಒಂದು ಗುಣವಿದೆ. ಅದನ್ನು ಗ್ರಹಿಸುವುದನ್ನು ಕಲಿಯಬೇಕು ಎನ್ನುವ ಅಕಾಡೆಮಿಕ್ ವಿಮರ್ಶಕರು ನಿಜವಾಗಿ ಏನನ್ನು ಮೆಚ್ಚಲಾರರು. ಪಕ್ಷಪಾತ ಯಾಕೆ ತಪ್ಪು? ನಮ್ಮ ಅತ್ಯುತ್ತಮ ವಿಮರ್ಶೆ ಬರುವುದು ನಾವು ತುಂಬ ಮೆಚ್ಚುವ ಸಾಹಿತ್ಯವನ್ನು ತೀವ್ರವಾಗಿ ಅನುಭವಿಸಿದಾಗ, ಎಷ್ಟು ವಿಮರ್ಶಕ ದೋರಣೆಯಿದ್ದರೂ ಕೃತಿಯ ಬಗ್ಗೆ ಪಕ್ಷಪಾತಿಯಾಗಬೇಕೆಂದೂ ಉತ್ಸಾಹ ಹುಟ್ಟಿದಾಗ, ಎಲಿಯೇಟ್, ಪೌಂಡ್, ಲೀವಿಸ್ ಇದರ ಅತ್ಯುತ್ತಮ ವಿಮರ್ಶೆಯಲ್ಲಿ ಈ ಪಕ್ಷಪಾತ. ತುಂಬ ವಿಮರ್ಶಕ ಪ್ರಜ್ಞೆಯಿದ್ದವನ ಪಕ್ಷಪಾತ ಕಾಣಿಸುತ್ತದೆಯಲ್ಲವೇ? ನವ್ಯ ಸಾಹಿತ್ಯದ ಜೀವಂತಿಕೆ ಸಣ್ಣಗೆ ಉರಿಯುತ್ತಿರುವಾಗ 'ಸಂಕ್ರಾಂತಿ', 'ಗತಿಸ್ಥಿತಿ', 'ಮಹಾಪ್ರಸ್ಥಾನ'ಗಳಿಂದ ಕನ್ನಡದ ಬಗ್ಗೆ ಭರವಸೆ ಹುಟ್ಟುವುದಲ್ಲವೇ? ಇವುಗಳ ಬಗ್ಗೆ ವಿವೇಕದ ವಿಮರ್ಶೆಯ ಜೊತೆಗೇ ಉತ್ಸಾಹದಿಂದಲೂ ಮಾತನಾಡುವುದು ಸರಿಯಲ್ಲವೇ? ಅವಶ್ಯವಲ್ಲವೇ?"[೪]

ಇದೇ 'ಗತಿಸ್ಥಿತಿ' ಬಗ್ಗೆ ದೀರ್ಘವಾದ ವಿಚಾರ ಚಿಂತನೆಗಳು ಲೇಖನದ ರೂಪದಲ್ಲಿ ಆ ಸಂದರ್ಭದಲ್ಲಿ ಅಭಿವ್ಯಕ್ತವಾದವು.

೧. ಜಿ.ಎನ್. ರಂಗನಾಥರಾವ್ ಸಾಕ್ಷಿ ೧೮ (ಪುಟ ೯೦)ರ ಸಂಚಿಕೆಯಲ್ಲಿ 'ಗತಿಸ್ಥಿತಿ' ಪಾತ್ರ ಪ್ರಧಾನವಾದ ಕಾದಂಬರಿಯಲ್ಲ, ಗತಿಸ್ಥಿತಿ ವ್ಯಕ್ತಿತ್ವ ಪ್ರಧಾನವಾದ ಕಾದಂಬರಿ ಎಂದು ಹೇಳಿದ್ದಾರೆ.

೨. ಇವರೇ ಸಂಕ್ರಮಣದಲ್ಲೂ 'ಗತಿಸ್ಥಿತಿ'ಯ ಬಗ್ಗೆ ಒಂದು ದೀರ್ಘ ಲೇಖನ (ಸಂಚಿಕೆ ೪೯) ಬರೆದಿದ್ದಾರೆ.

೩. ಗತಿಸ್ಥಿತಿ (ಒಂದು ವಿಮರ್ಶೆ) – ಜಾಗೋ ಸಾಕ್ಷಿ ೧೭

೪. ಗತಿಸ್ಥಿತಿ – ಮರುಚಿಂತನೆ – ಜಿ. ಎನ್. ರಂಗನಾಥರಾವ್ ಸಾಕ್ಷಿ ೧೮

೫. ಗತಿಸ್ಥಿತಿ – ವಿಮರ್ಶೆಯ ಬಗ್ಗೆ ಒಂದು ಪ್ರತಿಕ್ರಿಯೆ – ಡಿ. ರಂಗನಾಥ ರಾವ್, ಸಾಕ್ಷಿ ೧೯ (ಜಿ. ಎನ್. ರಂಗನಾಥ ರಾವ್‌ರ ಲೇಖನ ಕುರಿತು)

೬. ಗತಿಸ್ಥಿತಿ – ಒಂದು ವಿಮರ್ಶೆ – ಐದು ಅನುಮಾನಗಳು – ಜಿ. ಎಸ್. ಅವಧಾನಿ ಸಾಕ್ಷಿ – ೧೯

೭. ಗಿರಿಯವರ ಗತಿಸ್ಥಿತಿ ವಿಮರ್ಶೆಗೆ ಒಂದು ಸೂಚನೆ – ಕಿತ್ತೂರ ರಾಮಚಂದ್ರ

೮. ಗತಿಸ್ಥಿತಿ ಅಭ್ಯಾಸ – ಮಹಮ್ಮದ್ ಅಹಮದ್ – ಸಂಕ್ರಮಣ ಜನವರಿ ೨೪

ಇಷ್ಟೊಂದು ದೀರ್ಘವಾಗಿ 'ಗತಿಸ್ಥಿತಿ' ಚರ್ಚಿತವಾಯಿತು. ಇದು ಈ ಸಂದರ್ಭದ ಪ್ರಾತಿನಿಧಿಕ ಕೃತಿ ಎಂಬಂತೆ ಪುಸ್ತಕ ವಿಮರ್ಶಕರು ಗುರುತಿಸಿದ್ದಾರೆ. ಆದರೆ 'ಗತಿಸ್ಥಿತಿ' ಪ್ರಕಟಗೊಂಡ ಕೆಲವು ವರ್ಷಗಳ ನಂತರ ಓದುಗರಲ್ಲಿ ಅದರ ಅಸ್ತಿತ್ವವೇ ಇಲ್ಲವಾಯಿತು. ಇದು ಅತಿ ವ್ಯಾಮೋಹದ ವಿಮರ್ಶೆ ಹಾಗೂ 'ಪುಸ್ತಕ ವಿಮರ್ಶೆ'ಗೆ 'ಗತಿಸ್ಥಿತಿ'ಯ ಸ್ಥಿತಿ ಅತ್ಯುತ್ತಮ ಉದಾಹರಣೆಯಾಗಿದೆ.

ಅನಂತಮೂರ್ತಿ ಮಾಡಿರುವ 'ಗತಿಸ್ಥಿತಿ' ವಿಮರ್ಶೆಯಲ್ಲಿ ಕೃತಿಯನ್ನು ಆತ್ಮೀಯವಾಗಿ ಸ್ವೀಕರಿಸಿರುವುದನ್ನು ಕಾಣಬಹುದು. ಅದಕ್ಕೆ ಕಾರಣಗಳು ಹಲವು. 'ಗತಿಸ್ಥಿತಿ' ರೂಪ ಪ್ರಧಾನ ಕಾಲಕ್ಕೆ ಸಂಬಂಧಪಟ್ಟಿದ್ದು. ಅವುಗಳಲ್ಲೊಂದು ಇಲ್ಲಿ ಈ ಕೃತಿಯ ಮಹತ್ವವನ್ನು ಹೆಚ್ಚು ಒತ್ತು ಮಾಡಿ ಗುರುತಿಸುತ್ತಾರೆ. ಆದರೆ ದೋಷವನ್ನು ಈ ರೀತಿಯ ಕಾದಂಬರಿಯ ವೈಶಿಷ್ಟ್ಯವೆಂದು ಮರೆಮಾಚುತ್ತಾರೆ. ದೋಷವನ್ನು ಒಂದು ಅತ್ಯುತ್ತಮ ಗುಣವೆಂದು ಗುರುತಿಸುತ್ತಾರೆ. ಅಲ್ಲದೇ ದೋಷವೆಂದು ಗುರುತಿಸಲು ಮನಸ್ಸಾಗದೆ 'ಒಂದೇ ಒಂದು ಸಾರಿ ಓದಿ ಅತ್ಯುತ್ಸಾಹದಲ್ಲಿ ಬರೆದ ಮಾತುಗಳು' ಎಂದು ದೋಷವನ್ನು ಸರಳೀಕರಿಸುತ್ತಾರೆ. ಅವರ ಈ 'ಪುಸ್ತಕ ವಿಮರ್ಶೆ' ಮಾದರಿಯನ್ನು ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಪ್ರತಿನಿಧಿಕ ಮಾದರಿಯಾಗಿಯೇ ಗಮನಿಸಬಹುದು. ಆಗಿನ ಪುಸ್ತಕ ವಿಮರ್ಶೆ 'ವಿಮರ್ಶೆಯ ಕೃತಿಯೊಂದಿಗಿನ ತನ್ನ ಉತ್ಸಾಹವನ್ನು ಓದುಗರಲ್ಲಿ ಹಂಚಿಕೊಳ್ಳುವುದು. ಸದ್ಯದ ಉದ್ದೇಶವೇ ಹೊರತು' ಕೃತಿಯ ವಸ್ತುನಿಷ್ಠ ವಿಮರ್ಶೆಯಲ್ಲ. ಈ ಹಾದಿಯಲ್ಲಿ ಪುಸ್ತಕ ವಿಮರ್ಶೆಯೂ ಸಹ ವಸ್ತುನಿಷ್ಠತೆಗೆ ಇದಿರಾಗಿ ನಡೆಯಿತು. ವಸ್ತುನಿಷ್ಠತೆ

ಕೃತಿಯಲ್ಲಿ ಕಾಣಲಾರದ ಸ್ಥಿತಿಗೆ ಬಂದು ತಲುಪಿತು. ಅಲ್ಲದೇ ತಮ್ಮ ಕೃತಿಗಳನ್ನು ಒಪ್ಪಿಕೊಳ್ಳುವಾಗ ಒಳ್ಳೆ ರೀತಿಯಲ್ಲಿ ವಿಮರ್ಶಿಸುವ ಅವರು "ತುಂಬಾ ಬುದ್ಧಿ ಶಾಲಿಯೊಬ್ಬ ಆಡಿದ ಆಟವೆಂದು, ಮೆಚ್ಚಬೇಕೆಂದೂ ವಾದಿಸಬಹುದೇನೋ" ಎಂದು ಸಮರ್ಥಿಸಿಕೊಳ್ಳುವ ಯತ್ನಗಳನ್ನು ಕಾಣಬಹುದು. ಹಾಗೆಯೇ ಅವರು ತಮ್ಮ ಕಾಲದ ಲೇಖಕರ ಕೃತಿಗಳನ್ನೇ ವಿಮರ್ಶೆಗೆ ಆಯ್ದುಕೊಳ್ಳುವಾಗ ಅದನ್ನು ಪಕ್ಷಪಾತವೆಂದು ಕರೆಯದೇ ಅದು ಅಗತ್ಯದ ಅನಿವಾರ್ಯತೆ ಎಂದು ಗುರುತಿಸುತ್ತಾರೆ. ಅಲ್ಲದೇ ನಮ್ಮ ಅತ್ಯುತ್ತಮ ವಿಮರ್ಶೆ ಬರುವುದು ನಾವು ತುಂಬಾ ಮೆಚ್ಚುವ ಸಾಹಿತ್ಯವನ್ನು ತೀವ್ರವಾಗಿ ಅನುಭವಿಸಿದಾಗ, ಎಷ್ಟು ವಿಮರ್ಶಕ ದೋರಣೆಯಿದ್ದರೂ ಕೃತಿಯ ಬಗ್ಗೆ ಪಕ್ಷಪಾತಿಯಾಗಬೇಕೆಂದೂ 'ಉತ್ಸಾಹ ಹುಟ್ಟಿದಾಗ' ಎಂಬ ಅತಿರೇಕಕ್ಕೆ ಪುಸ್ತಕ ವಿಮರ್ಶೆ ಕೊಂಡೊಯ್ದಿತು. ಈ ಅತಿರೇಕದಿಂದ ಪುಸ್ತಕ ವಿಮರ್ಶೆ ಏಕೆ ಬರಬರುತ್ತ ತನ್ನ ತನವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಕೃತಿಗಳ ವಿವರವಾದ ಪರಿಶೀಲನೆಗೆ ತೊಡಗಿತ್ತು?

ಈ ಸಂದರ್ಭದಲ್ಲಿ ಲಕ್ಷ್ಯ ಹೆಚ್ಚಾಗಿ ಆ ಕಾಲದ ಕೃತಿಗಳ ಮೇಲೆಯೇ ಏಕೆ ಕೇಂದ್ರೀಕೃತವಾಯಿತು? ಎಂಬುದಕ್ಕೆ ಗಿರಡ್ಡಿಗೋವಿಂದರಾಜರವರು ಈ ರೀತಿ ಹೇಳುತ್ತಾರೆ.

"ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಕೊಡಬಹುದು. ಒಂದು ನವ್ಯ ಕೃತಿಗಳಲ್ಲಿ ಸಾಂಕೇತಿಕತೆ, ಸಂಕೀರ್ಣತೆ, ಅರ್ಥಸಂಧಿಗ್ಧತೆ ಮೊದಲಾದವುಗಳಿಂದಾಗಿ ವಿಶ್ಲೇಷಣೆಗೆ ಹೆಚ್ಚು ಅನುಕೂಲವಿದೆ. ಕೃತಿಯ ಬಗ್ಗೆ ಬೆಲೆಯುಳ್ಳದ್ದೇನನ್ನು ಹೇಳುವುದಿಲ್ಲದಿದ್ದಾಗಲೂ ವಿಮರ್ಶಕನಿಗೆ ಮೌಲ್ಯಮಾಪನಕ್ಕೆ ಅಗತ್ಯವಾದ ವಿಮರ್ಶಕರ ಅಂತದೃಷ್ಟಿ ಇಲ್ಲದಿದ್ದರೂ, ಅರ್ಥ ವಿವರಣೆಯ ದೃಷ್ಟಿಯಿಂದಾದರೂ ವಿಮರ್ಶೆ ಉಪಯುಕ್ತವಾಗುತ್ತದೆ. ನವೋದಯ ಕೃತಿಗಳು ನವ್ಯ ಕೃತಿಗಳಿಗೆ ಹೋಲಿಸಿದಾಗ ಹೆಚ್ಚು ಸರಳವಾಗಿರುವುದರಿಂದ, ವಿಶ್ಲೇಷಣೆ ಕೇವಲ ಸಂಗ್ರಹಾನುವಾದವಾಗಿ ಬಿಡುವು ಪ್ರಸಂಗ ಹೆಚ್ಚು, ಎರಡನೆಯದು ನವ್ಯ ವಿಮರ್ಶಕರಿಗೆ ನವ್ಯ ಸಾಹಿತಿಗಳು, ಲೇಖಕರು ಸಮಕಾಲೀರಾಗಿರುವುದು".[೫]

ಈ ವಿವರಣೆ ನವ್ಯವಿಮರ್ಶೆ ಮತ್ತು ರೂಪಪ್ರಧಾನ ಪುಸ್ತಕ ವಿಮರ್ಶೆಯ ಧೋರಣೆಗಳೆಲ್ಲವನ್ನು ಸಂಪೂರ್ಣವಾಗಿ ಒಳಗೊಳ್ಳುವಂತೆ ಕಾಣಬರುವುದಿಲ್ಲವಾದರೂ, ಇಲ್ಲಿನ ವಿಚಾರಗಳು ಕೆಲವು ಸಂದೇಹಗಳಿಗೆ ಎಡೆಮಾಡಿ ಕೊಟ್ಟರೂ ರೂಪಪ್ರಧಾನ ವಿಮರ್ಶೆ ರಸಪ್ರಧಾನ ಕೃತಿಗಳನ್ನು ಕಡೆಗಣಿಸಿದ್ದು, ಕೇವಲ ತನ್ನ ಕೃತಿಗಳನ್ನು ಮೇಲೆತ್ತಿದ್ದು, ಎಲ್ಲರಿಗೂ ಗೊತ್ತಿರುವ ಸಂಗತಿ. ಈ ಸಂದರ್ಭದ ಪುಸ್ತಕ ವಿಮರ್ಶೆ ಸಮಕಾಲೀನ ಸಾಹಿತ್ಯದ ಬಗ್ಗೆ ಹೆಚ್ಚು ಅಸ್ಥೆ ಹೊಂದಿದೆ. ಕೆಲವು ಪತ್ರಿಕೆಗಳಲ್ಲಿ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಕಥೆಯದೋ, ಕವಿತೆಯದೋ, ವಿಶ್ಲೇಷಣೆ ಮುಂದಿನ ಸಂಚಿಕೆಯಲ್ಲೇ ಪ್ರಕಟವಾಗುತ್ತಿತ್ತು. ಆದರೆ ಸಾಮಾನ್ಯವಾಗಿ ಚರ್ಚೆಗೊಳಗಾಗುವ ಕೃತಿಗಳು ನಿಜವಾಗಿಯೂ ಮಹತ್ವದ ಕೃತಿಗಳೇ ಆಗಿವೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ,

ಸಂಕ್ರಮಣದಲ್ಲಿ ಪ್ರಕಟವಾದ ಲಂಕೇಶರ ಕಥೆಗಳು (ರಾಜೀವ ತಾರಾನಾಥ), 'ಮೂರುದಾರಿಗಳು', 'ಮುಕ್ತಿ (ವಿವೇಕ ಶಾನುಭಾಗ)', 'ಹಳದಿಮೀನು' (ಅಮೂರ), 'ಸಂಸ್ಕಾರ' (ಎಂ.ಜಿ. ಕೃಷ್ಣಮೂರ್ತಿ), 'ವಂಶವೃಕ್ಷ' (ಗಿರಡ್ಡಿ ಗೋವಿಂದರಾಜು) ಮುಂತಾದ ಕಾದಂಬರಿ ಕಾರ್ನಾಡರ ನಾಟಕಗಳನ್ನು (ವಿವೇಕ ಶಾನುಭಾಗ), ಜಡಭರತ (ರಾಜೀವ ತಾರಾನಾಥ)ರ ನಾಟಕ ಇವುಗಳ ಸುದೀರ್ಘ ಪುಸ್ತಕ ವಿಮರ್ಶೆಗಳನ್ನು, 'ಮನ್ವಂತರ'ದಲ್ಲಿ ಪ್ರಕಟವಾದ ಕಾರಂತ, ದೇವುಡರ ಕಾದಂಬರಿಗಳು, ಕುವೆಂಪುರವರ 'ರಾಮಾಯಣ ದರ್ಶನಂ', ಶ್ರೀರಂಗ, ಕಾರ್ನಾಡರ ನಾಟಕಗಳ ಅಭ್ಯಾಸಗಳನ್ನು (ಕುರ್ತಕೋಟಿ), ಸಾಕ್ಷಿಯಲ್ಲಿ ಬಂದ ಗ್ರಾಮಾಯಣ (ಎಂ.ಜಿ. ಕೃಷ್ಣಮೂರ್ತಿ), ಮೂರಬಲಿ (ಶ್ರೀನಿವಾಸರಾವ್), ಇವುಗಳ ವಿಶ್ಲೇಷಣೆಯನ್ನು ನೋಡಬಹುದು. ಈ ಮೇಲಿನ ಪಟ್ಟಿಯನ್ನೆಲ್ಲಾ ಅಭ್ಯಾಸಿಸಿದರೆ ರಸ ಪ್ರಧಾನ ಸಂದರ್ಭದ ಕೃತಿಗಳನ್ನು ಅತಿ ಸರಳವಾಗಿ ಪರಿಗಣಿಸಿರುವುದು ಕಂಡು ಬರುತ್ತದೆ. ಮೇಲೆ ಹೆಸರಿಸುವ ಕೃತಿಗಳ ವಿಶ್ಲೇಷಣೆ ಆ ಕಾಲದ ವಿಮರ್ಶಾ ನಿಲುವನ್ನು ಸ್ಪಷ್ಟ ಪಡಿಸುತ್ತದೆ.

ಈ ಕಾಲದ ಪುಸ್ತಕ ವಿಮರ್ಶಕರ ವಿಮರ್ಶೆಯ ಇನ್ನೊಂದು ಆಯಾಮವೆಂದರೆ, ಅವರು ಪರಿಶೀಲಿಸುತ್ತಿದ ಕೃತಿಯನ್ನು ತಮ್ಮ ಅನುಭವಗಳ ಮೂಸೆಯಲ್ಲೇ ಕೃತಿಯ ಆಳಕ್ಕೆ ಇಳಿಯುತ್ತಿದ್ದರು. ಆ ದೃಷ್ಟಿಯಲ್ಲೇ ಕೃತಿಯನ್ನು ಮೌಲ್ಯಮಾಪನ ಮಾಡುತ್ತಿದ್ದರು. ಪರಿಣಾಮವಾಗಿ ಕೃತಿಯೊಂದೆ ಅವರಿಗೆ ಮೂಲಭೂತ ಸಮಸ್ಯೆ ಮತ್ತು ಅದನ್ನು ಬಿಡಿಸಿಕೊಳ್ಳುವುದೇ ಪುಸ್ತಕ ವಿಮರ್ಶೆಯಾಗಿ ಪರಿಣಮಿಸಿ ಬಿಡುತ್ತಿತ್ತು. ಅದಕ್ಕೆ ಪೂರಕವಾಗಿ ವಿಮರ್ಶೆಯ ಪರಂಪರೆಯನ್ನು ರೂಢಿಸಿಕೊಂಡು ಬಂದ ಪಾಶ್ಚಾತ್ಯ ವಿಮರ್ಶನ ಶಕ್ತಿ ಮತ್ತು ಮಾರ್ಗವಾಯಿತು. ಬಹುಶಃ ಇದೇ ಅವರು ರಸಪ್ರಧಾನ ಪುಸ್ತಕ ವಿಮರ್ಶಕರನ್ನು ವಿರೋಧೀಸುವುದಕ್ಕೆ ಕಾರಣವಾಗಿರಲುಬಹುದು. ವೈಯಕ್ತಿಕ ಅನುಭವದಲ್ಲಿ ಕೃತಿಯನ್ನು ನೋಡತೊಡಗಿದ ಕೃತಿಯ ಶಿಲ್ಪ, ಬಂಧ, ಭಾಷೆ, ಅನುಭಾವ, ಅಭಿವ್ಯಕ್ತಿ ಇವುಗಳನ್ನು ಹೆಚ್ಚು ಕೇಂದ್ರವಾಗಿಟ್ಟುಕೊಂಡು ಬಗೆ ಬಗೆಯಾಗಿ ಚರ್ಚಿಸಿದರು. ಪುಸ್ತಕ ವಿಮರ್ಶಕರು ಕೃತಿಯನ್ನು ನೆಪಮಾಡಿ ತಾವು ವಿಜೃಂಭಿಸಿದರು. ಉದಾ: ಕೆ.ವಿ. ತಿರುಮಲೇಶರ 'ಮುಖವಾಡಗಳು' ಕವನ ಸಂಕಲನವನ್ನು ಕೆ. ಮರುಳಸಿದ್ಧಪ್ಪನವರು ವಿಮರ್ಶಿಸಿದ್ದನ್ನು ನೋಡಬಹುದು.೬ ಕೃತಿ ವಿಮರ್ಶೆಗೆ ಮೊದಲು ಅವರು ಹಾಕಿರುವ ಪೀಠಿಕೆಯನ್ನು ನೋಡಿದರೆ ಅವರು ಕೃತಿಗಿಂತ ಹೆಚ್ಚು ವಿವರಗಳನ್ನು ಬೇರೆ ನೆಲೆಯಲ್ಲಿ ಚರ್ಚಿಸುತ್ತಾರೆ.

೨. ಆಶಯ ಪ್ರಧಾನ ಪುಸ್ತಕ ವಿಮರ್ಶೆ

ಆಶಯ ಪ್ರಧಾನ ಪುಸ್ತಕ ವಿಮರ್ಶೆ ಹಿಂದಿನ ರೂಪ ಪ್ರಧಾನ ಪುಸ್ತಕ ವಿಮರ್ಶೆಯಿಂದ ಹೊರಳಿಕೊಂಡು ಹೊಸ ಪುಸ್ತಕ ವಿಮರ್ಶೆಯ ಹಾದಿಯನ್ನು ಹುಡುಕಲು ಯತ್ನಿಸಿತು. ಇದರ

ಫಲವಾಗಿ ವಿಮರ್ಶೆಯ ಮಾನದಂಡಗಳು ಬದಲಾಗಬೇಕೆಂದು ಹೊಸ ಮೀಮಾಂಸೆಯೇ ಸಿದ್ಧಗೊಂಡಿತು. ಈ ದಿಸೆಯಲ್ಲಿಯೇ ಪ್ರತಿಭಾನ್ವಿತ ವಿಮರ್ಶಕರು ರೂಪ ಪ್ರಧಾನ ಪುಸ್ತಕ ವಿಮರ್ಶೆ ಹೊರತಾಗಿ ಬೆಳೆದು ಸಾಹಿತ್ಯ ವಿಮರ್ಶೆಯನ್ನು ಬೆಳೆಸಿದರು. ಈ ಕಾರಣದಿಂದ ಪುಸ್ತಕ ವಿಮರ್ಶೆಯಲ್ಲಿ ಹೊಸ ಸ್ವರೂಪ ರೂಪುಗೊಂಡಿತು. ಈ ಬದಲಾವಣೆಯಲ್ಲಿ ಆಶಯ ಪ್ರಧಾನ ಪುಸ್ತಕ ವಿಮರ್ಶೆ ಎಂದು ಕರೆಯಬಹುದೆನಿಸಿತು.

ಈ ಪರಿಧಿಯಲ್ಲಿ ಬರುವ ಪುಸ್ತಕ ವಿಮರ್ಶೆಯು ಕೇವಲ ಕೃತಿಯಲ್ಲಿಯೇ ಗಿರಕಿ ಹೊಡೆಯಲಿಲ್ಲ, ಅದು ಕೃತಿ ಬಂದ ಹಿನ್ನೆಲೆ, ಸಂಸ್ಕೃತಿಗಳ ನೆಲೆಯಲ್ಲಿ ಕೃತಿಯನ್ನು ಅರ್ಥೈಸುವ ಯತ್ನದಲ್ಲಿ ತೊಡಗಿತ್ತು.

"ಸಾಹಿತ್ಯ ವಿಮರ್ಶಕನಿಗೆ ಕೆಲಸದ ಆರಂಭ ಮತ್ತು ಕೊನೆ ಎರಡೂ ಇರುವುದು ಕೃತಿಯೊಂದರ ಆಕೃತಿಯಲ್ಲಿಯೇ. ನಡುವೆ ಮಾತ್ರ ಆತ ಸಮಾಜ, ಚರಿತ್ರೆ, ವರ್ಗ ಇತ್ಯಾದಿಗಳ ಕಡೆಗೆ ತೆರಳುತ್ತಾನೆ, ಆದರೆ ಅಲ್ಲೆಲ್ಲೂ ನಿಲ್ಲದೆ ಆತ ಮರಳಿ ಕೃತಿಯ ಬಂಧಕ್ಕೆ ಮರಳುತ್ತಾನೆ."[೭] ಎನ್ನುವ ಡಿ. ಆರ್. ನಾಗರಾಜರವರು ರೂಪ ಮತ್ತು ಆಶಯ ಪ್ರಧಾನ ಪುಸ್ತಕ ವಿಮರ್ಶೆ ಎರಡನ್ನು ಒಳಗೊಂಡಂತೆ ವಿಮರ್ಶೆ ಕಂಡುಕೊಂಡ ಸ್ವರೂಪವನ್ನು ಕುರಿತು ಚರ್ಚಿಸುತ್ತಾರೆ. ಆದರೆ ಈ ಸಂದರ್ಭದ ಪುಸ್ತಕ ವಿಮರ್ಶೆಯನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ಅದನ್ನು ಅಕಾಡೆಮಿಕ್ ಶಿಸ್ತಿನಿಂದ ಓದಿ ಅರ್ಥೈಸುವಂತದ್ದಲ್ಲ. ಅದು ಸಮಾಜ, ಸಾಂಸ್ಕೃತಿಕ ಆಸಕ್ತಿಯನ್ನು ಬಯಸುವಂತಹದ್ದು, ಈ ಕಾಲದಲ್ಲಿ ವಿಮರ್ಶೆಯ ನಿಲುವುಗಳು ಬದಲಾದವು ದೇವನೂರ ಮಹಾದೇವರ 'ಕುಸುಮ ಬಾಲೆ'ಗೆ ಬ್ಲರ್ಬ್ ಬರೆಯುತ್ತಾ ಪ್ರೊ. ಜಿ. ಹೆಚ್. ನಾಯಕ್‌ರು ಹೀಗೆ ಹೇಳುತ್ತಾರೆ (ಪ್ರಬುದ್ಧ ಕರ್ನಾಟಕ ಸಂಯುಕ್ತ ಸಂಚಿಕೆ, ಅಕ್ಟೋಬರ್ ೯೦, ಜನವರಿ ೯೧).

'ಕುಸುಮ ಬಾಲೆ' ಕಿರು ಕಾದಂಬರಿಯ ಪ್ರಕಟಣೆ ಇಂದಿನ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಒಂದು ಮಹತ್ವದ ಸಾಹಿತ್ಯಕ ಘಟನೆಯಾಗಿದೆ. ಅದರ ರಚನಾ ವಿಧಾನ, ಭಾಷೆಯ ಬಳಕೆ, ನಿರೂಪಣೆಯ ಸ್ವರೂಪ, ದೃಷ್ಟಿ-ಧೋರಣೆ ಇತ್ಯಾದಿಗಳಲ್ಲಿ ಹೊಸತನವಿದೆ; ತಾಜಾತನವಿದೆ; ಜೊತೆಗೆ ವಿಲಕ್ಷಣ ಎನಿಸಬಹುದಾದಂಥ ಕೆಲವು ಅಂಶಗಳೂ ಇವೆ. ಆ ಕಾರಣಗಳಿಂದಾಗಿ ಕಾದಂಬರಿಯ ರೂಪ, ಸಂವಹನ, ಕೇಂದ್ರ ಪ್ರಜ್ಞೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಓದುಗರಿಗೆ, ವಿಮರ್ಶಕರಿಗೆ ಎದುರಾಗಿದೆ. ಅವು ಪ್ರಶಂಸೆ, ವಿಮರ್ಶೆ, ಟೀಕೆ ಹೀಗೆ ನಾನಾ ಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸಿವೆ. ವಿಮರ್ಶೆಯ ಮಾನದಂಡಗಳನ್ನು ಹೊರಗಿನಿಂದ ಮಾತ್ರ ತಂದು ಅನ್ವಯಿಸಿ ನೋಡದೇ ಕೃತಿಯ ಒಳಗಿನಿಂದಲೂ ಪಡೆದು ವಿಸ್ತರಿಸಿಕೊಳ್ಳುವ ಅಗತ್ಯವನ್ನು

ಕೃತಿ ಸೂಚಿಸುತ್ತದೆ, ಒತ್ತಾಯಿಸುತ್ತದೆ. ಈ ಸೂಚನೆ ಒತ್ತಾಯಗಳಿಗೆ ಸ್ಪಂದಿಸುವ ಸಂವೇದನಾಶೀಲತೆ ಕೃತಿಯನ್ನು ಅನುಭವಿಸಲು, ಅರ್ಥೈಸಲು, ವ್ಯಾಖ್ಯಾನಿಸಲು ಅಗತ್ಯವಾಗುತ್ತದೆ.

'ಕುಸುಮ ಬಾಲೆ'ಯ ಭಾಷೆ ಕೆಲವರಿಗೆ ಸಂವಹನದ ಸಮಸ್ಯೆಯನ್ನು ಒಡ್ಡಿದೆ. ಭಾಷೆಯ ವಾಚ್ಯಾರ್ಥ ಗ್ರಹಿಕೆಯೇ ತೊಡಕಿನ ಮೂಲವಾದಾಗ ಆ ಕೃತಿಯ ಬಗ್ಗೆ ಸಹಾನುಭೂತಿ ಪರವಾದ ಪ್ರತಿವಾದ ಪ್ರತಿಕ್ರಿಯೆಯನ್ನು ಓದುಗರಿಂದ ನಿರೀಕ್ಷಿಸುವಂತಿಲ್ಲ. ಆದರೆ ಆ ಸಂವಹನದ ತೊಡಕು ಮೂಲತಃ ಬಳಕೆಯಾದ ಭಾಷೆಗೆ ಸಂಬಂಧಿಸಿದ್ದೋ, ಅಪರಿಚಿತತೆಯ ಕಾಣದಿಂದಾಗಿ ಓದುಗನಿಗೆ ಉಂಟಾದದ್ದೋ? ಇದು ಮುಖ್ಯ ಪ್ರಶ್ನೆ. ಆ ಕೃತಿಯಲ್ಲಿ ಬಳಕೆಯಾಗಿರುವ ಭಾಷೆಯನ್ನು ಸೃಜನಶೀಲ ಸಂದರ್ಭದಲ್ಲಿ ಸಮರ್ಥಿಸಿಕೊಳ್ಳುವಷ್ಟು ಸತ್ವಶಾಲಿಯಾಗಿದ್ದರೆ ವಾಚ್ಯಾರ್ಥ ಗ್ರಹಿಕೆಯ ನೆಲೆಯಲ್ಲಿಯೇ ಸಂವಹನದ ಸಮಸ್ಯೆಯನ್ನು ಎದುರಿಸುತ್ತಿರುವವರಿಗೆ ಆ ಭಾಷೆಯನ್ನು ಅರ್ಥ ಮಾಡಿಕೊಳ್ಳುವದಕ್ಕೆ ಮಾತ್ರವಲ್ಲ, ಅದು ಅಪೇಕ್ಷಿಸುವ ಸಂವೇದನಾಶೀಲತೆಯನ್ನು ಪಡೆದುಕೊಳ್ಳುವದಕ್ಕೆ ಸಂಬಂಧಿಸಿದಂತೆ ಕೂಡ ತಮ್ಮ ಕಡೆಯಿಂದಲೂ ಅಗತ್ಯವಾದ ಪೂರ್ವ ಸಿದ್ಧತೆ ಮಾಡಿಕೊಳ್ಳುವ ವಿನಯ ಪರಿಶ್ರಮ ಅಗತ್ಯವಾಗುತ್ತದೆ.

ಈ ಮೇಲಿನ ವಿಶ್ಲೇಷಣೆ ಆಶಯನಿಷ್ಠ ವಿಮರ್ಶೆಗೆ ಹೊರಳಿಕೊಂಡ ಸ್ವರೂಪವನ್ನು ತಿಳಿಸುತ್ತದೆ. ಒಂದು ಕೃತಿಯ ಹೊಸ ಬಗೆಯ ರಚನಾ ವಿಧಾನ, ಭಾಷೆ, ನಿರೂಪಣೆಯ ಸ್ವರೂಪ, ದೃಷ್ಟಿ – ಧೋರಣೆ ಇತ್ಯಾದಿಗಳಿಂದ ಸಾಹಿತ್ಯ ವಲಯಕ್ಕೆ ಹೊಸ ಬಗೆಯ ಸ್ವರೂಪ ನಿರ್ಮಾಣವಾಗಿದೆ. ಈ ವಿಶಿಷ್ಟವಾದ ಕೃತಿಯಿಂದ ಓದುಗರಿಗೆ, ವಿಮರ್ಶಕರಿಗೆ ಎದುರಾಗಿರುವ ಹಲವು ಪ್ರಶ್ನೆಗಳನ್ನು ಗುರುತಿಸುತ್ತಾರೆ. ಇವರು ಪ್ರಶಂಸೆ, ವಿಮರ್ಶೆ, ಟೀಕೆ, ಈ ಮೂರನ್ನು ಪ್ರತಿಕ್ರಿಯೆಗಳಾಗಿ ಗುರುತಿಸಿ ಕ್ರಮವಾಗಿ ಪುಸ್ತಕ ವಿಮರ್ಶೆಯ ಆಯಾಮವನ್ನು ತಿಳಿಸುತ್ತಾ ಹೋಗುತ್ತಾರೆ. ಅತಿ ಆತ್ಮೀಯರಾದವರ ಕೃತಿಗಳಿಗೆ ಪ್ರಶಂಸೆಯಾಗಿಯೂ, ವಸ್ತುನಿಷ್ಠ ಸ್ವರೂಪದಲ್ಲಿ ವಿಮರ್ಶೆಯಾಗಿಯೂ, ಮಿತ್ರರಲ್ಲದವರ ಕೃತಿಗಳಾದರೆ ಟೀಕೆಗಳಾಗಿ ರೂಪುಗೊಳ್ಳುವ ಸ್ವರೂಪವನ್ನು ಸೂಚಿಸುತ್ತಾರೆ. ಹೀಗಾಗಿ ಹೊಸ ಬಗೆಯ ಕೃತಿಯ ಪ್ರಕಟಣೆಯಿಂದ, ಹಳೆಯ ವಿಮರ್ಶಾ ಮಾನದಂಡಗಳು ತಮ್ಮ ಶಕ್ತಿ ಕಳೆದುಕೊಂಡಿರುವುದನ್ನು ಗುರುತಿಸುತ್ತಾ ವಿಮರ್ಶೆಯ ಮಾನದಂಡಗಳನ್ನು ಹೊರಗಿನಿಂದ ಮಾತ್ರ ತಂದು ಅನ್ವಯಿಸಿ ನೋಡದೇ ಕೃತಿಯ ಒಳಗಿನಿಂದಲೂ ಪಡೆದು ವಿಸ್ತರಿಸಿಕೊಳ್ಳುವ ಅಗತ್ಯವನ್ನು ಕೃತಿ ಸೂಚಿಸುತ್ತದೆ. ಒತ್ತಾಯಿಸುತ್ತದೆ. ಈ ಸೂಚನೆ, ಒತ್ತಾಯಗಳಿಗೆ, ಸ್ಪಂದಿಸುವ ಸಂವೇದನಾಶೀಲತೆ ಕೃತಿಯನ್ನು ಅನುಭವಿಸಲು, ಅರ್ಥೈಸಲು, ವ್ಯಾಖ್ಯಾನಿಸಲು ಅಗತ್ಯವಾಗುತ್ತದೆ ಎಂದು ಹೇಳುವಲ್ಲಿ ಪುಸ್ತಕ ವಿಮರ್ಶೆ ಮತ್ತು ಹೊಸ ಆಯಾಮವನ್ನು ಪಡೆದುಕೊಳ್ಳಬೇಕಾದ ಸಾಂಸ್ಕೃತಿಕ ಅನಿವಾರ್ಯತೆಯನ್ನು ಕುರಿತು ಹೇಳುತ್ತದೆ. ಅದು ನಮ್ಮ ಮಾನದಂಡಗಳನ್ನು ಮರು ಪರಿಶೀಲನೆಗೆ

ಒಳಪಡಿಸಬೇಕೆನೋ ಎಂಬ ಸಂಶಯ ವ್ಯಕ್ತಪಡಿಸುವ ಈ ಮನೋಭಾವದ ಹಿಂದೆ ಆಶಯನಿಷ್ಠ ಪುಸ್ತಕ ವಿಮರ್ಶೆಗೆ ತುಡಿಯುವ, ಹೊಸದಾಗಿ ರೂಪಿಸಿಕೊಳ್ಳಬೇಕಾದ ಮಾನದಂಡದ ಬಗೆಗೆ ಒತ್ತಡದ ಅಂಶ ಅಡಗಿದೆ. ಅದರ ಜೊತೆಯಲ್ಲಿಯೇ ಪುಸ್ತಕ ವಿಮರ್ಶಕರು, ವಿಮರ್ಶಕರು, ಓದುಗರು ತಮ್ಮ ಓದಿನ ನೆಲೆಯನ್ನು ಬದಲಾಯಿಸಿಕೊಳ್ಳಬೇಕಾದ ಮತ್ತು ಅರ್ಥೈಸಿಕೊಳ್ಳುವ ವಿಧಾನವನ್ನು ಹೊಸದಾಗಿ ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕುರಿತು ಕೃತಿಗಳು ಅಪೇಕ್ಷಿಸುವ ಸಂವೇದನಾ ಶೀಲತೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೂಡ ತಮ್ಮ ಕಡೆಯಿಂದಲೂ ಅಗತ್ಯವಾದ ಪೂರ್ವ ಸಿದ್ಧತೆ ಮಾಡಿಕೊಳ್ಳುವ ವಿನಯ, ಪರಿಶ್ರಮ ಅಗತ್ಯವಾಗುತ್ತದೆ ಎಂದು ಹೇಳುತ್ತಾರೆ.

ಈ ಮುಖೇನ ಓದುಗರು ಹೊಸ ಓದುಗರಿಗೆ ತೆರೆದುಕೊಳ್ಳುವುದರೊಂದಿಗೆ ಕೆಲವು ಪೂರ್ವ ಸಿದ್ಧತೆಗಳು ಅವಶ್ಯಕ. ಅದಕ್ಕಾಗಿ ವಿನಯ, ಪರಿಶ್ರಮಗಳನ್ನು ಕುರಿತು ಹೇಳುತ್ತಾರೆ. ವಿನಯ ಕೃತಿಗಳನ್ನು ಒಳಗು ಮಾಡಿಕೊಳ್ಳುವ ರೀತಿಯನ್ನು ತಿಳಿಸಿದರೆ ಕೃತಿಯನ್ನು ವಸ್ತುನಿಷ್ಠವಾಗಿ ಅರ್ಥೈಸಲು ಪರಿಶ್ರಮದ ಅಗತ್ಯತೆಯನ್ನು ಹೇಳುತ್ತಾರೆ. ನಮ್ಮ ಮಾನದಂಡವನ್ನೇ ಮರು ಪರಿಶೀಲನೆಗೆ ಒಳಪಡಿಸಬೇಕೇನೋ ಎಂಬ ಸಂಶಯ ವ್ಯಕ್ತಪಡಿಸುವ ಮಾತಿನಲ್ಲಿ ಈ ಒತ್ತಡದ ಅಂಶ ಎದ್ದು ಕಾಣುತ್ತದೆ. ಸಾಹಿತ್ಯ ಕೃತಿಯ ಸಾಮಾಜಿಕ ಅರ್ಥ ಮೌಲ್ಯಗಳನ್ನು ವಿಮರ್ಶಕರು ನಿರ್ದಿಷ್ಟವಾಗಿ ಗುರುತಿಸಿದರು. ಸಾಹಿತ್ಯದ ರೂಪ ತಂತ್ರಗಳಿಗಿಂತ ಅದರ ಆಶಯ ನಿಲುವುಗಳನ್ನು ವಿಶ್ಲೇಷಿಸಬೇಕು ಮತ್ತು ಸಾಂಸ್ಕೃತಿಕ ನೆಲೆಯಲ್ಲಿಟ್ಟು ಕೃತಿಯನ್ನು ಅಭ್ಯಾಸಿಸಬೇಕು. ಹೀಗಾಗಿ ಸಂಸ್ಕೃತಿ ಸಮಾಜಗಳ ಹೊರತಾಗಿ ಯಾವುದೇ ಕೃತಿಯನ್ನು ನೋಡಲಾಗುವುದಿಲ್ಲವೆಂಬುದರ ಕಡೆ ಪುಸ್ತಕ ವಿಮರ್ಶೆ ವಾಲಿತು. ಆದರೆ ಕೆಲವೊಮ್ಮೆ ಗದ್ಯದ ರೀತಿಯಲ್ಲೇ ಪದ್ಯವನ್ನು, ಕಾವ್ಯವನ್ನು ವಿಮರ್ಶಿಸಲು ಹೊರಟರು. ಉದಾಹರಣೆಗೆ ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ಸಂಗೀತದ ಅಂಶವನ್ನು ತೆಗೆದು ಹಾಕಿ ಬಿಟ್ಟರೆ ಕೇವಲ ಪದ ಪುಂಜವಾಗಿ ಉಳಿದುಬಿಡುವ ಅವರ ಕಾವ್ಯ ಕೇವಲ ಹಾಡುಗಾರಿಕೆಗಿಂತ ಹೊರತಾದ ಸಾಧ್ಯತೆಗಳನ್ನು ಹಮ್ಮಿಕೊಂಡಿಲ್ಲ. ಟಿ.ಪಿ. ಅಶೋಕ ಹೀಗೆ ವಿಮರ್ಶಿಸಿದ್ದು ಹೆಚ್ಚಾಗಿ ರೂಪ ಪ್ರಧಾನ ಮನೋಧರ್ಮವೇ. ಗದ್ಯಕ್ಕೂ ಮತ್ತು ಪದ್ಯಕ್ಕೂ ಬೇರೆಯದೇ ಆದ ವಿಮರ್ಶೆಯ ನಿಲುವುಗಳನ್ನು ಹಿಂದಿನ ಪರಂಪರೆ ಅನ್ವೇಷಿಸಲು ಯತ್ನಿಸಿತು. ಆದರೆ ಈ ಸಂದರ್ಭದ ಪುಸ್ತಕ ವಿಮರ್ಶಕರು ಈ ರೀತಿಯ ನಿಲುವುಗಳನ್ನು ಬದಲಾಯಿಸಿಕೊಳ್ಳದೇ, ಕೃತಿಯ ಕೊರತೆಗಳನ್ನು ನೇರವಾಗಿ ಹೇಳುವ ವಿಮರ್ಶಕ ಮೌಲ್ಯ ಗುಣವನ್ನು ಪಡೆದುಕೊಂಡರು.

"ಯಾವುದೇ ಸಾಹಿತ್ಯ ಸಂಪ್ರದಾಯವಾಗಲಿ ಅದು ಓದುಗನಲ್ಲಿ ಮತ್ತು ವಿಮರ್ಶಕನಲ್ಲಿ ಅದರ ಸೈದ್ಧಾಂತಿಕ ಅಥವಾ ತಾತ್ವಿಕ ಪರಿಕಲ್ಪನೆಗೆ ಪ್ರತಿಕ್ರಿಯಿಸಬೇಕೆಂಬ ಒತ್ತಡವನ್ನು ತರುವುದರಲ್ಲಿ

ವಿಫಲವಾದರೆ ಮಹತ್ವಪೂರ್ಣವಾದ ಸಾಹಿತ್ಯ ಸಂಪ್ರದಾಯವಾಗುವುದಿಲ್ಲ."[೮] ಈ ಮೇಲಿನ ಉಲ್ಲೇಖವನ್ನು ಗಮನಿಸಿದರೆ ಹೊಸ ಸಾಹಿತ್ಯ ನಿರ್ಮಾಣವಾಗುವುದರ ಅಗತ್ಯವಾದ ಓದುಗರ ಮತ್ತು ವಿಮರ್ಶಕರ ಪ್ರತಿಕ್ರಿಯೆಯ ಅಗತ್ಯವನ್ನು ಭಾವಿಸಲಾಗಿದೆ. ಅಂದರೆ ಇಲ್ಲಿ ಪ್ರತಿಕ್ರಿಯೆ ಬಹಳ ಮುಖ್ಯ ಎಂಬುದು ಗೊತ್ತಾಗುತ್ತದೆ. ಅಲ್ಲದೇ ಪ್ರತಿಕ್ರಿಯೆ ಹೊಸ ಸಾಹಿತ್ಯ ನಿರ್ಮಾಣದಲ್ಲಿ ಮಹತ್ತರ ಪಾತ್ರವಹಿಸಬಹುದೆಂಬ ನಿಲುವಿದೆ. ಈ ಪ್ರತಿಕ್ರಿಯೆ ಹಲವು ರೂಪಗಳಲ್ಲದೆ ಮುಖ್ಯವಾಗಿ ಅದು ವಿಮರ್ಶೆ ಮತ್ತು ಪುಸ್ತಕ ವಿಮರ್ಶೆಯೆಂದು ಹೇಳಬಹುದು. ವಿಮರ್ಶೆ ತುಂಬಾ ತಡವಾಗಿ ಬರುವಂಥ ಪ್ರತಿಕ್ರಿಯೆ. ಆದರೆ ಪುಸ್ತಕ ವಿಮರ್ಶೆ ತತ್‌ಕ್ಷಣದ ಪ್ರತಿಕ್ರಿಯೆಯಾಗಿದೆ. ಹೀಗಾಗಿ ಪುಸ್ತಕ ವಿಮರ್ಶೆಗೆ ಒಂದು ಪರಂಪರೆಯನ್ನು ನಿರ್ಮಿಸುವ ಸತ್ವವಿದೆ; ಶಕ್ತಿಯಿದೆ ಎಂಬುದು ಮೇಲಿನ ಮಾತುಗಳಿಂದ ತಿಳಿಯುತ್ತದೆ.

ಈ ಕಾರಣದಿಂದ ವಿಮರ್ಶಾತ್ಮಕ ಪ್ರತಿಕ್ರಿಯೆ ಈ ಸಂದರ್ಭದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಆದ್ದರಿಂದಲೇ ಆಶಯ ಪ್ರಧಾನ ಪುಸ್ತಕ ವಿಮರ್ಶೆ, ವಿಮರ್ಶೆ ಪರಸ್ಪರ ಪ್ರತಿಕ್ರಿಯೆಗಳಿಂದಲೇ ಬೆಳೆಯುತ್ತಿದೆ ಎನ್ನಬಹುದು.

ಹಿಂದಿನ ರೂಪ ಪ್ರಧಾನ ಪುಸ್ತಕ ವಿಮರ್ಶೆಯಲ್ಲಿನ ಟೀಕೆಗಳನ್ನು ವಿರೋಧಿಸುತ್ತ ಕೃತಿಯನ್ನು ಹೊಸದಾಗಿ ನೋಡುವ ದೃಷ್ಟಿ ಬೆಳೆಸಿದ್ದು ಆಶಯ ಪ್ರಧಾನ ಪುಸ್ತಕ ವಿಮರ್ಶೆಯನ್ನು ನಿರ್ದೇಶಿಸಿದ್ದು, ಮಾರ್ಕ್ಸಿಸ್ಟ್ ತಾತ್ವಿಕತೆ. ಬಂಡಾಯ ಸಾಹಿತ್ಯ ಒಂದೇ ತಾತ್ವಿಕತೆಗೆ ಬದ್ಧವಾಗಿರಲಿಲ್ಲ ಹಾಗೆ ಆಗ ಇದ್ದ ಆಶಯ ಪ್ರಧಾನ ಪುಸ್ತಕ ವಿಮರ್ಶೆಯಲ್ಲಿಯೂ ಲೋಹಿಯಾ ವಾದಿಗಳು, ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು, ಮಾರ್ಕ್ಸಿಸ್ಟರು ಎಲ್ಲರೂ ಒಂದು ಗೂಡಿದರು. ಇದರ ಪರಿಣಾಮವಾಗಿ ವಿಮರ್ಶೆಯ ದಿಕ್ಕು ಹಿಂದಿನ ವಿಮರ್ಶಾ ಪರಂಪರೆಗಿಂತ ಭಿನ್ನವಾಗಿ ನಡೆಯಿತು. ಹೀಗೆ ಬದಲಾದುದರ ಫಲವೇ ರಸ ಪ್ರಧಾನ, ರೂಪ ಪ್ರಧಾನ ಪುಸ್ತಕ ವಿಮರ್ಶೆಗಿಂತ ಗಟ್ಟಿಯಾದ, ಸಾಂಸ್ಕೃತಿಕ ಆವರಣವನ್ನು ಒಳಗೊಂಡ ವಿಮರ್ಶೆಯಾಗಿ ರೂಪುಗೊಳ್ಳುತ್ತಿರುವುದು.

ಕೊನೆ ಟಿಪ್ಪಣಿಗಳು

೧. ಸಾರ್ಥಕ (ನೂರಾರು ವಿಮರ್ಶೆಗಳ ಲೇಖನ) ಪು – ೧೭

೨. ಅದೇ., ಪು – ೪

೩. ಅದೇ., ಪು – ೩

೪. ಸಾಕ್ಷಿ ಶರತ್ ಸಂಚಿಕೆ, ೧೯೭೧, ಪು – ೧೧೨

೫. ನೀಲಾಂಜನ, ಪು – ೬೦

೬. ಸಂಕ್ರಮಣ, ೧೯೯೯ ಅಕ್ಟೋಬರ್, ಪು – ೩೨

೭. ಅಮೃತ ಮತ್ತು ಗರುಡ, ಪು – ೩೫

೮. ಸಾಹಿತ್ಯ ವಿಮರ್ಶೆ, ೧೯೮೩, ಪು – ೪೨

ಅಧ್ಯಾಯ ೩

ಪುಸ್ತಕ ವಿಮರ್ಶೆಯನ್ನು ಕುರಿತ ವಿಮರ್ಶಕರ ಅಭಿಪ್ರಾಯಗಳ ಸಮೀಕ್ಷೆ

ಅಧ್ಯಾಯ ೩

ಪುಸ್ತಕ ವಿಮರ್ಶೆಯನ್ನು ಕುರಿತ ವಿಮರ್ಶಕರ ಅಭಿಪ್ರಾಯಗಳ ಸಮೀಕ್ಷೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯನ್ನು ಕುರಿತು ಬೇರೆ ಬೇರೆ ಕಾಲಘಟ್ಟದಲ್ಲಿ ಪುಸ್ತಕ ವಿಮರ್ಶಕರ ಸ್ವತಃ ಅಭಿಪ್ರಾಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪರಸ್ಪರ ಭಿನ್ನ ಭಿನ್ನ ಧೋರಣೆಗಳಿಂದ ಕೂಡಿರುವ ಇವರ ಆಲೋಚನೆಗಳು, ಚಿಂತನೆಗಳು, ತಾತ್ವಿಕ ವಿಚಾರಗಳನ್ನು ಮತ್ತು ಮನೋಧರ್ಮಗಳನ್ನು ಒಟ್ಟಿಗೆ ಇಟ್ಟು ಪರೀಕ್ಷಿಸುವ ಪ್ರಯತ್ನ ಇಲ್ಲಿದೆ.

೧. ಕೆ.ವಿ. ತಿರುಮಲೇಶರವರ 'ಪುಸ್ತಕ ವಿಮರ್ಶೆಯ ಇತಿಮಿತಿಗಳು' ಎಂಬ ಲೇಖನವು ಈ ವಿಷಯದ ಬಗೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ. 'ಪುಸ್ತಕ ವಿಮರ್ಶೆ'ಯನ್ನು ಒಂದು ಅಧ್ಯಯನ ವಸ್ತುವನ್ನಾಗಿ ಹೊಸ ರೀತಿಯ ಆಲೋಚನೆಗೆ ತೆರೆದುಕೊಂಡ ಲೇಖನ ಇದಾಗಿದೆ.

"ಜವಾಬ್ದಾರಿಯುತವಾದ 'ಪುಸ್ತಕ ವಿಮರ್ಶೆ' ಸುಲಭದ ಕೆಲಸವಲ್ಲವೆಂಬುದು ನನಗೆ ಈ ಕೆಲಸಕ್ಕೆ ಕೈ ಹಚ್ಚಿದಂದಿನಿಂದಲೆ ಗೊತ್ತಾದ ಸಂಗತಿ. ಪುಸ್ತಕ ವಿಮರ್ಶೆಗೆ ನನಗೆ ಆಹ್ವಾನ ಬಂದಾಗ ನಾನದನ್ನು ಒಂದು ಪಂಥಾಹ್ವಾನದ ದೃಷ್ಟಿಯಿಂದಲೇ ಸ್ವೀಕರಿಸಿಕೊಂಡವನು. ವಿಮರ್ಶೆಯ ಭಾಷೆಗಳಲ್ಲಿ ಕ್ಲೀಷೆಗಳೂ ತುಂಬಿ ಅದು ಯಾವ ಹೊಳಪನ್ನೂ ಓದುಗನಿಗೆ ಕೊಡಲು ಅಸಮರ್ಥವಾದ ಒಂದು ಸನ್ನಿವೇಶವನ್ನು ನಾನು ಗಮನಿಸಿದ್ದೆ. ಇದರಿಂದ ಭಾಷೆಯನ್ನು ಮುಕ್ತಿಗೊಳಿಸಿ ಭಾಷೆ ಮನುಷ್ಯನ ಚಿಂತನೆಗೆ ಒಂದು ಸಾಧನವಾಗುವಂತೆ ಮಾಡುವ ತವಕ ನನಗಿತ್ತು. ಆದ್ದರಿಂದಲೇ 'ಕಾಳಜಿ', 'ದುಡಿಸಿಕೊಳ್ಳು', ಮುಖ್ಯವಾಗುತ್ತದೆ ಎಂದು ಮುಂತಾದ ಪದಗಳನ್ನು ಪದೇ ಪದೇ ಬಳಸದೆಯೇ ಪುಸ್ತಕ ವಿಮರ್ಶೆ ಸಾಧ್ಯವೆ ಎಂದು ನೋಡೋಣವೆನಿಸಿತು. ಎಲ್ಲರೂ ಬಳಸುವ

ಈ ಪದಗಳನ್ನು ಬಳಸದೆ ಮಡಿವಂತನಾಗುವ ಇರಾದೆಯಿಂದಲ್ಲ. ಇವು ಮನಸ್ಸನ್ನು ಮಂಕುಗೊಳಿಸಲು ತೊಡಗಿವೆಯೆಂದು ನನಗೆ ಅನಿಸಿದ್ದರಿಂದ ಅದೇ ರೀತಿ ಓದುಗರನನ್ನು ಅವಲಂಬಿತ ವಾಕ್ಯಗಳ ಭೂಲ್ ಬುಲಯ್ಯದೊಳಗೆ ಸ್ತುತಿಸಿ ಈ ವಿಮರ್ಶಕ ಏನೋ ಅತಿ ಗಂಭೀರವಾದ ವಿಚಾರಗಳನ್ನು ಹೇಳುತ್ತಿದ್ದಾನೆಂಬ ಭ್ರಮೆಯನ್ನು ಉಂಟುಮಾಡುವುದೂ ನನಗೆ ಇಷ್ಟವಿರಲಿಲ್ಲ".

"ಒಬ್ಬ ಲೇಖಕ ಆತ ಹೊಸಬನಿರಲಿ, ಹಳಬನಿರಲಿ, ತನ್ನ ಪುಸ್ತಕದ ವಿಮರ್ಶೆ ಆದಷ್ಟು ಬೇಗನೆ ಪತ್ರಿಕೆಗಳಲ್ಲಿ ಬರಲು ಆಶಿಸುತ್ತಾನೆ. (ಇದಕ್ಕೆ ಶಿವರಾಮ ಕಾರಂತರ ಅಪವಾದಗಳು ಯಾವಾಗಲೂ ಇದ್ದಾವೆ) ವಿಮರ್ಶೆ ಅನುಕೂಲವಾಗಿದ್ದರೆ ಸಂತೋಷವಾಗುವುದು. ಅನಾನುಕೂಲವಾಗಿದ್ದರೆ ಬೇಸರ, ತಿರಸ್ಕಾರ, ಸಿಟ್ಟು ಬರುವುದು ಸ್ವಾಭಾವಿಕ. ಇದೆಲ್ಲ ಪುಸ್ತಕ ವಿಮರ್ಶಕನಿಗೆ ಗೊತ್ತಿದ್ದರೂ ಆತ ವಿಮರ್ಶೆಯ ವಸ್ತುನಿಷ್ಠತೆಗೆ ಪ್ರಾಮಾಣಿಕನಾಗಿರಲೇ ಬೇಕಾಗುತ್ತದೆ. ಇಲ್ಲಿ ಪುಸ್ತಕ ವಿಮರ್ಶಕನ ಹೊಣೆಯ ಬಗ್ಗೆ ಒಮ್ಮತವಿಲ್ಲದೆ ಇರಬಹುದು. ಪುಸ್ತಕ ವಿಮರ್ಶಕನ ಕೆಲಸ ಕೇವಲ ಪುಸ್ತಕ ಪರಿಚಯ ಎಂಬ ಅಭಿಪ್ರಾಯ ಕೆಲವರಲ್ಲಿದೆ ಇವರ ಪ್ರಕಾರ ಪುಸ್ತಕ ವಿಮರ್ಶೆಯಿಂದ ಓದುಗರಿಗೆ ಪುಸ್ತಕದ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳು ದೊರೆತರೆ ಸಾಕು. ಉದಾಹರಣೆಗೆ ಪುಸ್ತಕ ಒಂದು ಕಾದಂಬರಿಯಾಗಿದ್ದರೆ, ಅದರ ಸಾರಾಂಶವೇನು? ಪುಟಗಳೆಷ್ಟು? ಓದಿಕೊಂಡು ಹೋಗುತ್ತದೆಯೇ ಇತ್ಯಾದಿ, ಇಂತಹ ಮಾಹಿತಿಗಳಿಂದ ಬಹುಶಃ ಓದುಗ ಈ ಕಾದಂಬರಿಯನ್ನು ಕೊಂಡು ಓದಬೇಕೆ ಬೇಡವೇ? ಎಂಬ ನಿರ್ಧಾರಕ್ಕೆ ಬರುವುದು ಸಾಧ್ಯವಿದ್ದರೂ ಇರಬಹುದು. ಈ ರೀತಿಯ ಪುಸ್ತಕ ಪರಿಚಯಗಳಿಗೆ ಮಾಧ್ಯಮಗಳಲ್ಲಿ ಸಾಧ್ಯವಿಲ್ಲವೆಂದು ನಾನು ಹೇಳಲಾರೆ. ಆದರೆ ಪುಸ್ತಕ ವಿಮರ್ಶೆಯೆನ್ನುವುದು ಪುಸ್ತಕ ಪರಿಚಯದ ರೂಪದಲ್ಲಿ ಮಾತ್ರವೇ ಇರಬೇಕು ಎಂಬ ವಿಶ್ವಾಸ ಸಾರ್ವತ್ರಿಕವಲ್ಲ.

ಕನ್ನಡದಲ್ಲಂತೂ ಪುಸ್ತಕ ವಿಮರ್ಶೆಗೆ ಒಂದು ಒಳ್ಳೆಯ ಪರಂಪರೆಯೇ ಇದೆ. ಯಾವ ಪುಸ್ತಕ ವಿಮರ್ಶಕರೂ ಕೃತಿಯ ಸಾರಾಂಶವನ್ನು ಕೊಟ್ಟು ಅದರ ಬಗ್ಗೆ ಮಾಹಿತಿಗಳನ್ನು ನೀಡುವಷ್ಟರಲ್ಲೇ ತೃಪ್ತರಾಗುವುದಿಲ್ಲ. ಕೃತಿ ಚೆನ್ನಾಗಿದೆಯೇ ಇದ್ದರೆ ಯಾವ ಯಾವ ಕಾರಣಕ್ಕಾಗಿ ಎಂದು ಹುಡುಕಿ ನೋಡುವ ಪ್ರವೃತ್ತಿ ಮೊದಲನಿಂದಲೂ ಕಂಡುಬರುತ್ತದೆ. ಕಾಲದಿಂದ ಕಾಲಕ್ಕೆ ಸಾಹಿತ್ಯದ ಒಟ್ಟಾರೆ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುವ ಕ್ರಾಂತಿಗಳ, ಒಲವುಗಳ, ವಿರಸಗಳ ಪ್ರಭಾವ ಪುಸ್ತಕ ವಿಮರ್ಶೆಯ ಮೇಲೆಯೂ ಬಿದ್ದಿರುವುದನ್ನು ಕಾಣುತ್ತೇವೆ. ಈ ಪ್ರಭಾವ ಒಳಿತಿರಬಹುದು. ಕೆಡಕಿರಬಹುದು, ಕೃತಿಗೆ ಇದರಿಂದ ಅಪಚಾರವೂ ಆಗಬಹುದು. ಏನೇ ಇದ್ದರೂ, ಪುಸ್ತಕ ವಿಮರ್ಶೆಯೆನ್ನುವುದು ಅಕಾಡೆಮಿಕ್ ವಿಮರ್ಶೆಗಿಂತ ಹೆಚ್ಚೇನು ಭಿನ್ನವಾಗಿರದೆ. ಅದಕ್ಕೆ ಸಮಾನಾಂತರವಾಗಿ ಬೆಳೆದು ಬಂದಿರುವುದು ಗಮನಾರ್ಹ ಎಂದರೆ ಪುಸ್ತಕ ವಿಮರ್ಶೆಯ

ಉದ್ದೇಶ ಪರಿಚಯವಾಗಿರದೆ ಅಥವಾ ಕೇವಲ ಪರಿಚಯವೊಂದೇ ಆಗಿರದೆ ಕೃತಿಯ ಮೌಲ್ಯಮಾಪನವು ಹೌದು ಎಂದಾಯಿತು. ಬಹುಶಃ ಪುಸ್ತಕ ವಿಮರ್ಶಕನ ನಿಜವಾದ ಧರ್ಮ ಸಂಕಟವಿರುವುದು ಈ ಸಂದಿಗ್ಧತೆಯಲ್ಲಿಯೇ ಎಂದೆನಿಸುತ್ತದೆ."[7]

ಕೆ.ವಿ. ತಿರುಮಲೇಶರ ಈ ಲೇಖನ ಈ ನಿಟ್ಟಿನಲ್ಲಿ ಹೊಸ ಅನ್ವೇಷಣೆಗೆ ತೊಡಗಲು ಯತ್ನಿಸಿರುವ ಲೇಖನ. ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ಬೇರೆ ಬೇರೆ ಎಂದು ಪರಿಭಾವಿಸದೆ ಒಟ್ಟಿಗೆ ಗ್ರಹಿಸುವ ನೆಲೆಯದು. ಇದು ಈ ರೀತಿಯ ಲೇಖನಗಳಲ್ಲಿಯೇ ಮೊದಲನೆಯದದು. ಪುಸ್ತಕ ವಿಮರ್ಶೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿಟ್ಟು ಪರಿವೀಕ್ಷಿಸಿರುವ ಈ ಲೇಖನ ಪುಸ್ತಕ ವಿಮರ್ಶೆಯನ್ನು ಹೇಳುತ್ತಲೇ ಪುಸ್ತಕ ವಿಮರ್ಶಕರನ್ನು ಸಾಹಿತ್ಯ ವಿಮರ್ಶಕರ ಮಟ್ಟದಲ್ಲೇ ಗುರುತಿಸುತ್ತದೆ. ಈಗಾಗಲೇ ತಿಳಿದಿರುವಂತೆ ತಿರುಮಲೇಶ್ ಅವರು ಪುಸ್ತಕ ವಿಮರ್ಶೆಯನ್ನು ಅಕಾಡೆಮಿಕ್ ವಿಮರ್ಶೆಯ ಜೊತೆಯಲ್ಲಿಯೇ ಗುರುತಿಸುತ್ತಾರೆ. ಇವೆರಡನ್ನು ಒಂದೇ ಎಂದು ಪರಿಭಾವಿಸಿ 'ಕನ್ನಡದಲ್ಲಂತೂ ಪುಸ್ತಕ ವಿಮರ್ಶೆಗೆ ಒಂದು ಒಳ್ಳೆಯ ಪರಂಪರೆಯೇ ಇದೆ. ಯಾವ ಪುಸ್ತಕ ವಿಮರ್ಶೆಯು ಕೃತಿಯ ಸಾರಾಂಶವನ್ನು ಕೊಟ್ಟು ಅದರ ಬಗ್ಗೆ ಮಾಹಿತಿಗಳನ್ನು ನೀಡುವುದರಲ್ಲೇ ತೃಪ್ತರಾಗುವುದಿಲ್ಲ. . . . ಪುಸ್ತಕ ವಿಮರ್ಶೆ ಕೃತಿಯ ಒಳ ವಿವರಗಳಿಂದ ಮೌಲ್ಯಮಾಪನವನ್ನು ಮಾಡುವಂತಹದ್ದು ಎಂದು ತಾತ್ವಿಕವಾದ ಸ್ವರೂಪವನ್ನು ಕಟ್ಟಿಕೊಟ್ಟಿದ್ದಾರೆ.

ಇಲ್ಲಿನ ಚರ್ಚೆಯನ್ನು ತಿರುಮಲೇಶರು ಕೃತಿ ಲೇಖಕರು ತಾವು ಕೃತಿ ಬಿಡುಗಡೆ ಮಾಡಿದ ಸಂದರ್ಭದಲ್ಲಿನ ತುಮುಲ . . . . ಮುಂತಾದವುಗಳಿಂದ ಪುಸ್ತಕ ವಿಮರ್ಶೆ ಬೇಗ ಬರಲೆಂದು ಆಶಿಸುತ್ತಾರೆ ಎಂದು ಹೇಳಿಕೆಯಿಂದ ಆರಂಭ ಮಾಡುತ್ತಾರೆ. ಈ ರೀತಿಯ ಪುಸ್ತಕ ವಿಮರ್ಶೆಗಳನ್ನು ಮಾಡುವ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಎದುರಿಸಬೇಕಾದ ಸನ್ನಿವೇಶ ಮತ್ತು ಕೃತಿಕಾರರಿಗಾಗುವ ಅನುಕೂಲ/ಅನಾನುಕೂಲಗಳನ್ನು ಕುರಿತು ಚರ್ಚಿಸುತ್ತಾರೆ. ಇದು ಬಹುಶಃ ತಿರುಮಲೇಶರವರು ಏಕಕಾಲದಲ್ಲಿ ಕೃತಿಕಾರರು, ಪುಸ್ತಕ ವಿಮರ್ಶಕರು ಆಗಿರುವುದರಿಂದ ಸಾಧ್ಯವಾಗಿರಬಹುದು. ಇವರು ಪುಸ್ತಕ ವಿಮರ್ಶೆಯ ಬಗ್ಗೆ ಬಹಳ ಮುಖ್ಯವಾದ ಪ್ರಶ್ನೆ ಎತ್ತುತ್ತಾರೆ. ಪುಸ್ತಕ ವಿಮರ್ಶೆ ಕೇವಲ ಪರಿಚಯವೇ? ಪರಿಚಯವಾಗಿಯಷ್ಟೇ ಇರಬೇಕೇ? ಇದರಿಂದ ಕೊಳ್ಳುಗರನ್ನು ಪುಸ್ತಕ ಕೊಳ್ಳಲು ಪ್ರಚೋದಿಸಬೇಕೆ? ಎಂದು ಕೇಳಿ ಕೊಳ್ಳುತ್ತಾರೆ. ಆದರೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳುವುದಕ್ಕಷ್ಟೇ ನಿಲ್ಲದೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪುಸ್ತಕ ವಿಮರ್ಶೆಯ ಹಿಂದಿನ ಸಾಂಸ್ಕೃತಿಕ ಸಂದರ್ಭ ಇತಿಹಾಸಗಳನ್ನು ಕುರಿತು ಆಲೋಚಿಸುತ್ತಾರೆ. ಜೊತೆಗೆ ಪುಸ್ತಕ ವಿಮರ್ಶಕರ ಜವಾಬ್ದಾರಿಯನ್ನು ಹೇಳುತ್ತಾರೆ. ಪುಸ್ತಕ ವಿಮರ್ಶಕರು ಪುಸ್ತಕವನ್ನು ಕೇವಲ ಪರಿಚಯ ಮಾಡಿಕೊಡುತ್ತಿಲ್ಲ ಎಂಬುದನ್ನು ತಿಳಿಪಡಿಸುತ್ತಾರೆ. ಅದಲ್ಲದೆ ಪುಸ್ತಕ ವಿಮರ್ಶೆ ಬೆಳೆಯಲು ಅದಕ್ಕೆ ಪ್ರಭಾವ ಬೀರಿದ ಹಲವು

ಸಾಂಸ್ಕೃತಿಕ ಅನಿವಾರ್ಯತೆಗಳನ್ನು ಪಟ್ಟಿಮಾಡಿ ಪುಸ್ತಕ ವಿಮರ್ಶೆಯೂ, ಸಾಹಿತ್ಯ ವಿಮರ್ಶೆಯೂ ಒಂದೇ ಎಂದು ಸಾರ್ವತ್ರೀಕರಿಸುತ್ತಾರೆ. ಹಾಗಾಗಿ ಪುಸ್ತಕ ವಿಮರ್ಶೆ ಕೇವಲ ಪರಿಚಯವಷ್ಟೇ ಅಲ್ಲ ಎಂದು ಅದಕ್ಕಿರುವ ಸಾಂಸ್ಕೃತಿಕ ಜವಾಬ್ದಾರಿಗಳನ್ನು ಗುರುತಿಸುತ್ತಾರೆ. ಅದರ ಜೊತೆಯಲ್ಲೇ ಪುಸ್ತಕ ವಿಮರ್ಶಕರು ಎದುರಿಸಬಹುದಾದ ತೊಂದರೆಗಳನ್ನು, ಸಂಕಟಗಳನ್ನು ವಿಶ್ಲೇಷಿಸುತ್ತಾರೆ.

೨. ರಂ. ಶ್ರೀ. ಮುಗಳಿಯವರು ಐವತ್ತರ ದಶಕದಲ್ಲಿದ್ದಂತಹ ಪುಸ್ತಕ ವಿಮರ್ಶೆಯ ಪರಿಸ್ಥಿತಿಯನ್ನು ಹೀಗೆ ಹೇಳುತ್ತಾರೆ. "ಈಗ ಮೊದಲಿಗಿಂತ ಹೇರಳವಾಗಿ ಅನೇಕ ಬಗೆಯ ಅದರಲ್ಲಿಯೂ ನಿರ್ಮಿತಿ ಪ್ರಧಾನವಾದ ಪುಸ್ತಕಗಳು ಹೊರಬೀಳುತ್ತಿವೆ. ಅವುಗಳೆಲ್ಲದರ ಯೋಗ್ಯ ವಿಮರ್ಶೆ ಈಗ ಆಗುತ್ತಿಲ್ಲ. ಕೆಲವಕ್ಕೆ 'ಸಾದರಸ್ವೀಕಾರ'ದಲ್ಲಿ ಸ್ಥಳ ಸಿಕ್ಕ ಮೇಲೆ ಮುಂದೆ ಅನಾದರ ಸ್ವೀಕಾರಕ್ಕೆ ಅವು ಸಿದ್ಧವಾಗಿರಬೇಕು. ವಿಮರ್ಶೆಯಾಗುತ್ತಿರುವ ಉಳಿದ ಕೆಲವಕ್ಕೆ ಎರಡು ಇಲ್ಲವೇ 'ನಾಲ್ಕು ಸಾಲಿನ ಮರ್ಯಾದೆ' ಸಿಕ್ಕರೆ ಅಷ್ಟರಿಂದ ಅವು ತೃಪ್ತಿ ಹೊಂದಬೇಕು. ಎಲ್ಲ ತರದ ಪತ್ರಿಕೆಗಳಲ್ಲಿ ಎಲ್ಲ ತರದ ವಿಮರ್ಶೆಗಳು ಬರುವುದಿರಿಂದ ವಿಮರ್ಶೆಗೆ ಒಂದು ನೆಲೆ ತೂಕ ಇಲ್ಲದಾಗುತ್ತಿದೆ. ಪತ್ರಿಕೆಗಳ ಸಲುವಾಗಿ ದುಡಿಯುತ್ತಿರುವವರ ಕಷ್ಟಗಳನ್ನು ಗಮನಿಸಿದರೆ, ಅವರಿಗೆ ಪುಸ್ತಕಗಳನ್ನು ಪೂರ್ತಿಯಾಗಿ ಓದಿ ಬರೆಯುವಷ್ಟು ಅವಕಾಶವಾಗಲಿ, ಮನಶಾಂತಿಯಾಗಲಿ ಇರುವುದಿಲ್ಲ. ಅವರು ಪುಸ್ತಕವನ್ನು ಮೇಲೆ ಕೆಳಗೆ ನೋಡಿ ಮುನ್ನುಡಿಯಿಂದ ಪ್ರೇರಣೆ ಹೊಂದಿಯಾದರೂ ಬಹುಶಃ ಓದಲಾರರು ಎಂಬುದರ ಮೇಲೆ ಬರೆಯಬಹುದು. ಈ ಪರಿಸ್ಥಿತಿ ಸರಿಯಾದುದೆಂದು ಯಾರು ಅನ್ನಲಾರರು."[೨]

ಈ ಮೇಲಿನ ಉಲ್ಲೇಖವನ್ನು ಗಮನಿಸಿದಾಗ ೨೦ನೇ ಶತಮಾನದ ಐವತ್ತರ ದಶಕದಲ್ಲಿ ಪುಸ್ತಕ ವಿಮರ್ಶೆ ಬಗೆಗಿದ್ದ ಬಿಕ್ಕಟ್ಟು ತಲ್ಲಣಗಳು ಎದ್ದು ಕಾಣುತ್ತವೆ. ಇಲ್ಲಿ ರಂ. ಶ್ರೀ. ಮುಗಳಿಯವರು ಸಾಹಿತ್ಯ ಸೃಷ್ಟಿಯ ಮೂಲಕ ಚರ್ಚೆಗೆ ತೊಡಗಿದ್ದಾರೆ. ಅವರು ಸಾಹಿತ್ಯ ಸೃಷ್ಟಿಯ ಬಗೆಗೆ ಹೇಳುವ 'ನಿರ್ಮಿತಿ ಪ್ರಧಾನವಾದ ಪುಸ್ತಕಗಳು' ಮಾತು ಚರ್ಚಾಸ್ಪದವಾಗಿದೆ. ಇವರು ಬರೆಯುತ್ತಿದ್ದ ಸಂದರ್ಭದಲ್ಲಿ ಇದ್ದಂತ ಸನ್ನಿವೇಶ ಮುಖ್ಯವಾಗಿ ಕೃತಿಗಳಲ್ಲಿ ಅನುಭವವನ್ನು ನಿರೀಕ್ಷಿಸುತ್ತಿದ್ದುದು ಆಗಿತ್ತು. ಹಾಗಾಗಿ ಪ್ರಧಾನಕ್ಕಿಂತ ನಿರ್ಮಿತಿ ಪ್ರಧಾನವಾಗಿದ್ದವು ಎಂಬ ಪ್ರತಿಕ್ರಿಯೆ ಹೊಮ್ಮಿದೆ. ಆದರೆ ಈ ಚಿಂತಕರ ಕೊರಗಿರುವುದು ಈ ನಿರ್ಮಿತಿ ಪ್ರಧಾನ ಪುಸ್ತಕಗಳ ಬಗೆಗಿಂತ ಅವುಗಳಿಗೆ ಯೋಗ್ಯ ವಿಮರ್ಶೆ ಸಿಗುತ್ತಿಲ್ಲವೆಂಬುದಕ್ಕೆ ಬಂದಂಥ ಪುಸ್ತಕಗಳಿಗೆ ಯೋಗ್ಯ ವಿಮರ್ಶೆ ದೊರೆತರೆ ಆ ಪುಸ್ತಕ ನಿಜವಾದ ಮೌಲ್ಯದಿಂದ ಕೂಡಿದುದು ಎಂಬ ಮನೋಧರ್ಮದಲ್ಲಿ ಪುಸ್ತಕ ವಿಮರ್ಶೆಯ ಸ್ಥಿತಿಯನ್ನು ಹೇಳಲಾಗಿದೆ. ಆದರೆ ಕೆಲವೊಮ್ಮೆಯಾದರೂ ಕೆಲವು ಪುಸ್ತಕಗಳಿಗೆ 'ಸಾದರ ಸ್ವೀಕಾರ' ಕೆಲವಕ್ಕೆ ನಾಲ್ಕು ಸಾಲಿನ ಮರ್ಯಾದೆ ಎಂಬ ಮಾತುಗಳು ಪುಸ್ತಕ ವಿಮರ್ಶೆ ಇದ್ದಂಥ ಸ್ಥಿತಿಯನ್ನು

ಹೇಳುತ್ತವೆ. ಇಲ್ಲಿ ಮುಗಳಿಯವರು ಪುಸ್ತಕ ವಿಮರ್ಶೆಗೆ ಒಂದು ಸಾಂಸ್ಥಿಕ ಕೊಂಡಿಯನ್ನು ರೂಪಿಸುತ್ತಿದ್ದಾರೆ. ಅಂದರೆ ಸಾಹಿತ್ಯ ಸೃಷ್ಟಿಯ ಜೊತೆಯಲ್ಲಿಯೇ ವಿಮರ್ಶೆ, ಪುಸ್ತಕ ವಿಮರ್ಶೆಯನ್ನು ವಿಶ್ಲೇಷಿಸುತ್ತಿದ್ದಾರೆ. ಆದರೆ ಬಂದಂಥ ಎಲ್ಲಾ ಕೃತಿಗಳು 'ಪುಸ್ತಕವಿಮರ್ಶೆ'ಗೆ ಒಳಗಾಗುವುದಿಲ್ಲ ಎಂಬ ವಾಸ್ತವವನ್ನು ಹೇಳುತ್ತಿದ್ದಾರೆ. ಇದರ ಜೊತೆಯಲ್ಲಿಯೇ, 'ಪುಸ್ತಕ ವಿಮರ್ಶೆ'ಯನ್ನು ಬರೆಯುತ್ತಿರುವುದರಿಂದ ವಿಮರ್ಶೆಗೆ ಒಂದು ಬೆಲೆ, ತೂಕ ಇಲ್ಲದಾಗುತ್ತಿದೆ ಎಂಬ ಆತಂಕವೂ ಈ ಎಲ್ಲ ಚಿಂತಕರಿಗೂ ಕಾಡಿದೆ. ಅದಕ್ಕೆ ಕಾರಣವನ್ನು ಸನ್ನಿವೇಶದ ಹಿಂದಿನ ಹಿನ್ನೆಲೆಗಳನ್ನು ಅವರೇ ಹೇಳುತ್ತಾರೆ.

ಓದಿ ಬರೆಯುವಷ್ಟು ಅವಕಾಶವಾಗಲೀ, ಮನಶಾಂತಿಯಾಗಲೀ ಇರುವುದಿಲ್ಲ ಎಂಬ ತುರ್ತು ಅನಿವಾರ್ಯಗಳನ್ನು ಹೇಳಿ ಅದಕ್ಕೆ ಪುಸ್ತಕ ವಿಮರ್ಶಕರು ಕಂಡುಕೊಳ್ಳುವ ಪರಿಹಾರವೇನು? ಎಂಬ ಶೋಧನೆಯನ್ನು ಮಾಡುತ್ತಾರೆ. ಮುನ್ನುಡಿ, ಬೆನ್ನುಡಿಗಳಿಂದ ನಿರ್ಮಿತಿಯಾದ ಪುಸ್ತಕ ವಿಮರ್ಶೆಗಳನ್ನು ಗಮನಿಸದೆ ಅವರು ಪುಸ್ತಕ ವಿಮರ್ಶೆಯು ಹೊಸದೇನನ್ನೋ ಹುಡುಕಬೇಕು ಎಂಬ ಹಂಬಲದಿಂದ ಇರುವಂತೆ ಕಾಣುತ್ತಾರೆ. ಈ ಚರ್ಚೆಯಲ್ಲಿ ಪುಸ್ತಕ ವಿಮರ್ಶೆಯ ಬಗೆಗೆ ಅವರಿಗೆ ಒಳ್ಳೆಯ ನಿಲುವಿಗಿಂತ ಆತಂಕವೇ ತುಂಬಿದೆ. ಅವರು ಪುಸ್ತಕ ವಿಮರ್ಶೆಯನ್ನು ಎರಡು ಅಥವಾ ನಾಲ್ಕು ಸಾಲಿನ ಮರ್ಯಾದೆ ಎಂದೇ ಭಾವಿಸಿರುವಂತಿದೆ. ಆದ್ದರಿಂದ ಆ ವಿಮರ್ಶೆಗಳು ಶ್ರೇಷ್ಠ ಮಟ್ಟಕ್ಕೆ ಏರಲಾರವು ಎಂಬ ಗುಮಾನಿಯೂ ಇರುವುದರಿಂದ ಅವರು ಒಪ್ಪಿತ ನೆಲೆಯಲ್ಲಿ ಪುಸ್ತಕ ವಿಮರ್ಶೆಗಳನ್ನು ಗ್ರಹಿಸುವುದಿಲ್ಲ. ಇದು ಆ ದಶಕದಲ್ಲಿ ಪುಸ್ತಕ ವಿಮರ್ಶೆ ಬಗೆಗೆ ಇದ್ದ ಮನಸ್ಥಿತಿಯೂ ಆಗಿರಬಹುದೇ ಎಂಬ ಪ್ರಶ್ನೆ ಏಳುತ್ತದೆ.

೩. ಆರ್ಕೆ ಮಣಿಪಾಲ್ ಅವರು 'ಲೋಕ ಗ್ರಹಿಕೆ ಮತ್ತು ಅಭಿವ್ಯಕ್ತಿ' ಎಂಬ ಕೃತಿಯಲ್ಲಿ ಈ ರೀತಿ ಹೇಳಿದ್ದಾರೆ. "ಒಂದು ಸಾಹಿತ್ಯ ಕೃತಿ ಸಾಮಾಜಿಕ ಉಪವಸ್ತುವಾಗಿದ್ದು, ಅದರ ಬಳಕೆಯು ನ್ಯಾಯಬದ್ಧವಾದ ನೆಲೆಗಟ್ಟು ವಿಮರ್ಶಕರ ಪಾಲಿಗೆ ಆ ಕೃತಿನಿಷ್ಠ ಧೋರಣೆಯೇ ಆಗಿದೆ. ಆದರೆ ಇಂದು ವ್ಯಕ್ತಿನಿಷ್ಠ ವಿಮರ್ಶೆ ಕೃತಿಯಿಂದ ಎಷ್ಟುದೂರ ಹೋಗಿಬಿಟ್ಟಿದೆ ಎಂದರೆ ಇಡಿಯ ವಿಮರ್ಶೆಯಲ್ಲಿ ಕೃತಿ ಒಂದು ನಿಮಿತ್ತ ಮಾತ್ರವಾಗಿದೆ; ಕೃತಿಯೇತರ ಅಂಶಗಳಿಗೆ ವಿಮರ್ಶಕನ ನಿಷ್ಠೆ ಸಲ್ಲುತ್ತದೆ. ವ್ಯಕ್ತಿಯ ಕೃತಿಕಾರನ ಜೀವನ ವೃತ್ತಿಪರ ಸಾಧನೆ, ಕೃತಿಕಾರ ವಿಮರ್ಶಕರ ಸಂಬಂಧ, ಸಲುಗೆ, ಸಜಾತಿ ಪ್ರೇಮ ಮುಂತಾದವುಗಳ ಭಾವನಾತ್ಮಕ ನಿರೂಪಣೆಯೇ ವಿಮರ್ಶಕರ ಶಿಷ್ಟತೆ ವಿನಯವೆನಿಸುತ್ತದೆ. ಅಥವಾ ದಲಿತರು ಇಲ್ಲವೇ ಅಲ್ಪಸಂಖ್ಯಾತರು ಬರೆದುದೆಂಬ ಒಂದೇ ಕಾರಣಕ್ಕೆ ಕೃತಿಯನ್ನು ಉತ್ಪ್ರೇಕ್ಷಿಸಿ ಬರೆಯುವುದೇ ವಿಮರ್ಶಕನ ಪ್ರಗತಿಪರತೆಯೆನಿಸಿಕೊಳ್ಳುತ್ತದೆ. ಇವರ ಇನ್ನೊಂದು ಮುಖ ಪ್ರತಿಷ್ಠಿತ ಸಾಹಿತಿಗಳನ್ನು ಓಲೈಸಲಿಕ್ಕಾಗಿ, ಅವರ ಕೃತಿಗಳ ದೋಷಗಳನ್ನು

ಬೇಕೆಂದೇ ಮರೆಮಾಚುವ ಅಥವಾ ಹಗುರಾಗಿ ತೆಗೆದುಕೊಳ್ಳುವ ವಿಮರ್ಶಕ ವರ್ತಿಗಳ ಪ್ರವೃತ್ತಿಯು ವಿಮರ್ಶೆಯಲ್ಲಿ ಕಂಡುಬರುತ್ತದೆ."[೩]

ಈ ಮೇಲಿನ ಉಲ್ಲೇಖದಲ್ಲಿ ಆರ್ಕೆ ಅವರು ಚರ್ಚಿಸಿದ ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ಬಗೆಗಿನ ಅಂಶಗಳನ್ನು ಹೀಗೆ ಗುರುತಿಸಬಹುದು. ಆರ್ಕೆ ಅವರು ಕೃತಿಯನ್ನು ಒಂದು ಸಾಮಾಜಿಕ ಉತ್ಪನ್ನವಾಗಿ ಗ್ರಹಿಸಿದ್ದಾರೆ. ಹಾಗಾಗಿ ಕೃತಿ ವಿಶ್ಲೇಷಣೆ ಇವರ ಪ್ರಕಾರ ಸಾಮಾಜಿಕ ವಿಶ್ಲೇಷಣೆ ಅಥವಾ ಸಮಾಜ ವಿಶ್ಲೇಷಣೆ ಆಗಿದೆ ಎಂದು ಗ್ರಹಿಸುತ್ತಾರೆ. ಇವರ ಇಲ್ಲಿನ ಚಿಂತನೆ ಮುಖ್ಯವಾಗಿ ಪುಸ್ತಕ ವಿಮರ್ಶೆ ಪಡೆದುಕೊಳ್ಳುತ್ತಿರುವ, ಪಡೆದುಕೊಂಡಿರುವ ಆಯಾಮವನ್ನು ಕುರಿತದ್ದಾಗಿದೆ. ಆರ್ಕೆಯವರು ಪುಸ್ತಕ ವಿಮರ್ಶೆ ಮುಖ್ಯವಾದ ಮೂಲಭೂತ ನಿಲುವುಗಳಿಂದ ಹೊರಳಿಕೊಂಡು ಆಗುವ ಅಪಾಯಗಳನ್ನು ಕುರಿತು ಚರ್ಚಿಸುತ್ತಾರೆ. ಪುಸ್ತಕ ವಿಮರ್ಶಕರು ಇಂದು ತಮ್ಮ ತಾತ್ವಿಕತೆಗಳನ್ನು ಮೀರಿರುವುದನ್ನು ಪ್ರಶ್ನಿಸಿಕೊಳ್ಳುತ್ತಾರೆ. ಈ ರೀತಿಯ ವಿಮರ್ಶೆಗಳಿಂದ ಅಂತಿಮವಾಗಿ ಪುಸ್ತಕ ವಿಮರ್ಶಕರು ಏನನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ಅವರ ಒಲವುಗಳು ಯಾವ ಕಡೆ ಬೆಳೆಯುತ್ತಿವೆ ಎಂಬುದನ್ನು ಇವರು ವಿಶ್ಲೇಷಿಸಿದ್ದಾರೆ.

೪. ವಿ. ಸೀತಾರಾಮಯ್ಯನವರು ತಮ್ಮ 'ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ' ಎಂಬ ಕೃತಿಯಲ್ಲಿ ಪರೋಕ್ಷವಾಗಿ 'ಪುಸ್ತಕ ವಿಮರ್ಶೆ'ಯ ಬಗೆಗೆ ಚರ್ಚಿಸುತ್ತಾರೆ. "ವರ್ತಮಾನ ಕಾಲದ ಕೃತಿಗಳ ಮೇಲೆ ಬೇರೆ ಬಗೆಯ ಪ್ರಭಾವಗಳು ಬೀರುವವು, ಜನ ಹತ್ತಿರದವರು, ಪರಸ್ಪರ ಪರಿಚಿತರು, ಜೀವನದ ಅನೇಕ ಸ್ನೇಹ ದಾಕ್ಷಿಣ್ಯ, ಅಸೂಯೆ, ವೈಮನಸ್ಸುಗಳ ಸಂಬಂಧ ಸಾಂಪ್ರತ ಸನ್ನಿವೇಶದಲ್ಲಿ ಅವರ ನಡುವೆ ನೆಲೆಸಿರಬಲ್ಲದು, ಜನರ ಭಕ್ತಿಗಳು ಬಗೆ ಬಗೆಯಾದರೂ ಬಗೆ ಬಗೆಯ ಶಕ್ತಿ ಮತ್ತು ಸಾಧನೆಯ ಮಟ್ಟಗಳು ಕಣ್ಣೆದುರುಗಿನವರಲ್ಲಿ ಇರಬಹುದು. ಎಲ್ಲರ ಕೃತಿ ಶಕ್ತಿಯೂ ಇನ್ನು ಪರಿಣಿತವಾಗಿದೆ. ನಿರ್ಮಾಣ ಕಾರ್ಯ ಮುಗಿಯದೆ ಇರಬಹುದು ಇಂಥ ಸಂದರ್ಭದಲ್ಲಿ ನಿರ್ಣಾಯಕವಾದ ವಿಮರ್ಶೆ ಸುಲಭವಲ್ಲ, ಕವಿಗಳಿಗೆ, ಕವಿತೆಗೆ ವಿಮರ್ಶಕರು ಅತಿ ಹತ್ತಿರವಿರುವುದರಿಂದ ಬೆಲೆ, ತೂಕ, ತಕ್ಕಹಾಗೆ ಪ್ರಯೋಗವಾಗುವುದು ಸುಲಭವಲ್ಲ. ಆದುದರಿಂದ ಬಹುಶಃ ಕಾವ್ಯಾವಲೋಕನ, ಪರಿಚಯಾತ್ಮಕ ಲೇಖನ ರೂಪದಲ್ಲಿ ಅಭಿಪ್ರಾಯ ಸೂಚನೆಗೊಳ್ಳುವುದು ಮೇಲು. ಇಂತಹ ಕೃತಿಗಳನ್ನು ಕುರಿತು ಖಚಿತವಾಗಿ ಬೆಲೆಗಳು ಕೊಡಲು ಕಾಲವನ್ನಪೇಕ್ಷಿಸುತ್ತವೆ. ದೂರದ ಬೆಟ್ಟ ನುಣ್ಣನೆಯದಾದರೆ ಹತ್ತಿರ ಬೆಟ್ಟದ ಕಲ್ಲುಮುಳ್ಳುಗಳ ಗಾಸಿ ನಿಜವಾಗಿಯೂ ವಾಸಿಯೇ?"[೪]

ಈ ಮೇಲಿನ ಉಲ್ಲೇಖದಲ್ಲಿ ಪುಸ್ತಕ ವಿಮರ್ಶೆಯ ಬಗೆಗೆ ಕೆಲವು ಚರ್ಚೆಗಳಿವೆ. ಇವರಿಗೆ, ಪುಸ್ತಕ ವಿಮರ್ಶೆಗೆ ಬೇರೆ ಬಗೆಯ ಪ್ರಭಾವಗಳು ಬೀರುವವು ಎಂಬ ನಿಲುವಿದೆ.

ಹಾಗಾಗಿ ಇಂಥ ಸಂದರ್ಭದಲ್ಲಿ ನಿರ್ಣಾಯಕವಾದ ವಿಮರ್ಶೆ ಸುಲಭವಲ್ಲ ಎಂದು ಹೇಳುತ್ತಾರೆ. ಅಂದರೆ ಪುಸ್ತಕ ವಿಮರ್ಶೆ ಅವರೇ ಹೇಳುವಂತೆ ಕವಿಗಳಿಗೆ, ಕವಿಗಳಿಗೆ ವಿಮರ್ಶಕರು ಹತ್ತಿರವಿರುವುದರಿಂದ ಎಂಬ ಉತ್ತರ ಕಂಡುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದರೆ ಈ ಉಲ್ಲೇಖ ಬಂದಿರುವುದು ಕನ್ನಡ ಸಾಹಿತ್ಯದ ಆರಂಭದ ದಶಕಗಳಲ್ಲಿ ಹಾಗಾಗಿ ಆರಂಭದ ದಶಕದಲ್ಲಿ ಪುಸ್ತಕ ವಿಮರ್ಶಕರು ಮತ್ತು ಕೃತಿಕಾರರು ತುಂಬಾ ಆತ್ಮೀಯರಾಗಿದ್ದರು. ಕೆಲವೊಮ್ಮೆ ಈ ಎರಡೂ ಕೆಲಸಗಳನ್ನು ಒಬ್ಬರೇ ನಿರ್ವಹಿಸುತ್ತಿದ್ದರು. ಅಲ್ಲದೆ ಅವರು ಒಂದೇ ಸೈದ್ಧಾಂತಿಕ ನಿಲುವನ್ನು ಉಳ್ಳವರಾಗಿದ್ದರು. ಕೃತಿಯ ಮೌಲ್ಯವನ್ನು ಗುರುತಿಸುವುದರ ಕಡೆಗಷ್ಟೇ ಅವರ ಗಮನವಿತ್ತು. ದೋಷಗಳನ್ನು ಗುರುತಿಸುವುದು ಮಹಾಪಾಪ ಎಂಬ ಧೋರಣೆಯಿತ್ತು. ಇದಕ್ಕೆ ಆಗ ಸಾಹಿತ್ಯವನ್ನು ಸೃಷ್ಟಿಸಲು ಪ್ರಚೋದಿಸುವ ಅವಧಿಯಾಗಿದ್ದರಿಂದ ಈ ರೀತಿಯ ನಿಲುವನ್ನು ಹೊಂದಿತ್ತು. ಆದ್ದರಿಂದ ಕೃತಿಗಳ ತೂಕ ತಕ್ಕ ಹಾಗೆ ಪ್ರಯೋಗವಾಗುವುದು ಸುಲಭವಲ್ಲ ಎಂಬ ನಿರ್ಣಯದಲ್ಲಿ ನಿಂತಿದೆ. ಆದರೆ ಇಂಥ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪರಿಚಯಾತ್ಮಕ ಲೇಖನವನ್ನು ಬರೆಯುತ್ತಿದ್ದಾರೆಂಬ ಹೇಳಿಕೆಯಿದೆ. ಆದರೆ ಸಮರ್ಥ ವಿಮರ್ಶೆ ರೂಪುಗೊಳ್ಳುವಿಕೆಗೆ ಕಾಲವನ್ನಪೇಕ್ಷಿಸುತ್ತದೆ ಎಂದು ಹೇಳುತ್ತಾರೆ. ಹೀಗಾಗಿ ಕೃತಿಯ ನಿಲುವಿನ ಬಗ್ಗೆ ಪಡೆದುಕೊಳ್ಳುವ ತಾತ್ಕಾಲಿಕ ಪರಿಹಾರವಾಗಿ ಪುಸ್ತಕ ವಿಮರ್ಶೆ ಬಳಕೆಯಲ್ಲಿರುವುದನ್ನು ಇವರು ತಿಳಿಸುತ್ತಾರೆ.

ಜಿ. ಎಲ್. ಎಸ್. ಶೇಷಗಿರಿರಾವ್‌ರವರು 'ಸಾಹಿತ್ಯ ಮತ್ತು ವಿಮರ್ಶೆ' ಎಂಬ ಲೇಖನದಲ್ಲಿ ಪುಸ್ತಕ ವಿಮರ್ಶೆ ಕುರಿತು ಹೀಗೆ ಹೇಳುತ್ತಾರೆ. "ಪುಸ್ತಕ ವಿಮರ್ಶೆಗಾಗಿ ಕೃತಿಗಳನ್ನು ಕಳಿಸಿದವರಿಗೂ, ಪತ್ರಿಕೆಗಳವರಿಗೂ ವಿಮರ್ಶೆ ಬೇಗನೇ ಅಚ್ಚಾಗಬೇಕು ಎಂಬ ಕಾತುರ, ಕೊನೆಯ ಪಕ್ಷ ನಿರೀಕ್ಷಣೆ ಇರುವುದು ಸಹಜ. ಇದರಿಂದ ವಿಮರ್ಶಕನಿಗೆ ತಕ್ಕಷ್ಟು ಕಾಲಾವಕಾಶ ದೊರೆಯುವುದಿಲ್ಲ. ಒಂದು ಪುಸ್ತಕದ ವಿಮರ್ಶೆಗೆ ವಿಮರ್ಶಕರನ್ನು ಆಯ್ಕೆ ಮಾಡುವವರನ್ನು ವಿಮರ್ಶೆಯ ಸ್ವರೂಪ ಹೊಂದಿಕೊಂಡಿರುತ್ತದೆ. ಹೀಗೆ ಆಯ್ಕೆ ಮಾಡುವವರದೇ ಒಲವುಗಳಿದ್ದರೆ, ಸಹಜವಾಗಿ ಆ ಒಲವುಗಳು ಆಯ್ಕೆಯಲ್ಲಿ ಪ್ರತಿಬಿಂಬವಾಗುತ್ತವೆ. ವಿಮರ್ಶೆಯನ್ನು ಪ್ರಭಾವಿಸುತ್ತವೆ. ಪತ್ರಿಕೆಗಳಲ್ಲಿ ವಿಮರ್ಶಾ ಭಾಗದ ಹೊಣೆ ಹೊತ್ತವರು ತಮ್ಮ ಬೇಕು ಬೇಡಗಳನ್ನು ಪ್ರತಿಧ್ವನಿಸುವ ವಿಮರ್ಶಕರನ್ನು ಆರಿಸಿ ತಮಗೆ ಬೇಕಾದವರಿಗೆ ಶ್ರೇಷ್ಠ ಸಾಹಿತಿ ಪಟ್ಟವನ್ನು ಕಟ್ಟಿರುವುದು ಇತರ ವಿಭಾಗಗಳ ಸೊಗಸಿನಿಂದ ಜನಪ್ರಿಯವಾಗಿರಬಹುದು. ಅಂತಹ ಪತ್ರಿಕೆಯ ವಿಮರ್ಶಾ ಭಾಗವು ಪತ್ರಿಕೆಯ ಜನಪ್ರಿಯತೆಯ ಕಾರಣದಿಂದ ಸಾವಿರಾರು ಮಂದಿಯ ಕಣ್ಣನ್ನು ಸೆಳೆಯುತ್ತದೆ. ಇಂತಹ ಲಾಭದ ಸ್ಥಾನಗಳಲ್ಲಿರುವವರು ಸಾಹಿತ್ಯ ಕೃತಿಗಳನ್ನು ಪ್ರಾಮಾಣಿಕವಾಗಿ ವಿಮರ್ಶೆ ಮಾಡಿಸದೇ ಹೋದರೆ, ಪತ್ರಿಕೆಯ ಇತರೆ ಉದ್ಯೋಗಿಗಳು ಗಳಿಸದೆ ಜನಪ್ರಿಯತೆ ಸಾಹಿತ್ಯದ ಮಟ್ಟಿಗೆ ವಿಷವಾಗುತ್ತದೆ. ಅಲ್ಲದೆ ಕೃತಿ ವಿಮರ್ಶೆಗೆ, ವಿಮರ್ಶಕನಿಗೆ ದೊರೆಯುವ ಸ್ಥಳಾವಕಾಶವೂ ತೀರ ಮಿತವಾದುದ್ದು.

ಸಾಹಿತ್ಯದಲ್ಲಿ ಎಷ್ಟೇ ಆಸಕ್ತಿ ಇರುವ ಸಂಪಾದಕರಾಗಲಿ, ಒಂದು ಕೃತಿಯ ವಿಮರ್ಶೆಗೆ ಎಷ್ಟು ಸ್ಥಳಾವಕಾಶ ಕೊಡಲು ಸಾಧ್ಯ? ಪತ್ರಿಕೆಗಳಲ್ಲಿ ಸಾಹಿತ್ಯ ವಿಮರ್ಶೆಗೆ ಮಿತಿಯನ್ನು ಕಲ್ಪಿಸುವ ಮತ್ತೊಂದು ಅಂಶವೆಂದರೆ, ಓದುಗರ ಪ್ರತಿಕ್ರಿಯೆ ಜನಪ್ರಿಯ ಲೇಖಕರ ಅಥವಾ ಪಂಥಗಳ ನಾಯಕರ ಕೃತಿಗಳನ್ನು ವಿಮರ್ಶಿಸುವ ವಿಮರ್ಶಕ, ಕೋಪಗೊಂಡ ಹಲವಾರು ಓದುಗರ ಪ್ರತಿಭಟನೆಯನ್ನು ಎದುರಿಸಲು ಸಿದ್ಧವಾಗಿರಬೇಕು. ಅವನಾದರೂ ಸಿದ್ಧನಾಗಿದ್ದಾನು; ಪತ್ರಿಕೆಯನ್ನು ನಡೆಸುವವರು, ಸಿಡಿಮಿಡಿಗುಟ್ಟುವ ಹಲವಾರು ವಾಚಕರು – ಒಬ್ಬ ವಿಮರ್ಶಕ ಇವರನ್ನು ತಕ್ಕಡಿಯಲ್ಲಿ ತೂಗುವುದು ಹೇಗೆ? ಅಲ್ಲದೆ ಖ್ಯಾತ ಪತ್ರಿಕೆಗಳಲ್ಲಿ ಹತ್ತಾರು ಕೃತಿಗಳು ವಿಮರ್ಶೆಗಾಗಿ ಬಂದಾಗ ಪತ್ರಿಕೆ ನಡೆಸುವವರಾದರೂ ಹತ್ತಾರು ವಿಮರ್ಶಕರ ನಡುವೆ ಪುಸ್ತಕಗಳನ್ನು ಹಂಚಬೇಕಾಗುತ್ತದೆ. ಎಲ್ಲ ವಿಮರ್ಶಕರೂ ಸಮರ್ಥರೂ ಎಂದು ಹೇಳುವಂತಿಲ್ಲ. ಪತ್ರಿಕೆಗಳ ವಿಮರ್ಶೆ ಕೃತಿಯ ಮಾರಾಟವನ್ನು ಕೃತಿಕಾರನ ಭವಿಷ್ಯವನ್ನು ನಿರ್ಧರಿಸುವ ಪ್ರಭಾವಗಳಲ್ಲಿ ಒಂದಾದಾಗ ಸಹಜವಾಗಿ ಸಾಹಿತಿಯೂ ಅದನ್ನು ಲಕ್ಷಿಸಬೇಕಾಗುತ್ತದೆ. ಪತ್ರಿಕೋದ್ಯಮ ವಿಮರ್ಶಕನ ಹೊಣೆಯನ್ನು ಹೆಚ್ಚಿಸಿದೆ."[೫]

ಎಲ್. ಎಸ್. ಶೇಷಗಿರಿರಾವ್‌ರವರು ಕೃತಿಕಾರರಲ್ಲಿನ ಆತರು, ಪುಸ್ತಕ ವಿಮರ್ಶರಕರಲ್ಲಿನ ತಲ್ಲಣ, ಪತ್ರಿಕೆಗಳಲ್ಲಿನ ಧೋರಣೆ, ಅವುಗಳನ್ನು ಎದುರಿಸಬೇಕಾದ ಪುಸ್ತಕ ವಿಮರ್ಶಕರ ಸಂದಿಗ್ಧತೆ ಭಿನ್ನ ಭಿನ್ನ ರೀತಿಯ ಓದುಗರಿಂದ ಬರಬಹುದಾದ ಪ್ರತಿಕ್ರಿಯೆ. ಇವುಗಳನ್ನೆಲ್ಲ ಇಲ್ಲಿ ಚರ್ಚಿಸುತ್ತಾರೆ. ಮೊದಲು ಕೃತಿಕಾರರು ಬಯಸುವ ಕಾತುರ, ನಿರೀಕ್ಷಣೆಗಳನ್ನು ಗುರುತಿಸುತ್ತಾ ಅದರ ಹಿಂದಿನ ಕೃತಿಕಾರರು ಬೆಳೆಯಲು ಬೇಕಾದ ಪ್ರೇರಣೆಯನ್ನು ಹುಡುಕಿಕೊಳ್ಳುತ್ತಿದ್ದಾರೆ. ಆದರೆ ಈ ಕಾತರ, ನಿರೀಕ್ಷಣೆ ಬಹಳ ಕಡಿಮೆ ಎಂದು ಗುರುತಿಸುತ್ತಾರೆ. ಇದರ ಹಿಂದೆಯೇ ಕಾಲಾವಕಾಶ ದೊರೆತರೆ ಒಳ್ಳೆಯದನ್ನು ನಿರೀಕ್ಷಿಸಬಹುದು ಎಂಬ ನಿಲುವನ್ನು ಇವರು ತೋರಿಸುತ್ತಾರೆ. ಆದರೆ ಇವುಗಳಷ್ಟೇ ಪುಸ್ತಕ ವಿಮರ್ಶೆಯನ್ನು ನಿರ್ಧರಿಸುವುದಿಲ್ಲ. ಪತ್ರಿಕೆ, ಪತ್ರಿಕೆ ಇಟ್ಟುಕೊಂಡ ನಿಲುವು, ಅವರು ನಿಯಮಿಸಿಕೊಳ್ಳುವ ಪುಸ್ತಕ ವಿಮರ್ಶಕರು, ಪುಸ್ತಕ ವಿಮರ್ಶಕರ ಮನೋಧರ್ಮ ಈ ಎಲ್ಲವೂ ಪುಸ್ತಕ ವಿಮರ್ಶೆ ಆಯ್ಕೆ ಮಾಡುವಿಕೆಯಲ್ಲಿ ಪಾತ್ರವಹಿಸುತ್ತವೆ ಎಂಬ ವಿಶ್ಲೇಷಣೆಗೆ ತೊಡಗುತ್ತಾರೆ. ಹಾಗಾದಾಗ ಪುಸ್ತಕ ವಿಮರ್ಶೆಯೆಂಬುದು ಒಂದೇ ನಿಲುವಿನಡಿ ಬೆಳೆಯುವುದಿಲ್ಲ. ಅದಕ್ಕೆ ಪ್ರಭಾವಿಸುವ ಹಲವಾರು ಪೂರಕವಾದ ವಾತಾವರಣ, ಸನ್ನಿವೇಶಗಳು ಪುಸ್ತಕ ವಿಮರ್ಶೆಯ ಸ್ವರೂಪ ಮತ್ತು ಅದರ ಹಿಂದಿನ ಹಿನ್ನೆಲೆಗಳಿಗೆ ಕಾರಣವಾಗುತ್ತವೆ.

ಕೊನೆ ಟಿಪ್ಪಣಿಗಳು

೧. ತಿರುಮಲೇಶ ಕೆ.ವಿ., ಉಲ್ಲೇಖ, ೨೦೦೭, ಪು – ೪೩,೪೪

೨. ರಂ. ಶ್ರೀ ಮುಗಳಿ, ವಿಮರ್ಶೆಯವ್ರತ, ೧೯೭೦, ಪು –೩೨

೩. ಆರ್ಕೆ ಮಣಿಪಾಲ, ವಿಮರ್ಶೆಯ ಸವಾಲು, ೨೦೦೬, ಪು – ೨೬೯

೪. ವಿ. ಸಿತಾರಾಮಯ್ಯ, ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ, ೧೯೬೧, ಪು – ೪೬

೫. ಎಲ್. ಎಸ್. ಶೇಷಗಿರಿರಾವ್, ವಿಮರ್ಶಾತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ೨೦೦೦, ಪು – ೨೦೦

ಅಧ್ಯಾಯ ೪

ಟಿ.ಪಿ. ಅಶೋಕ : ಪುಸ್ತಕ ವಿಮರ್ಶೆಯ ಸ್ವರೂಪ

ಅಧ್ಯಾಯ ೪

ಟಿ. ಪಿ. ಅಶೋಕ : ಪುಸ್ತಕ ವಿಮರ್ಶೆಯ ಸ್ವರೂಪ

ಪುಸ್ತಕ ವಿಮರ್ಶೆಯ ಕುರಿತು ಕೃತಿಗಳಿಗೆ ವಿಶೇಷವಾದ ಶೀರ್ಷಿಕೆಗಳನ್ನು ಇತ್ತೀಚಿನ ವರ್ಷಗಳಲ್ಲಿ ಕಾಣುತ್ತೇವೆ. ಸಂಶೋಧನಾ ಕೃತಿಗಳಿಗೆ ಹಿರಿಯ ತಲೆಮಾರಿನವರು ಶಾಸ್ತ್ರೀಯವಾದ ವಿದ್ವತ್ ಪೂರ್ಣವಾದ ಶೀರ್ಷಿಕೆಗಳನ್ನು ಕೊಡುತ್ತಿದ್ದರು. ಕನ್ನಡ ವಿಮರ್ಶಕರು ತಮ್ಮ ವಿಮರ್ಶಾ ಸಂಕಲನಗಳಿಗೆ ಸೃಜನಶೀಲವಾದ ಕಥೆ, ಕಾದಂಬರಿಗಳಿಗೆ ಇಟ್ಟಿರುವುದನ್ನು ಕಾಣುತ್ತೇವೆ. ಇದನ್ನು ಮೀರಿದ ರೂಪಕಾತ್ಮಕ ರೀತಿಯಲ್ಲಿ ಶೀರ್ಷಿಕೆ ಇಡುವುದನ್ನು ಆರಂಭಿಸಿದರು. ಉದಾಹರಣೆಗೆ ಡಿ. ಆರ್. ನಾಗರಾಜರವರು ತಮ್ಮ ಪಿಹೆಚ್.ಡಿ ಮಹಾಪ್ರಬಂಧವನ್ನು ಪ್ರಕಟಿಸುವಾಗ ಅದಕ್ಕೆ ಶಕ್ತಿಶಾರದೆಯ ಮೇಳ ಎಂದು ಶೀರ್ಷಿಕೆಯನ್ನು ಇಟ್ಟು ಗಮನ ಸೆಳೆದರು. ಇದು ರೂಪಕದಂತೆ ಇದೆ. ಈ ಸಂಪ್ರದಾಯ ಮುಂದುವರೆಯಿತು. ಅನೇಕ ಕನ್ನಡದ ವಿಮರ್ಶಕರು ತಮ್ಮ ವಿಮರ್ಶಾತ್ಮಕ ಕೃತಿಗಳಿಗೆ ಈ ಬಗೆಯ ಹೆಸರಿಡುತ್ತಾ ಬಂದಿದ್ದಾರೆ.

ಪುಸ್ತಕ ವಿಮರ್ಶೆ ಕುರಿತ ಈ ಅಧ್ಯಯನಕ್ಕೆ ಆಯ್ದುಕೊಂಡ ಮೂವರು ವಿಮರ್ಶಕರ ಮೂರು ಪುಸ್ತಕಗಳ ಶೀರ್ಷಿಕೆಗಳು ಗಮನ ಸೆಳೆಯುತ್ತವೆ. ಟಿ.ಪಿ. ಅಶೋಕ ಅವರ 'ಪುಸ್ತಕ ಪ್ರೀತಿ', ನರಹಳ್ಳಿ ಬಾಲಸುಬ್ರಹ್ಮಣ್ಯರವರ 'ಸಾಹಿತ್ಯ ಸಂಸ್ಕೃತಿ' ಮತ್ತು ರಹಮತ್ ತರೀಕೆರೆ ಅವರ 'ಚಿಂತನೆಯ ಪಾಡು' ಎಂಬ ಶೀರ್ಷಿಕೆಗಳನ್ನು ಹೊತ್ತಿವೆ.

ಮೊದಲನೆಯದಾಗಿ ಟಿ.ಪಿ. ಅಶೋಕರವರು ಪುಸ್ತಕ ಪ್ರೀತಿ ಎಂದು ಹೆಸರಿಡುವುದರ ಹಿಂದೆ ಏನಿರಬಹುದು? ಮೂಲತಃ ಟಿ.ಪಿ. ಅಶೋಕ ಅವರು ಓದುಗರು ಮತ್ತು ವಿಮರ್ಶಕರು

ಈ ಎರಡೂ ಕೆಲಸಗಳನ್ನು ಗಂಭೀರವಾಗಿ ಪರಿಗಣಿಸಿದವರು. ಸಾಹಿತ್ಯದ ವಿದ್ಯಾರ್ಥಿಯಾದ ಇವರು ಯಾವುದೇ ಪುಸ್ತಕವನ್ನು ಸಹೃದಯರಾಗಿ ಓದುವವರು. ಓದುವ ಪುಸ್ತಕಗಳನ್ನು ಸಹೃದಯರಾಗಿ ವಿಮರ್ಶೆ ಮಾಡುತ್ತಾರೆ. ಪುಸ್ತಕಗಳ ವಸ್ತುವಿಷಯವನ್ನು ಗಂಭೀರವಾಗಿ ವಿಶ್ಲೇಷಣೆ ಮಾಡುವರು. ಯಾವುದೇ ಲೇಖಕರಿಗೆ ತಾರತಮ್ಯ ಮಾಡದ ವಿಮರ್ಶೆ ಅವರದು. ಒಂದು ಪುಸ್ತಕವನ್ನು ವಿಮರ್ಶೆಗೆಂದು ಕೈಗೆತ್ತಿಕೊಂಡರೆ, ವಿಮರ್ಶನಕ್ಕೆ ಒಳಗಾಗುವ ಕೃತಿಯನ್ನು ಮತ್ತು ಆ ಲೇಖಕರನ್ನು ಸಮಾನವಾಗಿ ಗೌರವಿಸುವರು. ಅವರ ವಿಮರ್ಶಾ ಮಾದರಿ ಕೃತಿಕೇಂದ್ರಿತ ವಿಮರ್ಶೆಯಾಗಿದೆ. ಪುಸ್ತಕಗಳನ್ನು ಅಪಾರವಾಗಿ ಪ್ರೀತಿಸುವಂತೆ ಕಾಣುತ್ತದೆ. ಅವರ ಪುಸ್ತಕ ವಿಮರ್ಶೆಯನ್ನು ಗಮನಿಸಿದಾಗ ವಿಮರ್ಶೆ ಎಂದರೆ ಟೀಕೆ, ತಕರಾರು, ಕಠಿಣವಾದ ಮಾತುಗಳಿಂದ ಬರೆಯುವುದಲ್ಲ, ಮೆಚ್ಚಿಗೆಯ ಭಾವನೆಯಲ್ಲಿ ಬರೆಯುತ್ತಿರುವುದರಿಂದ ಅವರು ತಮ್ಮ ಈ ಪುಸ್ತಕಕ್ಕೆ 'ಪುಸ್ತಕ ಪ್ರೀತಿ' ಎಂದು ಕರೆದಿದ್ದಾರೆ. ಶೀರ್ಷಿಕೆಯನ್ನು ನೋಡಿದರೆ ವಿಮರ್ಶಾ ಕೆಲಸದ ಒಲವುಗಳು ಗೋಚರಿಸುತ್ತದೆ. ಸಾಹಿತ್ಯ ಪ್ರೀತಿ ಪುಸ್ತಕ ಪ್ರೀತಿಯಾಗಿ ಪರಿವರ್ತನೆಗೊಂಡಿದೆ.

ಟಿ.ಪಿ. ಅಶೋಕ : 'ಪುಸ್ತಕ ಪ್ರೀತಿ' ಪುಸ್ತಕ ವಿಮರ್ಶೆಯ ಸ್ವರೂಪ

ಸಾಹಿತ್ಯ ವಿಮರ್ಶೆ ಎಂಬುದು ಕೇವಲ ಪಂಡಿತರ ನಡುವಣ ವಾಗ್ವಾದವಾಗದೆ. ಓದುಗ ಸಮಷ್ಟಿಯೊಂದಿಗಿನ ಸಂವಾದವಾಗಬೇಕು ಎಂದು ನಂಬಿರುವ ಕೆಲವೇ ಕೆಲವು ವಿಮರ್ಶಕರಲ್ಲಿ ಟಿ.ಪಿ. ಅಶೋಕ ಅವರೂ ಒಬ್ಬರು. ತಾವು ಗಮನಿಸಿ, ಓದಿ, ಅನುಭವಿಸಿದ್ದನ್ನು ತಮ್ಮ ಸುತ್ತಲವರೊಂದಿಗೆ ಅರ್ಥಪೂರ್ಣವಾಗಿ ಹಂಚಿಕೊಳ್ಳಬೇಕೆಂಬ ಹಂಬಲ ಅವರ ಬರವಣಿಗೆಯ ಹಿಂದಿನ ಪ್ರಧಾನ ಕಾಳಜಿಯಾಗಿದೆ. ಅಧ್ಯಾಪನ, ಭಾಷಣ, ಪುಸ್ತಕ ವಿಮರ್ಶೆ, ಅಂಕಣ ಬರಹ, ವಿದ್ವತ್ ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆ, ಸಂಶೋಧನೆ ಈ ಎಲ್ಲ ಕಾರ್ಯಕ್ಷೇತ್ರಗಳನ್ನು ಮನುಷ್ಯ ಸಂಪರ್ಕ ಸಾಧಿಸುವ ವೇದಿಕೆಯನ್ನಾಗಿ ಮಾಡಿಕೊಂಡಿರುವ ಅಶೊಕರ ಪುಸ್ತಕ ಪ್ರೀತಿ – ಜೀವನ ಪ್ರೀತಿಗಳ ವ್ಯಕ್ತರೂಪವೇ ಆಗಿದೆ. ಮಯೂರ ಮಾಸ ಪತ್ರಿಕೆಯಲ್ಲಿ ಸತತವಾಗಿ ಏಳೂವರೆ ವರುಷಗಳಲ್ಲಿ ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಆತ್ಮಕಥೆ, ಪ್ರವಾಸಕಥನ, ಕಥಾಸಂಕಲನ, ನಾಟಕ, ಕಾವ್ಯ ಸಂಕಲನ, ಕವನಸಂಕಲನ, ಜೀವನ ದರ್ಶನ, ಮಹಾಪ್ರಬಂಧ, ವಿಮರ್ಶಾಲೇಖನ, ಲಲಿತಪ್ರಬಂಧ, ಸಣ್ಣಕಥೆ, ಮಕ್ಕಳ ಸಾಹಿತ್ಯ ಹೀಗೆ ಅವರು ಬರೆದ ಎಂಭತ್ತೇಳು ಲೇಖನಗಳು ಇಲ್ಲಿ ಸಂಕಲಿತವಾಗಿವೆ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಬಗ್ಗೆ ಉತ್ಸಾಹ ಹುಟ್ಟಿಸಬಲ್ಲ, ಹೊಸ ಓದು, ಮರು ಓದುಗಳನ್ನು ಒತ್ತಾಯಿಸಬಲ್ಲ ಈ ಸದಭಿರುಚಿಯ ಬರಹಗಳು ಸಂಗ್ರಹ ಯೋಗ್ಯವಾಗಿವೆ.

ಟಿ. ಪಿ. ಅಶೋಕರ 'ಪುಸ್ತಕ ಪ್ರೀತಿ'ಯಲ್ಲಿರುವ ಸಾಹಿತ್ಯ ಪ್ರಕಾರಗಳ, ವಿಮರ್ಶಾ ಲೇಖನಗಳ ಮೂಲಕ ಅವರ ಪುಸ್ತಕ ಸ್ವರೂಪವನ್ನು ಮಾಡಲಾಗಿದೆ.

ಕಾದಂಬರಿ ಕುರಿತ ಲೇಖನಗಳು

ಟಿ.ಪಿ. ಅಶೋಕರವರು ಕಾದಂಬರಿಯನ್ನು ಕುರಿತು ವಿಮರ್ಶೆ ಮಾಡುವಾಗ ತಮ್ಮದೇ ಆದ ಕೆಲವೊಂದು ತಂತ್ರಗಳನ್ನು ಅನುಸರಿಸುತ್ತಾರೆ. ಖ್ಯಾತ ಲೇಖಕರ ಕೃತಿಯನ್ನು ವಿಮರ್ಶೆ ಮಾಡುವಾಗ ಖ್ಯಾತಲೇಖಕರ, ವಿಮರ್ಶಕರ ಹೇಳಿಕೆಗಳ ಮೂಲಕ ಕೃತಿ ವಿಮರ್ಶೆ ಪ್ರಾರಂಭಿಸುತ್ತಾರೆ. ನಂತರ ಕೃತಿ ಪರಿಚಯದ ರೀತಿಯಲ್ಲಿ ವಿಮರ್ಶೆ ಇರುವುದನ್ನು ಕಾಣುತ್ತೇವೆ. ಓದುಗರಿಗೆ ಪರಿಚಯವಾಗಲೆಂದು ಕೃತಿಯ ಪ್ರಕಟಣೆಯ ವರ್ಷ, ಎಷ್ಟು ಮುದ್ರಣಗಳನ್ನು ಈ ಕೃತಿ ಕಂಡಿದೆ ಮತ್ತು ಕೃತಿಯು ಐತಿಹಾಸಿಕವೋ, ಸಾಮಾಜಿಕವೋ, ಧಾರ್ಮಿಕವೋ ಯಾವ ಕಥಾ ವಸ್ತುವನ್ನು ಒಳಗೊಂಡಿದೆ ಎಂಬುದನ್ನು ತಿಳಿಸುತ್ತಾರೆ. ಕೃತಿಯು ಎಷ್ಟು ಭಾಗಗಳಿಂದ ಕೂಡಿದೆ. ಅದರ ಪುಟ ಸಂಖ್ಯೆಗಳು ಎಷ್ಟು ಎಂಬುದನ್ನು ಓದುಗರಿಗೆ ತಿಳಿಸುತ್ತಾರೆ. ಇದನ್ನು ನೋಡಿದಾಗ ನಮಗೆ 'ಕೃತಿ ಪರಿಚಯ ವಿಮರ್ಶೆ' ಎಂದು ಅನಿಸುತ್ತದೆ. ಆದರೆ ಇದರ ಜೊತೆಗೆ ಕೃತಿಯನ್ನು ಕುರಿತು ವಿಮರ್ಶೆ ಮಾಡಿರುವುದು ನಂತರದಲ್ಲಿ ಕಂಡು ಬರುತ್ತದೆ.

ಕೃತಿಯನ್ನು ನೇರವಾಗಿ ಪ್ರವೇಶಿಸಿ ಕೃತಿಯಲ್ಲಿನ ಕೇಂದ್ರ ವಸ್ತುವನ್ನು ಮತ್ತು ಕೇಂದ್ರ ಪಾತ್ರವನ್ನು ಕುರಿತು ಚರ್ಚೆಮಾಡುತ್ತಾರೆ. ಕೃತಿಯು ಅಂದಿನ ಕಾಲಘಟ್ಟಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತು ಅದರ ತಾತ್ವಿಕತೆಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾ ಕೃತಿಕಾರನ ಮನೋಧರ್ಮವನ್ನು ಅರಿಯುವಲ್ಲಿ ಪ್ರಯತ್ನಿಸುತ್ತಾರೆ.

ಅಶೋಕರವರು ಸಾಮಾನ್ಯ ಲೇಖಕರ ಕಾದಂಬರಿಯನ್ನು ವಿಮರ್ಶೆ ಮಾಡುವಾಗ ಅವರ ಇತರೆ ಕಾದಂಬರಿಗಳನ್ನು ಪರಿಚಯಿಸುತ್ತಾ ಕೃತಿಕಾರನ ಪ್ರಮುಖ ಕಾದಂಬರಿಯನ್ನು ಪರಿಚಯಿಸುತ್ತಾರೆ. ಮತ್ತು ಕೃತಿಕಾರನನ್ನು ಪರಿಚಯಿಸುತ್ತಾರೆ.

ಅನಂತರ ಕೃತಿಗೆ ನೇರವಾಗಿ ಪ್ರವೇಶಿಸಿ ಅಲ್ಲಿನ ಮುಖ್ಯ ಅಂಶಗಳನ್ನು ಚರ್ಚಿಸಿ ಕೃತಿಕಾರರ ಇತರೆ ಕಾದಂಬರಿಗಳಿಗೆ ಹೋಲಿಸಿ ವಿಮರ್ಶಕರು ಮೌಲ್ಯಮಾಪನ ಮಾಡಿರುವುದನ್ನು ಕಾಣಬಹುದು. ಮುಖ್ಯವಾಗಿ ಕೇಂದ್ರ ವಸ್ತುವಿನ ಬಗ್ಗೆ ತಾತ್ವಿಕವಾಗಿ ಚರ್ಚಿಸಿ ವಿಮರ್ಶಕರ ನಿರ್ಧಾರವನ್ನು ಹೇಳುತ್ತಾರೆ.

ನಂತರ ಕಾದಂಬರಿಯುನ್ನು ಖ್ಯಾತ ಲೇಖಕರ ಕಾದಂಬರಿಯು ಜೊತೆಗೆ ಹೋಲಿಸುವಂತಹದ್ದನ್ನು ನಾವು ಕಾಣುತ್ತೇವೆ. ಉದಾಹರಣೆಗೆ 'ಬೀಜ' ಕಾದಂಬರಿಯನ್ನು ಯು.ಆರ್. ಅನಂತಮೂರ್ತಿಯವರ 'ಭಾರತೀಪುರ' ಯಶವಂತ ಚಿತ್ತಾಲರ 'ಶಿಕಾರಿ' ಕಾದಂಬರಿಯ ಜೊತೆಗೆ ಹೋಲಿಸುತ್ತಾ ಇವೆರಡು ಕಾದಂಬರಿಗಿಂತ ಭಿನ್ನವಾಗಿದೆ ಎಂಬಂತಹ ನಿರ್ಣಯವನ್ನು ವಿಮರ್ಶಕರು ನೀಡುತ್ತಾರೆ. ಈ ಕೃತಿಯಲ್ಲಿ ಮುಖ್ಯವಾಗಿ ಕಂಡುಬರುವ ಅಂಶವೆಂದರೆ ಪಟ್ಟಣ ಮತ್ತು ಹಳ್ಳಿಯ

ಜೀವನದ ಬದುಕು ಯಾವುದು ಶ್ರೇಷ್ಠ ವ್ಯಕ್ತಿಯ ಬದುಕಿಗೆ ಯಾವುದು ಮುಖ್ಯ ಎಂಬ ಅಂಶವನ್ನು ಹೊಂದಿದೆ ಇದನ್ನು ಕುರಿತು ವಿಮರ್ಶಕರು ಈ ಕೃತಿಯಲ್ಲಿ ಚರ್ಚಿಸುತ್ತಾ ಈ ಕೃತಿಯ ವಿಮರ್ಶಗೆ ಮುಕ್ತಾಯ ಹಾಡಿದ್ದಾರೆ.

ಉದಾಹರಣೆಯಾಗಿ ಈ ಕೆಳಗಿನಂತೆ ಕಾದಂಬರಿಯನ್ನು ನೋಡಬಹುದು.

"ಜ್ಞಾನಪೀಠ ಪ್ರಶಸ್ತಿ ವಿಜೇತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಐತಿಹಾಸಿಕ ಕಾದಂಬರಿ 'ಚಿಕವೀರ ರಾಜೇಂದ್ರ' ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು. 'ನಾಡಿ ಪರೀಕ್ಷೆಯಿಂದ ಇಡೀ ದೇಹದ ಸ್ಥಿತಿಯನ್ನು ತಿಳಿಯಬಲ್ಲಂಥ ಮಾಸಿಯವರ ಸೂಕ್ಷ್ಮಕಲೆ ವಿಶ್ವ ಸಾಹಿತ್ಯದಲ್ಲಿ ಒಂದು ಒಳ್ಳೆಯ ಕೃತಿಯೆನಿಸುವ "ಚಿಕವೀರ ರಾಜೇಂದ್ರ"ವನ್ನು ನಮಗೆ ಕೊಟ್ಟಿದೆ ಎನ್ನಬಹುದು ಎಂದು ಡಾ। ಯು. ಆರ್. ಅನಂತಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ; ಮಾಸ್ತಿಯವರನ್ನು ಬ್ರೆಕ್ಟ್, ಥಾಮಸ್‌ಮನ್, ಕಾಫ್ಕಾ, ಕಮೂ, ಬಸವ, ಆರ್ವೆಲ್, ಯೇಟ್ಸ್ ಇಂಥವರ ಸಾಲಿಗೆ ಸೇರಿಸಿದ್ದಾರೆ. ಈ ಕಾದಂಬರಿಯ ಕೆಲವು ಭಾಗಗಳಲ್ಲಿ ಮಾಸ್ತಿಯವರ ಬರವಣಿಗೆ ಶೇಕ್ಸ್‌ಪಿಯರ್ ಮಟ್ಟದ್ದು ಎಂದು ಕೀರ್ತಿನಾಥ ಕುರ್ತಕೋಟಿಯವರೂ, ಕೆ.ಪಿ. ವಾಸುದೇವನ್ ಅವರೂ ಹೇಳಿದ್ದಾರೆ. ವಿ. ಎಂ. ಇನಾಂದಾರರು 'ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ' ಎಂಬ ಪುಸ್ತಕದಲ್ಲಿ ಮಾಸ್ತಿಯವರ ಕಾದಂಬರಿಯನ್ನು ವಿವರವಾಗಿ ಚರ್ಚಿಸಿದ್ದಾರೆ."[೧]

"ಮಾಸ್ತಿಯವರು ಚಿಕವೀರ ರಾಜೇಂದ್ರವನ್ನು ಪ್ರಧಾನವಾಗಿ ಏಳು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. 'ಪ್ರಾಸ್ತಾವಿಕ', 'ಕಥಾಮುಖ', 'ಪೂರ್ವಕಥೆ', 'ಕಥಾಗರ್ಭ', 'ಕಥಾಪೂರಣ', 'ಕಥಾಶೇಷ' ಮತ್ತು 'ಸಮಾರೋಪಕ' ಈ ಏಳು ಭಾಗಗಳು ಒಟ್ಟು ೧೮೭ ಅಧ್ಯಾಯಗಳಲ್ಲಿ ೫೩೩ ಪುಟಗಳವರೆಗೆ ಚಾಚಿಕೊಂಡಿದೆ."[೨]

"ಶಾಂತಿನಾಥ ದೇಸಾಯಿ ಕನ್ನಡ ನವ್ಯ ಲೇಖಕರಲ್ಲಿ ಮುಖ್ಯರಾದವರು. ವ್ಯಕ್ತಿಯ ಒಳ ಮನಸ್ಸಿನ ವಿಶ್ಲೇಷಣೆಗೆ ಹೆಸರಾದವರು. 'ಬೀಜ' ದೇಸಾಯಿಯವರ ಐದನೆಯ ಕಾದಂಬರಿ. ಇವರ ಮೊದಲ ಕಾದಂಬರಿ 'ಮುಕ್ತಿ' ಕನ್ನಡದ ನವ್ಯ ಕಾದಂಬರಿಗಳಲ್ಲಿ ಮುಖ್ಯವಾದದ್ದು, 'ವಿಕ್ಷೇಪ', 'ಸೃಷ್ಟಿ', 'ಸಂಬಂಧ' ಇತರ ಕಾದಂಬರಿಗಳು."[೩]

"ಹಾಗೆ ನೋಡಿದರೆ 'ಬೀಜದ ವಸ್ತು ಹೊಸದೇನೂ ಅಲ್ಲ'. ಮರಳಿ ಮಣ್ಣಿಗೆ ಕನ್ನಡದ ಕತೆ, ಕಾದಂಬರಿಗಳಿಗೆ ಯಾವತ್ತೂ ಒಂದು ಮುಖ್ಯ ವಸ್ತುವೇ ಆಗಿದೆ."[೪]

ನಾಟಕ ಕುರಿತ ಲೇಖನಗಳು

ವಿಮರ್ಶಕರು ಸಾಹಿತ್ಯ ಪ್ರಕಾರವಾದ ನಾಟಕ ಕ್ಷೇತ್ರವನ್ನು ಕುರಿತು ರಚಿತವಾದ ನಾಟಕವನ್ನು

ವಿಮರ್ಶಿಸುವಾಗ ತಮ್ಮದೇ ಆದ ಕೆಲತಂತ್ರಗಳನ್ನು ರಚಿಸಿದ್ದಾರೆ. ನಾಟಕ ಕೃತಿಯನ್ನು ವಿಮರ್ಶಿಸುವಾಗ ಮೊದಲಿಗೆ ನಾಟಕವು ಯಾವ ಪ್ರಕಾರಕ್ಕೆ ಸೇರಿದೆ? ಅದು ಸಾಮಾಜಿಕ ನಾಟಕವೋ? ರಾಜಕೀಯ ನಾಟಕವೋ? ಪುರಾಣಕ್ಕೆ ಸಂಬಂಧಿಸಿದ್ದೋ ಎಂಬುದರ ಬಗ್ಗೆ ವಿಮರ್ಶೆ ಆರಂಭಿಸುತ್ತಾರೆ. ನಂತರ ಆ ನಾಟಕವೂ ಕಾಣಿಸಿಕೊಂಡ ಕಾಲದ ಬಗ್ಗೆ ತಿಳಿಸುತ್ತಾ ಅದು ಮೊಟ್ಟ ಮೊದಲ ಕೃತಿಯೋ? ಅಥವಾ ಎರಡನೇ ಕೃತಿಯೋ ಎಂಬುದರ ಬಗ್ಗೆ ಚರ್ಚಿಸುತ್ತಾ ಸಾಹಿತ್ಯದ ಪ್ರಕಾರಗಳಿಂದ ಕಾದಂಬರಿಯ ಜೊತೆಗೆ ಹೋಲಿಸುತ್ತಾರೆ. ಯಾವ ಸಾಹಿತ್ಯ ಪ್ರಕಾರಗಳು ಮೊದಲು ಆರಂಭವಾದವು ಎಂಬುದರ ಬಗ್ಗೆ ಇಸ್ವಿ ಸಮೇತ ಚರ್ಚಿಸುತ್ತಾ ಹೋಗಿದ್ದಾರೆ. ಮತ್ತು ಈ ಕೃತಿಯ ಪುನರ್ ಮುದ್ರಣದ ಬಗ್ಗೆ, ಅನುವಾದದ ಬಗ್ಗೆ ಅನುವಾದಿಸಿದವರ ಬಗ್ಗೆ ವಿವರ ನೀಡುತ್ತಾ ಹೋಗುತ್ತಾರೆ.

ಈ ಕೃತಿಯ ವಿಷಯಕ್ಕೆ ತೊಡಗುವ ಮೊದಲು ಕೃತಿಯ ರಚನೆಯ ಕಾಲದ ಸಂದರ್ಭದ ಸಾಂಸ್ಕೃತಿಕ ಪರಿಚಯವನ್ನು ಮಾಡುತ್ತಾ ಅಂದಿನ ಸಾಹಿತ್ಯ ವಲಯವು ಎದುರಿಸಿದ ಸವಾಲುಗಳನ್ನು ತಿಳಿಸುತ್ತಾ ಹೋಗುತ್ತಾರೆ. ನಂತರ ಕೃತಿಯ ಕರ್ತವಿನ ಜೀವನ ಚರಿತ್ರೆ, (ಬಾಲ್ಯದಿಂದ ಹಿಡಿದು ಕಾಲವಾಗುವವರೆಗೂ) ಅವರ ಜೀವನ ಸಾಧನೆಗಳನ್ನು ತಿಳಿಸುತ್ತಾರೆ.

ವಿಮರ್ಶಕರು ಕೃತಿಯನ್ನು ನೇರವಾಗಿ ಪ್ರವೇಶಿಸಿ ಕೃತಿಯ ಅಂದಿನ ಸ್ಥಿತಿಗತಿಯ ಅನುಗುಣವಾಗಿ ಚರ್ಚಿಸುತ್ತಾ ಹೋಗುತ್ತಾರೆ. ಕೃತಿಯ ಶೀರ್ಷಿಕೆಯ ಬಗ್ಗೆ ಇತರ ಲೇಖಕರು ಹೇಳಿರುವುದನ್ನು ಚರ್ಚಿಸುತ್ತಾ, ವಾದಿಸುತ್ತಾ, ಲೇಖಕರ ಹೇಳಿಕೆಗಳಿಗೆ ಉತ್ತರವನ್ನು ನೀಡುತ್ತಾರೆ. ಇದನ್ನೆಲ್ಲಾ ನಾವು ಶೋಧಿಸುತ್ತಾ ಹೋದಂತೆ ನಮಗೆ ಇದು ಕರ್ತೃ ಪರಿಚಯವೇ ಜಾಸ್ತಿ ಇದೆ ಎಂದು ಅನಿಸಿದರೂ ಇದರ ಜೊತೆಗೆ ಕೃತಿ ವಿಮರ್ಶೆಯು ಇರುವುದನ್ನು ಕಾಣಬಹುದು.

ಮೊದಲಿಗೆ ಓದುವ ವರ್ಗಕ್ಕೆ ಕೃತಿಯು ಪರಿಚಯವಾಗಲೆಂದೇ ಅದರ ಪುಟಸಂಖ್ಯೆ, ನಾಟಕದ ದೃಶ್ಯಗಳು ಎಷ್ಟು ಸಾರಿ ಬದಲಾಗುತ್ತವೆ ಮತ್ತು ಏಕೆ ಬದಲಾಗುತ್ತವೆ ಎಂಬುದರ ಬಗ್ಗೆ ಮತ್ತು ನಾಟಕದ ತಿರುವುಗಳು ಅದರ ಪ್ರಮುಖ ಕಥಾ ವಸ್ತು, ಅದು ಮುಂದುವರಿಯಲು ಕಾರಣವಾಗುವ ಘಟ್ಟಗಳನ್ನು ಪರಿಚಯಿಸಿದ್ದಾರೆ. ಕೃತಿಯನ್ನು ಪ್ರವೇಶಿಸಿ ಕೃತಿಯನ್ನು ತಾತ್ವಿಕ ಹಿನ್ನೆಲೆಯಲ್ಲಿ ಅಂದಿನ ಪರಿಸ್ಥಿತಿಯನ್ನು ಇಂದಿನ ಸಂಸ್ಕೃತಿಗೆ ಹೋಲಿಸುತ್ತಾ ನಾಟಕದ ತಿರುಳನ್ನು ಚರ್ಚಿಸಿದ್ದಾರೆ.

ಕೊನೆಯಲ್ಲಿ ಕೃತಿಕಾರನ ಕೃತಿಯಲ್ಲಿ ಅರಳಿರುವ ವಸ್ತುವನ್ನು ಮತ್ತು ಪರಂಪರೆಯನ್ನು ಅಂದಿನ ನಾಟಕಕಾರರು ಮತ್ತು ಇಂದಿನ ನಾಟಕಕಾರರು ಪರಂಪರಾಗತವಾಗಿ ಉಳಿಸಿಕೊಂಡು ಬಂದಿದ್ದಾರೆ ಎಂದು ಹೇಳುತ್ತಾ ನಾಟಕಕಾರರ ಪ್ರಮುಖ ಹೆಸರುಗಳನ್ನು ಹೆಸರಿಸುತ್ತಾ ಕೃತಿಗೆ ಮುಕ್ತಾಯವನ್ನು ಹಾಡಿದ್ದಾರೆ.

ಉದಾಹರಣೆಯಾಗಿ ನಾಟಕವನ್ನು ಈ ಕೆಳಗಿನಂತೆ ನೋಡಬಹುದು.

"ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಕನ್ನಡದ ಮೊದಲ ಸಾಮಾಜಿಕ ಕೃತಿ. ಕನ್ನಡ ಸಾಹಿತ್ಯಕ್ಕೆ ವಾಸ್ತವವಾದವು ಮೊದಲು ಒಂದು ನಾಟಕದಲ್ಲಿ ಕಾಣಿಸಿಕೊಂಡದ್ದು ಒಂದು ವಿಶೇಷ ಸಂಗತಿ. ಏಕೆಂದರೆ ಕನ್ನಡದ ಮೊದಲು ಸಾಮಾಜಿಕ ಕಾದಂಬರಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಪ್ರಕಟವಾದುದ್ದು ೧೮೯೯ರಲ್ಲಿ, 'ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ' ಮೊದಲು ಪ್ರಕಟವಾಗಿದ್ದು ೧೮೮೭ರಲ್ಲಿ, ೧೯೫೩ರಲ್ಲಿ ಲಿಂಗೇಶ ಶರ್ಮ ಅವರು ಈ ನಾಟಕವನ್ನು ಪುನರ್ ಮುದ್ರಿಸಿ ನಾಡಿಗೆ ಗಮನ ಸೆಳೆದಿದ್ದರು. ೧೯೮೮ರಲ್ಲಿ ಡಾ। ಶಾಲಿನಿ ರಘುನಾಥ ಅವರು ಈ ನಾಟಕವನ್ನು ಹೊಸಗನ್ನಡ ಅನುವಾದ ಸಹಿತ ಪ್ರಕಟಿಸಿರುವುದಲ್ಲದೆ ಒಂದು ಸುದೀರ್ಘ ಅಧ್ಯಯನವನ್ನು ಮಾಡಿದ್ದಾರೆ."[೫]

"ವೆಂಕಟರಮಣ ಶಾಸ್ತ್ರಿಗಳು ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕರ್ಕಿಯವರು. ವೈದಿಕ ಕರ್ಮಕಾಂಡಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಇವರ ಮನೆತನಕ್ಕೆ ಗುರುಪೀಠಾಧೀಶ್ವರರಿಂದ 'ಸೂರಿ' (ವಿದ್ವಾಂಸ) ಎಂಬ ಬಿರುದು ದೊರೆಕಿತ್ತಂತೆ. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಕರ್ಕಿಯಲ್ಲಿ ಮುಗಿಸಿ ಮುಂದೆ ಶ್ರೀರಾಮಚಂದ್ರಾಪುರ ಮಠದಲ್ಲಿ ಸಂಸ್ಕೃತ ಅಭ್ಯಾಸ ಮಾಡಿ..."[೬]

"ತಲೆದಂಡ ಮೂರು ಅಂಶಗಳ ಒಟ್ಟು ಹದಿನಾರು ದೃಶ್ಯಗಳ ಒಂದು ಪೂರ್ಣಪ್ರಮಾಣದ ನಾಟಕ. ಮೊದಲ ಅಂಕದಲ್ಲಿ ಭಂಡಾರಿಯಾಗಿ ಬಸವಣ್ಣ ಎದುರಿಸುವ ಆಪಾದನೆಗಳು ಮತ್ತು ಅದರ ಪರಿಣಾಮಗಳ ಸುತ್ತ ದೃಶ್ಯಗಳು ಕಟ್ಟಿಕೊಳ್ಳುತ್ತವೆ. ಎರಡನೆಯ ಅಂಕದಲ್ಲಿ ಮಧು ವರಸನ ಮಗಳನ್ನು ಹರಳಯ್ಯನ ಮಗ ಮದುವೆಯಾಗುವ ಸಂದರ್ಭದ ಪರಿಶೀಲನೆ ಇದೆ. ಮೂರನೆಯ ಅಂಕದಲ್ಲಿ ಸೋವಿದೇವ ತನ್ನ ಅಪ್ಪ ಬಿಜ್ಜಳನನ್ನು ಬಂಧಿಸಿ ತಾನು ರಾಜನಾಗುವ ಪ್ರಸಂಗ ವರ್ಣನೆ ಇದೆ."[೭]

"ಇಗ್ಗಪ್ಪ ಹೆಗಡೇ . . . 'ಯಿಂದ ಪ್ರಾರಂಭವಾದ ಪರಂಪರೆ ಕೈಲಾಸಂ, ಶ್ರೀರಂಗ, ಜಿ.ಬಿ. ಜೋಶಿ ಮುಂತಾದವರಲ್ಲಿ ಮುಂದುವರಿದಿದೆ. ಅಷ್ಟೇ ಅಲ್ಲ ಶಾಸ್ತ್ರಿಗಳ ನಾಟಕದಲ್ಲಿ ಕಾಣುವ ಮೂಲವಿನ್ಯಾಸವೊಂದು ಮುಂದೆ ಕಾರಂತ, ಕುವೆಂಪು, ಅನಂತಮೂರ್ತಿ, ಲಂಕೇಶ, ತೇಜಸ್ವಿ, ಆಲನಹಳ್ಳಿ ಕೃಷ್ಣ, ದೇವನೂರ ಮಹಾದೇವ ಮುಂತಾದವರ ಬೇರೆ ಬೇರೆ ಮನೋಧರ್ಮದವರೆಂದು ಹೇಳಲಾಗುವ.........."[೮]

ಕಥಾಸಂಕಲನ ಕುರಿತ ಲೇಖನಗಳು

ಟಿ.ಪಿ. ಅಶೋಕರವರು 'ಕಥಾಸಂಕಲನ' ಪ್ರಕಾರದ ವಿಮರ್ಶೆ ಮಾಡುವಾಗ ತಮ್ಮದೇ ಆದ ಹೊಸ ತಂತ್ರಗಳನ್ನು ಬಳಸಿದ್ದಾರೆ. ವಿಮರ್ಶಕರು ಕೃತಿಕಾರನ ಇತರೆ ಕಥಾಸಂಕಲನಗಳನ್ನು ಹೆಸರಿಸುತ್ತಾ ವಿಮರ್ಶೆಗೆ ಪ್ರಾರಂಭಿಸುತ್ತಾರೆ. ಮತ್ತು ಆ ಕಥಾ ಸಂಕಲನಗಳಿಗೆ ಸಂದ ಪ್ರಶಸ್ತಿಗಳನ್ನು ತಿಳಿಸುತ್ತಾರೆ. ವಿಮರ್ಶಕರು ಕೃತಿಕಾರನ ಸ್ಥಾನಮಾನದ ಬಗ್ಗೆ ಮಾತನಾಡುತ್ತಾರೆ.

ಲೇಖಕರ ಸಮಾಜದಿಂದ ಬಂದ ಇತರ ಲೇಖಕರ ಹೆಸರುಗಳನ್ನು ಸೂಚಿಸುತ್ತಾರೆ ಮತ್ತು ಒಂದು ಸಮಾಜದ ಜೊತೆಗೆ ಇನ್ನೊಂದು ಸಮಾಜವನ್ನು ಹೋಲಿಸುವಂತ ಕೆಲಸವನ್ನು ಮಾಡುತ್ತಾರೆ. ಉದಾಹರಣೆಗಾಗಿ ಮುಸ್ಲಿಂ ಸಮಾಜ ಮತ್ತು ಹಿಂದೂ ಸಮಾಜವನ್ನು ಕಥಾ ಸಂಕಲನದಲ್ಲಿ ಕಾಣಿಸಿದ್ದಾರೆ. ಉಳಿದಂತೆ ಮೇಲ್ವರ್ಗದಲ್ಲಿರುವಂತಹ ಬ್ರಾಹ್ಮಣ ಜಾತಿಯನ್ನು ವರ್ಗ, ವರ್ಣ, ಸಂಘರ್ಷವನ್ನು ಇಂದಿನ ಸ್ಥಿತಿಯಲ್ಲಿ ಇವುಗಳನ್ನು ಮೀರಬೇಕಾದುದು ಎಲ್ಲ ಸಂವೇದನಾಶೀಲರ ತುಡಿತವಾಗಿರುವುದಾದರೂ ಅದನ್ನು ತಮ್ಮ ನಿತ್ಯಜೀವನದ ಚೌಕಟ್ಟಿನಲ್ಲಿಯೇ ಮಾಡಲಾಗುತ್ತದೆಯಲ್ಲವೇ? ಎಂದು ಹೇಳುತ್ತಾ ಕೆಲವು ಖ್ಯಾತ ಲೇಖಕರ ಉದಾಹರಣೆಗಳ ಮೂಲಕ ಕಾವ್ಯಗಳನ್ನು, ಕಾದಂಬರಿಗಳನ್ನು, ಕಥೆಗಳನ್ನು ಮತ್ತು ಲೇಖಕರ ಹೆಸರುಗಳನ್ನು ಸೂಚಿಸುತ್ತಾ ಕೃತಿಕಾರನ ಸಮಾಜದ ಲೇಖಕರನ್ನು ವಿಭಿನ್ನ ಎಂದು ವಿಮರ್ಶಕರು ಹೇಳಿದ್ದಾರೆ.

ವಿಮರ್ಶಕರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆಗುತ್ತಿರುವ ಕೆಲವು ಬದಲಾವಣೆಗಳ ಬಗ್ಗೆ ವರ್ಗ, ವರ್ಣ ಅದರಲ್ಲಿಯೂ ದಲಿತರನ್ನು, ಮುಸ್ಲೀಂರಿಗೆ ಹೋಲಿಸುತ್ತಿದ್ದಾರೆ. ಇತ್ತೀಚೆಗೆ ಬರಹಗಳನ್ನು ಅದರಲ್ಲಿನ ಭಾಷೆ, ಧರ್ಮ, ಆಚಾರ–ವಿಚಾರ, ವಸ್ತ್ರ–ಊಟಗಳಲ್ಲಿ, ಒಂದು ಜಾತಿ ಬರಹಗಾರರನ್ನು ಇನ್ನೊಂದು ಜಾತಿಯ ಬರಹಗಾರರಿಗೆ ಹೋಲಿಸುತ್ತಾ ಎರಡು ವರ್ಗದ ಲೇಖಕರ ಹೆಸರುಗಳನ್ನು ತಿಳಿಸಿದ್ದಾರೆ. ವಿಮರ್ಶಕರು ಮಾನವನು ಸಂಘಜೀವಿಯಾಗಬೇಕು ಎಲ್ಲದರಲ್ಲೂ ಸಮಾನತೆಯನ್ನು ಕಾಪಾಡಿಕೊಳ್ಳುವಂತವನಾಗಬೇಕು ಎಂದು ಹೇಳುತ್ತಾರೆ.

ವಿಮರ್ಶಕರು ಇಷ್ಟೆಲ್ಲಾ ಚರ್ಚೆಗಳ ನಂತರ ಕೃತಿಗೆ ಪ್ರವೇಶ ಮಾಡಿ ಪ್ರತಿಯೊಂದು ಕೃತಿಯಲ್ಲಿನ ತಿರುಳನ್ನು ಚರ್ಚಿಸುತ್ತಾ ಪ್ರತಿಯೊಂದು ಕಥೆಯು ಸಮಾಜದಲ್ಲಿನ ಘಟನೆಗಳಿಗೆ ಸಾಕ್ಷಿಯಾಗಿ ನಿಂತಿರುವುದನ್ನು ಅದರಲ್ಲಿ ಅಡಗಿರುವ ಸಾವು–ನೋವು, ಸುಖ–ದುಃಖ, ರೋಷ–ದ್ವೇಷ, ಕಾಮ–ಪ್ರೇಮ, ಬಡತನ–ಸಿರಿತನಗಳನ್ನು ಕುರಿತು ಕಥೆಗಳ ಮೂಲಕ ವಿಮರ್ಶಕರು ಓದುಗರಿಗೆ ತಿಳಿಸುತ್ತಾ ಕಥಾಸಂಕಲನಕ್ಕೆ ಪೂರ್ಣವಿರಾಮ ಹಾಕಿದ್ದಾರೆ.

ಉದಾಹರಣೆಯಾಗಿ ಕಥಾಸಂಕಲನವನ್ನು ಈ ಕೆಳಗಿನಂತೆ ನೋಡಬಹುದು

"ಅಂಕ ಬೋಳುವಾರು ಮಹಮದ್ ಕುಂಞಯವರ ಮೂರನೆಯ 'ಕಥಾ ಸಂಕಲನ'. ಕ್ರಮವಾಗಿ ತಮ್ಮ ಮೊದಲೆರಡು ಸಂಕಲನಗಳಾದ 'ಅತ್ತ ಇತ್ತಗಳ ಸುತ್ತಮುತ್ತ' ಮತ್ತು 'ದೇವರುಗಳ ರಾಜ್ಯದಲ್ಲಿ'ಗಳಿಗಿಂತ ಮುಂದೆ ಸಾಗಿ ಬಂದಿರುವ ಬೋಳುವಾರು 'ಅಂಕ'ದಲ್ಲಿ ಕತೆಗಾರರಾಗಿ ತಮ್ಮ ಇರುವನ್ನು ಇನ್ನಷ್ಟು ಖಚಿತ ಪಡಿಸಿಕೊಂಡಿದ್ದಾರೆ. 'ದೇವರುಗಳ ರಾಜ್ಯದಲ್ಲಿ' ಸಂಕಲನಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯು ಲಭ್ಯವಾಗಿದೆ. ನಮ್ಮ ಮುಖ್ಯ ಕತೆಗಾರರಲ್ಲಿ ಒಬ್ಬರಾಗಿ ಬೆಳೆಯುತ್ತಿರುವ ಬೋಳುವಾರು ಇನ್ನಷ್ಟು ಪ್ರಬುದ್ಧರಾಗಿರುವ ಸೂಚನೆಗಳು 'ಅಂಕ' ಸಂಕಲನದಲ್ಲಿ ಕಾಣುತ್ತಲಿವೆ."[೯]

"ಇದರರ್ಥ ಮುಸ್ಲಿಂ ಸಮಾಜದಿಂದ ಕನ್ನಡಕ್ಕೆ ಲೇಖಕರು ಬಂದಿರಲಿಲ್ಲವೆಂದೇನೂ ಇಲ್ಲ. ಶಿಶುನಾಳ ಶರೀಫ್ ಕನ್ನಡದ ಅನುಭಾವಿ ಕಾವ್ಯಪರಂಪರೆಯಲ್ಲಿ ಮುಖ್ಯವಾದವನೇ. ನಿಸಾರ್ ಅಹಮದ್ ಮತ್ತು ಅಕಬರ್ ಅಲಿ ಕೂಡ ಆಧುನಿಕ ಕನ್ನಡ ಕಾವ್ಯ ಜಗತ್ತಿನಲ್ಲಿ ಹೆಸರು ಮಾಡಿರುವಂಥವರೇ."[೧೦]

"ಅಡಿಗರ ಕಾವ್ಯಲೋಕಕ್ಕೂ, ಕಂಬಾರರ ಕಾವ್ಯಲೋಕಕ್ಕೂ ಇರುವ ವ್ಯತ್ಯಾಸ, ಕುವೆಂಪು ಕಾದಂಬರಿಲೋಕಕ್ಕೂ ಕಾರಂತರ ಕಾದಂಬರಿ ಲೋಕಕ್ಕೂ ಇರುವ ವ್ಯತ್ಯಾಸ, ಅನಂತಮೂರ್ತಿಯವರ ಕಥಾಲೋಕಕ್ಕೂ, ದೇವರನೂರ ಮಹಾದೇವರ ಕಥಾಲೋಕಕ್ಕೂ ಇರುವ ವ್ಯತ್ಯಾಸ ಕೇವಲ ಸಾಹಿತ್ಯದಲ್ಲಿ ಅಲ್ಲವೇ? ಇವುಗಳಿಗಿರುವ ಸಾಂಸ್ಕೃತಿಕ, ಸಾಮಾಜಿಕ ವ್ಯತ್ಯಾಸವೂ ಮುಖ್ಯವಲ್ಲವೇ? ಕನ್ನಡ ಸಾಹಿತ್ಯದ ವ್ಯಾಪಕತೆ ಮತ್ತು ವೈವಿಧ್ಯತೆಗಳಿಗೆ ಈ ವ್ಯತ್ಯಾಸಗಳು ಅಪೇಕ್ಷಣೀಯವಲ್ಲವೇ?"[೧೧]

ಆತ್ಮಕಥನ ಕುರಿತ ಲೇಖನಗಳು

ಟಿ.ಪಿ. ಅಶೋಕರವರು 'ಆತ್ಮಚರಿತ್ರೆ' ಪ್ರಕಾರದ ವಿಮರ್ಶೆ ಮಾಡುವಾಗ ತಮ್ಮದೇ ಆದ ಕೆಲವು ತಂತ್ರಗಳನ್ನು ಬಳಸಿದ್ದಾರೆ. ವಿಮರ್ಶಕರು ಲೇಖಕರ ವಯಸ್ಸನ್ನು ತಿಳಿಸುತ್ತಾ ಪುಸ್ತಕ ವಿಮರ್ಶೆಗೆ ತೊಡಗಿದ್ದಾರೆ. ಲೇಖಕರನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನಮಾನದ ಬಗ್ಗೆ ವೈಭವೀಕರಿಸಿದ್ದಾರೆ. ಲೇಖಕರು ತಮ್ಮ ಕೃತಿಯನ್ನು ಬರೆದು ಮುಗಿಸಿದ ದಿನಗಳ ಬಗ್ಗೆ, ಆ ಕೃತಿಯು ಎಷ್ಟರಲ್ಲಿ ಮುದ್ರಣಗೊಂಡಿತು, ಯಾವ ಪ್ರಕಾಶನದಿಂದ ಪ್ರಕಟಿಸಲಾಯಿತು ಎಂಬುದರ ಬಗ್ಗೆ ಓದುಗರಿಗೆ ಮಾಹಿತಿಯನ್ನು ನೀಡುತ್ತಾ ವಿಮರ್ಶಕರು ಪುಸ್ತಕ ವಿಮರ್ಶೆಗೆ ತೊಡಗಿದ್ದಾರೆ.

ಲೇಖಕರು ತಮ್ಮ ಅನುಭವಗಳನ್ನು ನಾಲ್ಕು, ಐದು ಹಂತಗಳಲ್ಲಿ ಕೃತಿಯಲ್ಲಿ ಸೇರಿಸುವುದರ ಬಗ್ಗೆ ತಿಳಿಸುತ್ತಾ ಹೋಗಿದ್ದಾರೆ. ನಂತರ ಲೇಖಕರಿಗೆ ಆಸಕ್ತಿಯಿರುವ ಬೇರೆ ಬೇರೆ ಕ್ಷೇತ್ರಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಜೊತೆಗೆ ಲೇಕಖರ ಪೋಟೋಗಳನ್ನು ಸೇರಿಸಿರುವುದನ್ನು ಹೇಳುತ್ತಾರೆ.

ಲೇಖಕರ ಜೀವನದ ಅನುಭವಗಳನ್ನು ಇತರೆ ಕೃತಿಗಳಲ್ಲಿ ಸೇರಿಸಿದ್ದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಆತ್ಮಚರಿತ್ರೆಯನ್ನು ಹೊಗಳುತ್ತಿದ್ದಾರೆ. ಕಾರಣ ಲೇಖಕರ ಪರಿಸರದ ಜನರು ಅದನ್ನು ಮೆಚ್ಚಿಕೊಂಡಿರುವುದನ್ನು ವಿಮರ್ಶಕರು ಪ್ರಸ್ತಾಪಿಸುತ್ತಾರೆ. ನಂತರ ಲೇಖಕರನ್ನು ಕುರಿತು ಅವರ ಸ್ವಭಾವದ ಬಗ್ಗೆ ವಿಮರ್ಶಕರು ಸೂಚಿಸಿದ್ದಾರೆ. ಲೇಖಕರ ಹೃದಯ ಕಠಿಣವೇ, ಮೃದುವೇ, ಹಾಸ್ಯಪ್ರಿಯರೇ ಎಂಬುದರ ಬಗ್ಗೆ ವಿಮರ್ಶಕರು ಲೇಖಕರನ್ನು ಕುರಿತು ಚರ್ಚಿಸಿದ್ದಾರೆ. ಕೃತಿಕಾರರನ್ನು ಕುರಿತು ಅಧ್ಯಯನ ಮಾಡುವವರಿಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ ಎಂಬುದರ ಬಗ್ಗೆ ಕೃತಿಯನ್ನು ಕುರಿತು ವಿಮರ್ಶಕರು ಹೇಳುತ್ತಾರೆ. ಕೃತಿಯ ಸ್ವರೂಪವನ್ನು ಅದರ ಬರವಣಿಗೆಯನ್ನು

ಕುರಿತು ಹೇಳುತ್ತಾರೆ. ಕೃತಿಯನ್ನು ಕುರಿತು ಕನ್ನಡ ಸಾಹಿತ್ಯದಲ್ಲಿಯೇ ಒಳ್ಳೆಯ ಹೆಸರನ್ನು ಪಡೆದಂತಹ ಗ್ರಂಥ ಎಂದು ವಿಮರ್ಶಕರು ಹೊಗಳುತ್ತಾರೆ.

ವಿಮರ್ಶಕರು ನೇರವಾಗಿ ಕೃತಿಗೆ ಪ್ರವೇಶಿಸಿ ಮೊದಲ ಅಧ್ಯಾಯವಾದ 'ಪ್ರಸ್ತಾವನೆ'ಯಲ್ಲಿನ ವಿಷಯಗಳ ಬಗ್ಗೆ ಕೃತಿಕಾರನ ಸಂಬಂಧಗಳ ಬಗ್ಗೆ ಚರ್ಚಿಸುತ್ತಾರೆ. ನಂತರ ಲೇಖಕರ ಕೃತಿಯ ಶೀರ್ಷಿಕೆಯ ಬಗ್ಗೆ ಬೇರೆ ಲೇಖಕರು ಚರ್ಚಿಸಿರುವುದನ್ನು ವಿಮರ್ಶಕರು ಹೇಳುತ್ತಾ ಬೇರೆ ಲೇಖಕರ ಹೆಸರುಗಳನ್ನು ಸೂಚಿಸಿದ್ದಾರೆ. ಕೃತಿಯಲ್ಲಿ ಅನೇಕ ವಿಷಯಗಳನ್ನು ಒಳಗೊಂಡಿರುವುದರ ಬಗ್ಗೆ ಸವಿವರವಾಗಿ ಪುಸ್ತಕ ವಿಮರ್ಶೆಯಲ್ಲಿ ವಿಮರ್ಶೆ ಮಾಡುತ್ತಾರೆ. ಲೇಖಕರು ಬೇರೆ ಬೇರೆ ಕ್ಷೇತ್ರಗಳ ಸಾಧನೆಗಳನ್ನು ತಿಳಿಸುತ್ತಾರೆ. ಉದಾಹರಣೆಯಾಗಿ ರಾಜಕೀಯ, ಶೈಕ್ಷಣಿಕ ಕ್ಷೇತ್ರವನ್ನು ಕಾಣಿಸುತ್ತಾರೆ.

ಲೇಖಕರ ಇತರ ಕೃತಿಗಳ ಹೆಸರುಗಳನ್ನು ಸೂಚಿಸುತ್ತಾ ಅವುಗಳನ್ನು ಎಷ್ಟು ದಿನಗಳಲ್ಲಿ ಒಂದೊಂದನ್ನು ಬರೆದು ಮುಗಿಸಿದರು ಎಂಬುದನ್ನು ಸೂಚಿಸುತ್ತಾ ಲೇಖಕರ ಬರವಣಿಗೆ ಎಷ್ಟೊಂದು ವೇಗವಾಗಿದೆ ಎಂಬುದನ್ನು ತಿಳಿಸುತ್ತಾರೆ. ಲೇಖಕರ ಕೃತಿಗಳನ್ನು ಚರ್ಚಿಸುತ್ತಾ ಪುಸ್ತಕ ವಿಮರ್ಶೆಯನ್ನು ಮುನ್ನೆಡಿಸಿದ್ದಾರೆ. ಕೊನೆಯಲ್ಲಿ ಲೇಖಕರ ಆಸಕ್ತಿ ಬಗ್ಗೆ, ಅವರ ಒಲುಮೆ, ಚಿಲುಮೆಗಳ ಬಗ್ಗೆ ಮಾತನಾಡುತ್ತಾ ಕೃತಿ ವಿಮರ್ಶೆಗೆ ನಾಂದಿ ಹಾಡಿದ್ದಾರೆ.

ಉದಾಹರಣೆಯಾಗಿ ಆತ್ಮಕಥನವನ್ನು ಈ ಕೆಳಗಿನಂತೆ ನೋಡಬಹುದು.

"ಕಳೆದ ಅಕ್ಟೋಬರ್ ಹತ್ತಕ್ಕೆ ಕಾರಂತರಿಗೆ ಎಂಬತ್ತೆರಡು ತುಂಬಿತು. ಕಳೆದು ಆರು ದಶಕಗಳಿಂದ ಕನ್ನಡ ಸಾಂಸ್ಕೃತಿಕ ಬದುಕಿನ ಕುತೂಹಲಗಳನ್ನು ಒಂದಾಗಿರುವ ಕಾರಂತರ ಚಟುವಟಿಕೆಗಳು ಇನ್ನೂ ಮುಂದುವರೆತ್ತಿರುವುದು ನಾಡಿನ ಪುಣ್ಯ. ಕಳೆದ ಎರಡು ವರ್ಷಗಳಲ್ಲಿ ಹೊಸ ಕಾದಂಬರಿಯನ್ನು ಪ್ರಕಟಿಸುವುದರ ಜೊತೆಗೆ ಪರಿಸರ ಕುರಿತ ಮೂರು ಪುಸ್ತಕಗಳನ್ನು ಅನುವಾದಿಸಿದ್ದಾರೆ. ಪ್ರಾಣಿ ಪ್ರಪಂಚದ ವಿಸ್ಮಯಗಳು, ಮಂಗನಕಾಯಿಲೆ ಮುಂತಾದ ವಿಷಯಗಳ ಬಗ್ಗೆ ಬರೆದಿದ್ದಾರೆ."[೧೨]

"ಕಾರಂತರು ಈ ಪುಸ್ತಕವನ್ನು ಬರೆದು ಸುಮಾರು ಮೂವತ್ತು ವರ್ಷಗಳೇ ಸಾಗಿ ಹೋಗಿವೆ. ೧೯೬೨ರಲ್ಲಿ ಎರಡನೆಯ ಮುದ್ರಣ ಕಂಡಿದ್ದ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೆಲ ತಿಂಗಳ ಹಿಂದೆ ಮತ್ತೆ ಸಾಗರದ ಪ್ರಕಾಶನದಿಂದ ಹೊರಬಂದಿದೆ. ಇದು ಪರಿಷ್ಕರಿಸಿದ ವಿಸ್ತರಿಸದ ಆವೃತ್ತಿ ೧೯೫೦ರವರೆಗಿನ ತಮ್ಮ ಅನುಭವಗಳನ್ನು ಮೊದಲ ಆವೃತ್ತಿಯಲ್ಲೂ ೧೯೬೦ರವರೆಗಿನ ಅನುಭವಗಳನ್ನು ಎರಡನೆಯ ಆವೃತ್ತಿಯಲ್ಲೂ ಸೇರಿಸಿದ್ದ ಕಾರಂತರು ಮುಂದೆ 'ಸ್ಮೃತಿ ಪಟಲದಿಂದ' ಎಂಬ ಬೇರೊಂದು ಕೃತಿಯ............"[೧೩]

"ರಾಷ್ಟ್ರಭಕ್ತಿ, ಸ್ವದೇಶಿ, ವ್ಯಾಪಾರ, ಪತ್ರಿಕೋದ್ಯಮ, ಆಧ್ಯಾತ್ಮ ಸಾಧನೆ, ಕಲೆಯ ಭಿನ್ನಭಿನ್ನ ಮುಖಗಳು, ಫೋಟೋಗ್ರಾಫಿ, ನಾಟಕ, ನೃತ್ಯ, ಚಿತ್ರ, ವಾಸ್ತು, ಸಂಗೀತ, ಸಿನಿಮಾ, ಸಮಾಜಸುಧಾರಣೆ, ಗ್ರಾಮೋದ್ಧಾರ, ಶಿಕ್ಷಣ ಪ್ರಯೋಗಗಳು, ಉದ್ಯೋಗ ಇವೆಲ್ಲ ಸೇರಿವೆ. ಆದ್ದರಿಂದಲೇ ವಿ.ಎಂ. ಇನಾಂದಾರರು, ಕಾರಂತರು ತಮ್ಮ ಪುಸ್ತಕಕ್ಕೆ 'ಹುಚ್ಚು ಮನಸ್ಸಿನ ಹತ್ತಾರು ಮುಖಗಳು' ಎಂದು ಹೆಸರು ಕೊಟ್ಟಿದ್ದಿದ್ದರೆ ಹೆಚ್ಚು ಸೂಕ್ತವಾಗುತ್ತಿತ್ತೆಂದು ಅಭಿಪ್ರಾಯ ಪಡುತ್ತಾರೆ."[೧೪]

"ಕಾರಂತರ ಬರವಣಿಗೆಯ ವೇಗ ಅಚ್ಚರಿ ಹುಟ್ಟಿಸುವಂಥದ್ದು. 'ಚೋಮನದುಡಿ'ಯನ್ನು ಐದು ದಿನಗಳಲ್ಲಿ, 'ಬೆಟ್ಟದಜೀವ'ವನ್ನು ಆರು ದಿನಗಳಲ್ಲಿ, 'ಮರಳಿ ಮಣ್ಣಿಗೆ'ಯನ್ನು ಮೂವತ್ತು ದಿನಗಳಲ್ಲಿ, 'ಬಾಲಪ್ರಪಂಚ'ವನ್ನು ನೂರಿಪ್ಪತ್ತು ದಿನಗಳಲ್ಲಿ ಬರೆದು ಮುಗಿಸಿದರಂತೆ. 'ಮುಗಿದಯುದ್ಧ' ಇಪ್ಪತ್ತು ದಿನಗಳ ಬರವಣಿಗೆಯಾದರೆ 'ಔದಾರ್ಯದ ಉರುಳಲ್ಲಿ' ಇಪ್ಪತ್ಮೂರು ದಿನಗಳಲ್ಲಿ ಮುಗಿಯಿತಂತೆ."[೧೫]

ಪ್ರವಾಸ ಕಥನ ಕುರಿತ ಲೇಖನಗಳು

ವಿಮರ್ಶಕರು ಕೃತಿಯ ಲೇಖಕರ ಹೆಸರನ್ನು ಮತ್ತು ಅವರು ಕೈಗೊಂಡ ಪ್ರವಾಸದ ತಿಂಗಳನ್ನು ಮತ್ತು ಸ್ಥಳಗಳ ಹೆಸರುಗಳನ್ನು ಸೂಚಿಸುತ್ತಾ ಲೇಖಕರ ಪ್ರವಾಸ ಕಥನದ ಶೀರ್ಷಿಕೆಯ ಬಗ್ಗೆ ಚರ್ಚಿಸುತ್ತಾ ವಿಮರ್ಶೆಯನ್ನು ಪ್ರಾರಂಭಿಸಿದ್ದಾರೆ. ಇಡೀ ಕೃತಿಯ ಸ್ವರೂಪ, ಉದ್ದೇಶಗಳನ್ನು ಚರ್ಚಿಸುತ್ತಾ ತಾನೊಬ್ಬ ಯಾತ್ರಿಕನು ಅಲ್ಲ ಅಥವಾ ಕೇವಲ ಸೌಂದರ್ಯನ್ವೇಷಿಯಾದ ಪ್ರವಾಸಿಯೂ ಅಲ್ಲ ಎಂದು ಹೇಳಿಕೊಳ್ಳುವ ಲೇಖಕರ ಹೇಳಿಕೆಯನ್ನು ಪ್ರಸ್ತಾಪಿಸುತ್ತಾ ವಿಮರ್ಶೆ ಮಾಡಿದ್ದಾರೆ.

ವಿಮರ್ಶಕರು ಲೇಖಕರು ಕಂಡಂತಹ ರಮಣೀಯವಾದ ದೃಶ್ಯಗಳನ್ನು ಅನುಭವಿಸಿದ ಅನುಭವಗಳನ್ನು ನೇರವಾಗಿ, ಕಲಾತ್ಮಕವಾಗಿ, ಸೂಕ್ಷ್ಮವಾಗಿ ದಾಖಲಿಸಿರುವುದನ್ನು ಹೇಳುತ್ತಾರೆ. ಕೆಲವೊಂದು ಲೇಖಕರು ಒಪ್ಪದ ಹಲವು ವಿಚಾರಗಳನ್ನು ದಾಖಲಿಸುವಾಗ ತೋರಿಸುವ ಶ್ರದ್ಧೆ, ಸಂಯಮಗಳ ಬಗ್ಗೆ ವಿಮರ್ಶಕರು ಮಾತನಾಡುತ್ತಾರೆ. ಅಧ್ಯಯನಗಳ ಪ್ರಸ್ತಾಪ ಮತ್ತು ಮನುಷ್ಯ – ನಿಸರ್ಗದೊಂದಿಗೆ ಇಟ್ಟುಕೊಂಡಿರುವ ಸಂಬಂಧಗಳ ಬಗ್ಗೆ ಆಚರಣೆಗಳು, ಮೂಢನಂಬಿಕೆಗಳ ಬಗ್ಗೆ ಚರ್ಚಿಸಲಾಗಿದೆ. ಗಂಗಾನದಿಯನ್ನು ಲೇಖಕರು ತಮ್ಮ ಕೃತಿಯಲ್ಲಿ ವೈಭವೀಕರಿಸಿರುವುದನ್ನು ಚರ್ಚಿಸಿದ್ದಾರೆ.

"ಆಸ್ತಿಕ–ನಾಸ್ತಿಕ ಕಲ್ಪನೆಗಳನ್ನು ಕೃತಿಯಲ್ಲಿ ಲೇಖಕರು ಪ್ರಸ್ತಾಪಿಸಿದ್ದಾರೆ. 'ಈ ನದಿ, ಈ ಬೆಟ್ಟ, ಈ ಬಯಲು, ಈ ಆಕಾಶ, ಇವು ನಿಜವ ಆದ ದೇವರಲ್ಲದೆ, ಗುಡಿಯೊಳಗಿನ ನಾಲ್ಕು ಗೋಡೆಗಳ ನಡುವೆ, ಉಸಿರುಕಟ್ಟಿಸುವ ಧೂಪ, ದೀಪ, ನೈವೇದ್ಯ–ಮಂತ್ರಾದಿಗಳ ಮಧ್ಯೆ ಗರ್ಭಗುಡಿಯ ಮಂದವಾದ ಮಂಕು ಬೆಳಕಿನ ವಾತಾವರಣದಲ್ಲಿ, ವಿಗ್ರಹವನ್ನು ದೇವರೆಂದು ಭಾವಿಸಿ ಸೂಚಿಸುವ ಪ್ರವೃತ್ತಿ ಎಷ್ಟೊಂದು ಸಂಕುಚಿತವಾದುದ್ದು, ಈ ಮುಕ್ತ ನಿಸರ್ಗರಾಧನೆಯ ಮುಂದೆ!"[೧೬]

ನಂತರ ಗಂಗಾನದಿಯ ಸಾಂಸ್ಕೃತಿಕ ಪರಿಸರದ ಬಗ್ಗೆ ತಿಳಿಸುತ್ತಾರೆ. ಮತ್ತು ಈ ನದಿಯೊಂದಿಗೆ ಜನರು ಇಟ್ಟುಕೊಂಡಿರುವ ಸಂಬಂಧಗಳ ನಂಬಿಕೆಗಳ ಬಗ್ಗೆ ಚರ್ಚಿಸುತ್ತಾ, ಇತಿಹಾಸ, ಪುರಾಣವನ್ನು ಕೆಣಕಿ ನೋಡಿದ್ದಾರೆ. 'ಗಂಗಾ' ನದಿಯ ಉದ್ದ, ಅಗಲಗಳು, ಅದಕ್ಕೆ ದೇಶದಲ್ಲಿರುವ ಸ್ಥಾನಮಾನದ ಕುರಿತು ಮತ್ತು ವಿದೇಶಗಳಲ್ಲಿರುವ ಸ್ಥಾನಮಾನ ನಂಬಿಕೆಗಳ ಬಗ್ಗೆ ಪ್ರಸ್ತಾಪಿಸಿರುವುದನ್ನು ಚರ್ಚಿಸಿದ್ದಾರೆ.

ವಿಮರ್ಶಕರು ಲೇಖಕರ ಹೇಳಿಕೆಗಳನ್ನು ಉಪಯೋಗಿಸುತ್ತಾ "ಗಂಗಾ ಜಲದಲ್ಲಿ ಮುಳುಗುವುದರಿಂದ ನಿಮ್ಮ ಪಾಪ........ ಯಾಕೆ ಸದ್ಗತಿ ದೊರೆಯಬಾರದು" (ಪು.ಸಂ. ೯೯) ಗಂಗಾ ಜಲಕ್ಕೂ ನಾಡಿನ ಜನಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಪ್ರಸ್ತಾಪಿಸಿದ್ದಾರೆ.

'ಗಂಗೆ' ಎಂಬಂತಹದ್ದು ಕೇವಲ ಇತಿಹಾಸ ಪುರಾಣಗಳಲ್ಲಿ ಪ್ರಸ್ತಾಪವಾಗಿಲ್ಲ. ಅದು ನಮ್ಮ ಸಾಮಾನ್ಯ ಜನರ ನರನಾಡಿಗಳಲ್ಲಿ ಹರಿದಾಡುತ್ತಿರುವ 'ರಕ್ತ'ದ ಹಾಗೆ. 'ಗಂಗೆ' ಎಂಬುದು ಜೀವನವೇ ಆಗಿಬಿಟ್ಟಿದೆ ಎಂದು ಹೇಳುತ್ತಾ ನಮ್ಮ ಪರಿಸರದಲ್ಲಿ ಹರಿಯುವ ಸಣ್ಣ ಹಳ್ಳಿಕೊಳ್ಳಗಳು ಕೂಡ ನಮ್ಮವರ ಪಾಲಿಗೆ ಗಂಗೆಯೇ. ಮದುವೆಯಂತ ಶುಭಕಾರ್ಯಗಳಲ್ಲಿ ದಿಬ್ಬಣದವರು 'ಗಂಗೆ ಪೂಜೆ'ಗೆ ಹೋಗಿ ಬರುತ್ತಾರೆ. ಹೀಗೆ ಯಾವುದೇ ನೀರು ಗಂಗೆಯಾಗಿ ಪರಿವರ್ತಿಸುವ ಭಾವಕತೆ ನಮ್ಮ ಸಂಸ್ಕೃತಿಯಲ್ಲಿದೆ. ಗಂಗೆ ಅವರ ಪಾಲಿಗೆ ನೀರು ಅಥವಾ ನೀರಿನ ಆದಿದೈವ. ಏಕೆಂದರೆ ನೀರಿನಿಂದಲೇ ಬೆಳೆ, ದವಸ ಧಾನ್ಯ, ಸಮೃದ್ಧಿ, ಗಂಗೆಯ ಬಗ್ಗೆ ಇಷ್ಟೆಲ್ಲಾ ಒಳ್ಳೆಯ ಪ್ರಸ್ತಾಪವಿಟ್ಟುಕೊಂಡಿರುವ ಲೇಖಕರು ಅದು ಹೇಗೆ ಮಲಿನವಾಗುತ್ತದೆ ಎಂಬುದನ್ನು ಕುರಿತು ಪ್ರಸ್ತಾಪಿಸಿದ್ದಾರೆ.

ಕೊನೆಯದಾಗಿ ಧಾರ್ಮಿಕ ಕ್ಷೇತ್ರಗಳ, ಪುಣ್ಯ ಕ್ಷೇತ್ರಗಳ, ಇತಿಹಾಸ, ಪುರಾಣಗಳ, ವಿವಿದ ಮುಖಗಳನ್ನು ಲೇಖಕರು ಹರಿತವಾದ ವಿಶ್ಲೇಷಣೆಗೆ ಒಳಗಾಗಿರುವುದನ್ನು ವಿಮರ್ಶಕರು ಸೂಚಿಸುತ್ತಾ ಪ್ರವಾಸ ಕಥನದ ವಿಮರ್ಶೆಗೆ ನಾಂದಿ ಹಾಡಿದ್ದಾರೆ.

ಉದಾಹರಣೆಯಾಗಿ 'ಪ್ರವಾಸ ಕಥನ'ವನ್ನು ಈ ಕೆಳಗಿನಂತೆ ನೋಡಬಹುದು

"ಖ್ಯಾತ ಕವಿ, ವಿಮರ್ಶಕ ಡಾ. ಜಿ. ಎಸ್. ಶಿವರುದ್ರಪ್ಪನವರು ಕಳೆದ ವರ್ಷ ಮೇ ತಿಂಗಳಲ್ಲಿ ಹಿಮಾಲಯದ ನಾಲ್ಕು ಧಾಮಗಳೆಂದು ಹೆಸರಾದ ಗಂಗೋತ್ರಿ, ಯಮನೋತ್ರಿ, ಬದರೀ, ಕೇದಾರಗಳಿಗೆ ಹತ್ತು ದಿನಗಳ ಕಾಲ ಪ್ರವಾಸವನ್ನು ಕೈಗೊಂಡಿದ್ದರು. ಆ ಪ್ರವಾಸದ ಒಂದು ಪುಟ್ಟ ಕಥನವೇ, 'ಗಂಗೆಯ ಶಿಖರಗಳಲ್ಲಿ' ಈ ಪ್ರವಾಸ ಕಥನಕ್ಕೆ ಈ ಶೀರ್ಷಿಕೆ ಏಕೆ ಕೊಟ್ಟರು? ಗಂಗೋತ್ರಿಯಂತೂ ಗಂಗೆಯ ಜನ್ಮಭೂಮಿ; ಕೇದಾರ, ಬದರಿಗಳು, ಶಿವ ಹಾಗೂ ವಿಷ್ಣುವಿನ ನೆನಪುಗಳಿಂದ ಪೌರಾಣಿಕವಾಗಿ ಗಂಗೆಯೊಂದಿಗೆ ಸಂಬಂಧಿಸಿರುವುದರ ಜೊತೆಗೆ ಅಲ್ಲಿಂದ ಉಗಮಿಸುವ ಮಂದಾಕಿನೀ ಆಲಕನಂದಾ ನದಿಗಳೂ ಗಂಗೆಯನ್ನು ಸೇರುತ್ತವೆ."[೨೬]

"ಪುಸ್ತಕದ ನಾಲ್ಕನೆಯ ಅಧ್ಯಾಯ 'ಗಂಗಾಲಹರಿ'ಯಲ್ಲಿ ಲೇಖಕರು ಗಂಗಾನದಿಯ ಸಾಂಸ್ಕೃತಿಕ ಮಹತ್ವದ ಬಗ್ಗೆ, ಈ ನದಿಯೊಂದಿಗೆ ಭಾರತದ ಜನಸ್ತೋಮ ಸಾವಿರಾರು ವರ್ಷಗಳಿಂದ ಇಟ್ಟುಕೊಂಡು ಬಂದಿರುವ ಗಾಢವಾದ ಭಾವನಾತ್ಮಕ ಸಂಬಂಧದ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದ್ದಾರೆ. ಇತಿಹಾಸ ಪುರಾಣಗಳನ್ನು ಕೆದಕಿ ನೋಡಿದ್ದಾರೆ. ಗಂಗಾನದಿಯನ್ನು ಕುರಿತು ಈ ದೇಶದ ಮನಸ್ಸು ಇರಿಸಿಕೊಂಡ ಅದ್ಭುತವಾದ ಭಾವನೆಗಳು ಮತ್ತು ಪ್ರತಿಕ್ರಿಯೆಗಳನ್ನು ಕೂಲಂಕುಷವಾಗಿ ವಿಶ್ಲೇಷಿಸಿದ್ದಾರೆ."[೧೮]

"ಈ ಪುಸ್ತಕದಲ್ಲಿ ಮತ್ತೆ ಮತ್ತೆ ಗಂಗೆಯ ಪ್ರಸ್ತಾಪ ಕಂಡುಬರುತ್ತದೆ. ಗಂಗೆಯ ನೀರು ಜನರ ಮೂಢನಂಬಿಕೆಗಳಿಂದ, ನಗರೀಕರಣದಿಂದ, ಯಂತ್ರ ನಾಗರೀಕತೆಯಿಂದ ಕಲುಷಿತವಾಗುತ್ತದೆ. ಗಂಗಾನದಿಯ ನೀರು ಎಷ್ಟೇ ಕುಡಿಯಲೂ ಕೂಡ ಯೋಗ್ಯವಾಗಿಲ್ಲವೆಂದು ಅನೇಕ ವರದಿಗಳು ತಿಳಿಸುತ್ತವೆ. ಆದರೆ ಗಂಗಾ ನದಿಗೆ ಇರುವ ಸ್ವಯಂ ಶುದ್ಧೀಕರಣ ಸಾಮರ್ಥ್ಯ ಅಗಾಧವೆಂದು ವೈಜ್ಞಾನಿಕ ಮತ್ತು ಐತಿಹಾಸಿಕ ದಾಖಲೆಗಳು ತಿಳಿಸುತ್ತವೆ. 'ಈ ಒಂದು ಗುಣವನ್ನೇ ಧಾರ್ಮಿಕ ಭಾವನೆಯುಳ್ಳ ಭಕ್ತಾದಿಗಳು, ದೈವೀಕರಿಸಿ, ಗಂಗೆಯನ್ನು ಪಾವಿತ್ರ್ಯದ ಮೂರ್ತಿ ಎಂದು ಸ್ತುತಿಸಿದ್ದಾರೆ. ಗಂಗೆಯನ್ನು ಕ್ಷೀರಶುಭ್ರ, ನಿತ್ಯಶುದ್ಧ ಎಂದು ಆಚಾರ್ಯರುಗಳು ಪ್ರಶಂಸಿಸಿದ್ದಾರೆ' ಎಂದು ಲೇಖಕರು ತಿಳಿಸಿದ್ದಾರೆ. ಗಂಗಾನದಿಯ ಬಗ್ಗೆ ಜವಾಹರ್‌ಲಾಲ್ ನೆಹರೂರವರ ಭಾವನಾತ್ಮಕ ಸಂಬಂಧಗಳ ಬಗ್ಗೆಯೂ ಶಿವರುದ್ರಪ್ಪನವರು ಪ್ರಸ್ತಾಪಿಸಿದ್ದಾರೆ."[೧೯]

ಕಾವ್ಯ ಸಂಕಲನ ಕುರಿತ ಲೇಖನಗಳು

ವಿಮರ್ಶಕರು ಲೇಖಕರ ಹೆಸರನ್ನು ಮತ್ತು ಅವರು ಯಾವಾಗಿನಿಂದ ಕಾವ್ಯವನ್ನು ಬರೆಯುವುದಕ್ಕೆ ಪ್ರಾರಂಭ ಮಾಡಿದರು ಎಂಬುದನ್ನು ತಿಳಿಸುತ್ತಾ ಅವರ ಪ್ರತಿಯೊಂದು ಕಾವ್ಯ ಸಂಕಲನಗಳ ಹೆಸರುಗಳನ್ನು ಸೂಚಿಸುತ್ತಾ ಒಟ್ಟಾರೆ ಕಾವ್ಯಗಳು ಎಷ್ಟು ಎಂದು ನಮೂದಿಸುತ್ತಾ ಪ್ರತಿಯೊಂದು ಕಾವ್ಯವು ಎಷ್ಟರಲ್ಲಿ ಲೇಖಕರು ರಚಿಸಿದ್ದಾರೆ, ಅದರ ಇಸ್ವಿ ಸಮೇತ ತಿಳಿಸುತ್ತಾ ವಿಮರ್ಶೆ ಪ್ರಾರಂಭಿಸಿದ್ದಾರೆ.

ಲೇಖಕರು ಕಾವ್ಯವನ್ನು ಎಷ್ಟು ವರ್ಷಗಳಿಂದ ರಚಿಸಲಿಕ್ಕೆ ಆರಂಭ ಮಾಡಿರುವುದನ್ನು ಪ್ರಸ್ತಾಪಿಸುತ್ತಾ ಲೇಖಕರಿಗೆ ಕಾವ್ಯವೆನ್ನುವುದು ಒಂದು ಮನೋಧರ್ಮ, ಜೀವನ ಶೈಲಿ, ಅದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡ ಕೃಷಿಯಲ್ಲ. ಕೇವಲ ಪ್ರಯತ್ನಗಳಿಂದಲೇ ಸಾಧಿಸಬೇಕಾದ ಗುರಿಯೂ ಅಲ್ಲ ಎನ್ನುವಂತಹ ಲೇಖಕರ ಹೇಳಿಕೆಗಳ ಮೂಲಕ ವಿಮರ್ಶಕರು ಲೇಖಕರ ಮನೋಧರ್ಮದ ಬಗ್ಗೆ ತಿಳಿಸುತ್ತಾರೆ. ಲೇಖಕರು ಕಾವ್ಯವನ್ನು ಯಾರಿಗಾಗಿ ರಚಿಸುವುದಿಲ್ಲ ಮತ್ತು ಯಾರಿಗಾಗಿ ಕಾವ್ಯವನ್ನು ರಚಿಸುತ್ತಾರೆ ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾರೆ.

ಕಾವ್ಯದ ಭಾಷೆಯ ಬಗ್ಗೆ ವಿಮರ್ಶಕರು ಹೀಗೆ ಹೇಳುತ್ತಾರೆ. ನೇರ, ಸರಳ, ಕಾವ್ಯವೆಂದರೆ ಬದುಕನ್ನು ಗ್ರಹಿಸುವ, ಬದುಕಿಗೆ ಪ್ರತಿಕ್ರಿಯಿಸುವ ಒಂದು ರೀತಿ ಮಾತ್ರ. ಹೀಗಾಗಿ ಲೇಖಕರ ಕಾವ್ಯಗಳಲ್ಲಿ ಬೆಚ್ಚಿ ಬೀಳಿಸುವಂತಹ ಅನುಭವ ಸಾಮಗ್ರಿಗಳು ಇಲ್ಲ; ಲೇಖಕರು ಭಾಷೆಯೊಂದಿಗೆ ಆಡವಾಡುತ್ತ ಓದುಗನನ್ನು ಮಂತ್ರ ಮುಗ್ಧಗೊಳಿಸುವಂತ ಕುಶಲತೆಯೂ ಇಲ್ಲ. ಇವೆರಡೂ ಇಲ್ಲದ ಪ್ರಾಮಾಣಿಕತೆಯೊಂದನ್ನೇ ನೆಚ್ಚಿಕೊಂಡು ಸುತ್ತಮುತ್ತಲ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಕಾವ್ಯವನ್ನು ರಚಿಸಿರುವುದನ್ನು ವಿಮರ್ಶಕರು ಹೇಳುತ್ತಾರೆ.

ಕಾವ್ಯಗಳಲ್ಲಿ ಅನಗತ್ಯ ಕೀಳಿರಿಮೆಗಳನ್ನು ಇಟ್ಟುಕೊಳ್ಳದೆ ಕಾವ್ಯವೆನ್ನುವುದು ತಮ್ಮ ಗ್ರಹಿಕೆ ಮತ್ತು ಅಭಿವ್ಯಕ್ತಿಗಳ ಏಕೈಕ ಮಾರ್ಗವೆಂಬಂತೆ ಲೇಖಕರು ಕಾವ್ಯ ರಚಿಸಿರುವುದನ್ನು ಹೇಳುತ್ತಾರೆ. ಲೇಖಕರ ಕವನಗಳಲ್ಲಿ ಉದ್ದೇಶ, ಸ್ವರೂಪಗಳ ಪ್ರಸ್ತಾಪವು ಇದೆ. ಉದಾಹರಣೆಯಾಗಿ ಕವನವನ್ನು ನೋಡಬಹುದು.

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?

(ಕವನ 'ತೃಪ್ತಿ' ಪು.ಸಂ. ೨೨೬)

ಲೇಖಕರು ತಮ್ಮ ಕವನಗಳ ಲಕ್ಷಣಗಳನ್ನು ನೇರವಾಗಿ ಕೆಲವು ಕವನಗಳ ಹೆಸರುಗಳನ್ನು ಸೂಚಿಸುತ್ತಾ ಹೇಳಿಕೊಂಡಿದ್ದಾರೆ. ಕವನಗಳಲ್ಲಿನ ಮತ್ತು ಸಾತ್ವಿಕತೆಗಳ ಬಗ್ಗೆ ಚರ್ಚಿಸಿದ್ದಾರೆ. ಲೇಖಕರ ಕಾವ್ಯ ಸಂಯಮ, ಸ್ತಿಮತತೆ ಬದುಕಿನ ಚೆಲುವಿಗೆ ಇಲ್ಲವೆ ವಿಷಮತೆಗೆ ಕುರುಡಾಗಲಿಲ್ಲ ಎಂದು ವಿಮರ್ಶಕರು ಹೇಳುತ್ತಾರೆ. ಲೇಖಕರ ಮನಸ್ಸಿನ ಬಗ್ಗೆ ವಿಮರ್ಶಕರು ಪ್ರಸ್ತಾಪಿಸಿದ್ದಾರೆ. ಲೇಖಕರ ಕಾವ್ಯವನ್ನು ಮಾನವನು ಅನುಭವಿಸುವ ಬ್ರಹ್ಮಚಾರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಕ್ರಮಗಳನ್ನು ಕ್ರಮವಾಗಿ ದಾಟಿ ಬಂದು, ಜೀವನದ ಕರ್ಮಗಳನ್ನು ನಿಧಾನವಾಗಿ ದಾಟಿ ಬಂದು ಮೋಕ್ಷವನ್ನು ಗಳಿಸುವ ರೀತಿ ಎಂದು ಹೇಳುತ್ತಾರೆ.

ಮನುಷ್ಯನ ಬದುಕಿನ, ಜೀವಂತಿಕೆಯ, ಸಾಧನೆಗೆ, ಶಿಸ್ತಿಗೆ, ಸಜ್ಜನಕ್ಕೆ ಕಾವ್ಯವನ್ನು ಹೋಲಿಸಿದ್ದಾರೆ. ಅಂದರೆ ಲೇಖಕರ ಕಾವ್ಯ 'ಎಳ ನೀರು' ಇದ್ದ ಹಾಗೆ. ಅದು ಆರೋಗ್ಯದಾಯಕ, ಜೀವನ ಪೋಷಕವಿದ್ದ ಹಾಗೆ ಎಂದು ವಿಮರ್ಶಕರು ಹೇಳುತ್ತಾರೆ.

ಲೇಖಕರ ಮೊದಲ ಕವನಗಳಲ್ಲಿ ಕವಿಯ ಪ್ರಕೃತಿ ಪ್ರೇಮವನ್ನು ಕುರಿತು ಚರ್ಚಿಸಿದ್ದಾರೆ.

'ಪ್ರಕೃತಿ ಮಾತೆಯ ಸ್ತನ್ಯಪಾನದಿ ಪುಷ್ಟಿಗೊಳ್ಳುವುದು ಚೇತನ' ಎಂದು ನಂಬಿರುವ ಕವಿ ಪ್ರಕೃತಿ ಆರಾಧನೆಗೆ ಓದುಗರನ್ನು ಆಹ್ವಾನಿಸುತ್ತಿದ್ದಾನೆ. ಮಾನವನ ಅಂಗಗಳಾದ ಕಣ್ಣು, ಹೃದಯವನ್ನು ಕುರಿತು ಪ್ರಕೃತಿಯನ್ನು ಸವಿಯಲು, ಮನುಷ್ಯನನ್ನು ಸಜ್ಜುಗೊಳಿಸಿಕೊಳ್ಳಲು ಕವಿ ಹೇಳಿದ್ದಾರೆ. ಮನುಷ್ಯನಿಗೂ ಮತ್ತು ಪ್ರಕೃತಿಗೂ ಇರುವ ನಂಟಿನ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಲೇಖಕರ ಕಾವ್ಯ ಸಂಕಲನಗಳನ್ನು ಪ್ರಸ್ತಾಪಿಸುತ್ತಾ ಕವಿಯು ಪ್ರಕೃತಿ ಕೇವಲ ವಿವರವಾಗದೆ ಕವಿಯ ಮನಸ್ಥಿತಿಯನ್ನು ಭಾವನೆಗಳನ್ನು ತಾಯಿ–ಮಕ್ಕಳ ಸಂಬಂಧಗಳನ್ನು, ಪ್ರಕೃತಿ–ಮನುಷ್ಯರ ಸಂಬಂಧಗಳಿಗೆ ಸಮೀಕರಿಸುವ ಪ್ರಯತ್ನ ಮಾಡಿದ್ದಾರೆ. ಮತ್ತು ಲೇಖಕರ ಕಾವ್ಯ ಯಾವಾಗಲೂ ಜಡವಾಗಿರದೆ ಚಲನಶೀಲವಾಗಿದೆ ಎಂದು ಹೇಳುವುದರ ಜೊತೆಗೆ ಬದುಕಿನ ಬೇರೆ ಬೇರೆ ಅವಸ್ಥೆಗಳ ಬಗ್ಗೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

ಲೇಖಕರು ತಮ್ಮ ಕವನಗಳಲ್ಲಿ ಬದುಕಿನ ಸ್ವರೂಪವನ್ನು ದಾಖಲಿಸಿದ ರೀತಿಯನ್ನು ವಿಮರ್ಶಕರು ಹೇಳುತ್ತಾರೆ. ಬದುಕು ಹಿಡಿದಿಟ್ಟುಕೊಳ್ಳುವಂತಹದಲ್ಲ, ಬದುಕಿಯೇ ಅದನ್ನು ಅನುಭವಿಸಬೇಕು. ಅನುಭವಿಸಿಯೇ ಅದನ್ನು ಅರಿಯಬೇಕು. ಬದುಕು ಜಡವಾದುದ್ದಲ್ಲ, ಅದು ಚಲನಶೀಲವಾದುದ್ದು, ಚಲನೆಯೇ ಅದರ ಸ್ವರೂಪ ಎಂದು ಬದುಕನ್ನು ಕುರಿತು ಹೇಳುತ್ತಾ ಮಾನವನ ಬಾಲ್ಯ ಮತ್ತು ಮುಪ್ಪುಗಳ ಬಗ್ಗೆ ಪ್ರಸ್ತಾಪಿಸುತ್ತಾರೆ.

ಕವನಗಳಲ್ಲಿ ಕಂಡುಬರುವ ಮನುಷ್ಯನನ್ನು ಕಾಡುವ ಒಂಟಿತನ ಸಾಮಾಜಿಕ ಸಮಸ್ಯೆಗಳು, ಮೃತ್ಯು ಪ್ರಜ್ಞೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿರುವುದನ್ನು ಕಾಣುತ್ತೇವೆ. ಮತ್ತು ಸತ್ಯವನ್ನು ಒಪ್ಪಿಕೊಳ್ಳುವ ಎದೆಗಾರಿಕೆಯಿದೆ; ಬದುಕು ಹೇಗಿದ್ದರೂ ಅದನ್ನು ಸ್ವೀಕರಿಸುತ್ತದೆ ಎನ್ನುವಂತಹ ನಿಷ್ಠುರತೆ ಇದೆ ಎಂಬುದನ್ನು ಕಾವ್ಯಗಳ ಮೂಲಕ ತಿಳಿಸಿದ್ದಾರೆ.

ಬಾಡಿಗೆಯ ಮನೆಯಿಂದ ಬಾಡಿಗೆಯ ಮನೆಗೆ
ನಡೆದಿರುವೆ
ಇರುವ ಮನೆಯನು ಮೊದಲು ಸರಿ
ಮಾಡಿರೋ
ಕಸಗುಡಿಸು; ದೀಪ ಹಚ್ಚು

(ಕವನ 'ದೀಪದಹೆಜ್ಜೆ' ಪು.ಸಂ. ೨೩೦)

ಲೇಖಕರು ಯಾವ ಕವನಸಂಕಲನದ ಮೂಲಕ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಲವಾಗಿ ಬೇರು ಬಿಟ್ಟರು ಎಂಬುದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಕೆಲವೊಂದು ಕವನ ಸಂಕಲನಗಳ ಹೆಸರುಗಳನ್ನು ಸೂಚಿಸುತ್ತಾ ಸ್ಥಾನವನ್ನು ಭದ್ರಪಡಿಸಿಕೊಂಡಿರುವುದರ ಬಗ್ಗೆ ಹೇಳುತ್ತಾರೆ. ನಂತರ

ಲೇಖಕರು ಯಾವ ಸಾಹಿತ್ಯದ ಘಟ್ಟದಿಂದ ಪ್ರೇರಣೆ ಪಡೆದರು ಮತ್ತು ಯಾವ ಯಾವ ಘಟ್ಟಗಳ ಸತ್ವವನ್ನು ಹೀರಿಕೊಂಡು ತಮ್ಮ ಕಾವ್ಯ ಬೆಳೆಯಿತು ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಹಲವಾರು ಕವನ ಸಂಕಲನಗಳನ್ನು ಸೂಚಿಸುತ್ತಾರೆ.

ಕವನಗಳ ಮೂಲಕ ಸಾಮಾಜಿಕ, ರಾಜಕೀಯ, ವಿಕೃತಿಗಳತ್ತ ಗಮನ ಹರಿಸಿದ್ದಾರೆ. ಬದುಕಿನ ಅವನತಿಯನ್ನು, ವಿಕೃತಗೊಳ್ಳುತ್ತಿರುವ ಮನುಷ್ಯ ಸಂಬಂಧಗಳನ್ನು ಕುರಿತು ಬರೆದಿದ್ದಾರೆ.

ಕಂಡೆ
ಎಂತೆಂಥವರು ಏನೇನೋ ಆದದ್ದು ಕಂಡೆ
ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ
ಕರಗಿ ಕೊಚ್ಚೆಯಾಗಿ ಹರಿದದ್ದು ಕಂಡೆ
ಇಂದ್ರ ನೈರಾವತಕ್ಕೆ ತೊಣಚಿ ಹತ್ತಿ
ಬೀದಿನಾಯಿಯಾಗಿ ಬದಿಯಲಿ ಹೊರಳಾಡಿದ್ದ ಕಂಡೆ
ನಿಗಿ ನಿಗಿ ಉರಿದ ಉಜ್ವಲವಾದ ಮಾತೆಲ್ಲ
ಬರೀ ಬೂದಿಯಾಗಿ ತೆಪ್ಪಗಾದದ್ದು ಕಂಡೆ.

(ಕವನ 'ದುಃಸ್ವಪ್ನ' ಪು.ಸಂ. ೨೩೧)

ಲೇಖಕರು ದಲಿತ ಮತ್ತು ಬಂಡಾಯ ಚಳುವಳಿಗಳಿಂದ ಪ್ರೇರಣೆ ಪಡೆದಿರಬಹುದು ಎಂದು ವಿಮರ್ಶಕರು ಸಂಶಯ ಪಡುತ್ತಾರೆ. ಕವನಗಳ ಮೂಲಕ ಕವಿ ವರ್ಗ, ವರ್ಣ, ಸಮಾಜದ ಮೌಲ್ಯ ವ್ಯವಸ್ಥೆಯ ಶೋಷಣೆಯ ಬಗ್ಗೆ ಕಂಡುಕೊಳ್ಳುತ್ತಿರುವುದನ್ನು ಮತ್ತು ಆರ್ಥಿಕ, ಸಾಮಾಜಿಕ ಸಂಬಂಧಗಳನ್ನು ಶೋಧಿಸಲು ಪ್ರಯತ್ನಿಸುತ್ತಿರುವುದನ್ನು ವಿಮರ್ಶಕರು ಹೇಳುತ್ತಾರೆ.

ಮನೆಕಟ್ಟುವುದೇ ಕೆಲಸ ಈ ಜನಕ್ಕೆ
ಮಳೆಯಲ್ಲಿ, ಬಿಸಿಲಲ್ಲಿ, ಗಾಳಿಯಲ್ಲಿ
ಮಣ್ಣು ಹೋರುತ್ತಾ, ದಿನದಿಂದ ದಿನಕ್ಕೆ
ತಾವೆ ಕಟ್ಟುತ್ತಿರುವ ಮನೆ ಮಹಡಿ ಮಹಡಿ
ಗಳಾಗಿ ಏರುವುದನ್ನು ಕಾಣುತ್ತಾ
ಅದರ ಬದಿ ಜೋಪಡಿಯಲ್ಲಿ ಕೊರಗುತ್ತಾ
ಸವೆದು ಹೋಗುತ್ತಿರುವ ಈ ಮಂದಿಗೆ
ಅನ್ನಿಸುವುದಿಲ್ಲವೆ, ತಮಗೂ ಒಂದು
ಮನೆಯಿಲ್ಲವೆಂದು?

(ಕವನ 'ಮನೆಕಟ್ಟುವ ಮಂದಿ' ಪು.ಸಂ. ೨೩೧)

ಮಾನವನು ಅನುಭವಿಸುವ ಪಾಪ ಪ್ರಜ್ಞೆಗಳಿಗೆ ಕಾರಣ ಸಾಮಾಜಿಕ ಸತ್ಯಗಳ ಹೊಸದರ್ಶನಗಳು ಎಂದು ಹೇಳುತ್ತಾ ಕವಿಗಳ ಬಗ್ಗೆ ಇನ್ನೂ ಸಾಕಷ್ಟು ಅಧ್ಯಯನಗಳು ನಡೆಯಬೇಕಾಗಿದೆ ಎಂದು ಹೇಳುತ್ತಾ ವಿಮರ್ಶೆಗೆ ನಾಂದಿ ಹಾಡಿದ್ದಾರೆ.

ಉದಾಹರಣೆಯಾಗಿ ಕಾವ್ಯ ಸಂಕಲನವನ್ನು ನೋಡಬಹುದು

"ಜಿ. ಎಸ್. ಶಿವರುದ್ರಪ್ಪನವರು ೧೯೪೭ರಿಂದ ಇಲ್ಲಿಯವರೆಗೆ ಬರೆದ ಮತ್ತು ಅನುವಾದಿಸಿದ ಐದುನೂರಾ ಆರು ಕವನಗಳ ಬೃಹತ್ ಸಂಪುಟ 'ಸಮಗ್ರಕಾವ್ಯ' ಈಗ ಪ್ರಕಟವಾಗಿದೆ. 'ಸಾಮಗಾನ' (೧೯೪೭–೫೧), 'ಚೆಲುವು ಒಲವು' (೧೯೫೧–೫೩), 'ದೇವಶಿಲ್ಪ' (೧೯೫೩–೫೬), 'ದೀಪದಹೆಜ್ಜೆ' (೧೯೫೬–೫೯), 'ಕಾರ್ತೀಕ' (೧೯೫೯–೬೧), 'ಅನಾವರಣ (೧೯೬೧–೬೩), 'ತೆರೆದದಾರಿ' (೧೯೬೩–೬೬), 'ಗೋಡೆ', (೧೯೬೬–೭೨), 'ಕಾಡಿನ ಕತ್ತಲಲ್ಲಿ' (೧೯೭೨–೮೧), 'ಪ್ರೀತಿ ಇಲ್ಲದ ಮೇಲೆ' (೧೯೮೨–೮೭) ಮತ್ತು 'ತೀರ್ಥವಾಣಿ" (ಬಂಗಾಳಿ ಭಕ್ತಿಗೀತೆಗಳ ಅನುವಾದ : ೧೯೫೩) ಎಂಬ ಹನ್ನೊಂದು ಸಂಕಲನಗಳಲ್ಲಿ ಹಂಚಿಹೋಗಿದ್ದ ಕವನಗಳು ಈಗ ಒತ್ತಟ್ಟಿಗೆ ಸಿಗುವ ಹಾಗಿದೆ."[೨೦]

"ಕಾವ್ಯ ಕೃಪೆ, 'ಕಾವ್ಯಮಾರ್ಗ', 'ಹಳೆಯ ಹಾಡು', 'ರಾಗಾನ್ವೇಷಣೆ', 'ಇರುಳಮೌನಗಳಲ್ಲಿ', 'ಮರಕುಟುಕ ಹಕ್ಕಿಗೆ', 'ಒಳದನಿ', 'ಕವಿಯಮನಸು', 'ಪ್ರಕೃತಿ–ಕವಿ', 'ಕಾವ್ಯಕ್ಕೆ ನಮನ', 'ಕವಿ ಕಾವ್ಯಕ್ಕೆ', 'ಕವಿತೆಗೆ', 'ಕವಿ–ಮೇದಾಂತಿ', 'ಕವಿತೆ ಬರೆಯುವುದು ಹೇಗೆ?', 'ಈ ಕವಿತೆ', 'ಸಂಪಾದಕರಿಗೆ', 'ಕವಿ–ಕಿವಿ', 'ನಾನು ಬರೆಯುತ್ತೇನೆ', 'ನಾನೇಕೆ ಬರೆಯುತ್ತೇನೆ' ಮುಂತಾದ ಕವನಗಳಲ್ಲಿ ಶಿವರುದ್ರಪ್ಪನವರು ಕಾವ್ಯದ ಲಕ್ಷಣಗಳನ್ನು ಹೇಳಿದ್ದಾರೆ."[೨೧]

"ದೀಪದ ಹೆಜ್ಜೆ ಸಂಕಲನದ ಮೂಲಕ ಆಧುನಿಕ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಬಲವಾಗಿ ಬೇರುಬಿಟ್ಟ ಶಿವರುದ್ದಪ್ಪನವರು 'ಕಾರ್ತೀಕ', 'ಅನಾವರಣ', 'ತೆರೆದದಾರಿ' ಸಂಕಲನಗಳಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡರು. ಆರಂಭದಲ್ಲಿ ನವೋದಯ ಸಾಹಿತ್ಯದಿಂದ ಸ್ಫೂರ್ತಿ ಪಡೆದಿದ್ದ ಶಿವರುದ್ರಪ್ಪನವರ ಕಾವ್ಯ ಮುಂದೆ ನವ್ಯದ ಸತ್ವವನ್ನು ಹೀರಿಕೊಂಡು ಬೆಳೆಯಿತು."[೨೨]

"ಕನ್ನಡದ ಒಬ್ಬ ಹಿರಿಯ ಕವಿಯ ಐದುನೂರ ಆರು ಕವನಗಳ ಸಮಗ್ರ ಸಂಪುಟದ ಬಗ್ಗೆ ಈ ಪುಟ್ಟ ಲೇಖನದ ಚೌಕಟ್ಟಿನಲ್ಲಿ ಸಮಗ್ರವಾಗಿ ಬರೆಯಲು ಸಾಧ್ಯವಾಗುತ್ತಿಲ್ಲ. ಅವರ ಕಾವ್ಯದ ಬಗ್ಗೆ ಇದುವರೆಗೆ ಬಂದಿರುವ ಲೇಖನಗಳನ್ನು ಮುಂದಿಟ್ಟುಕೊಂಡು ಶಿವರುದ್ರಪ್ಪನವರ ಕಾವ್ಯವನ್ನು ವಿವರವಾಗಿ ಅಭ್ಯಾಸ ಮಾಡಬೇಕಾದ ಅಗತ್ಯವಿದೆ."[೨೩]

ಜೀವನ ಚರಿತ್ರೆ ಕುರಿತ ಲೇಖನಗಳು

ವಿಮರ್ಶಕರು ಲೇಖಕರು ಬರೆದಿರುವ ಇನ್ನೊಬ್ಬ ಲೇಖಕರ 'Short Form' ಹೆಸರಿನಿಂದ

ಲೇಖಕರ ಹೆಸರನ್ನು ನಮೂದಿಸುತ್ತಾ ಅವರ ಜೀವನ ದರ್ಶನಗಳನ್ನು ತಿಳಿಸಿಕೊಡುವ ಪುಸ್ತಕದ ಪ್ರಕಟಣೆಯ ಬಗ್ಗೆ ಮತ್ತು ಕೃತಿಯ ಶೀರ್ಷಿಕೆಯನ್ನು ಸೂಚಿಸುತ್ತಾ ಇದನ್ನು ಬರೆದ, ಅನುವಾದ ಮಾಡಿದವರ ಹೆಸರನ್ನು ಮತ್ತು ಕೃತಿಯ ಉದ್ದೇಶ, ಸ್ವರೂಪದ ಬಗ್ಗೆ ಆರಂಭದಲ್ಲಿ ತಿಳಿಸಿದ್ದಾರೆ.

ಲೇಖಕರು ಬರಹಗಾರರನ್ನು ಕನ್ನಡಕ್ಕೆ ತರುವಲ್ಲಿ ಪ್ರಯತ್ನಿಸುವುದರ ಬಗ್ಗೆ ತಿಳಿಸುತ್ತಾ ಬರಹಗಾರರು ಇತರ ಖ್ಯಾತ ಲೇಖಕರ ಮೇಲೆ ಪ್ರಭಾವ ಬೀರಿರುವುದನ್ನು, ಖ್ಯಾತ ಲೇಖಕರ ಹೆಸರುಗಳನ್ನು ಸೂಚಿಸಿರುವುದನ್ನು ವಿಮರ್ಶಕರು ಹೇಳುತ್ತಾರೆ. ಮತ್ತು ಬರಹಗಾರರನ್ನು ಕುರಿತು ಅವರು ಈ ನಾಡಿನ ಸಮಕಾಲೀನ ಹಾಗೂ ಹೋಗುಗಳಿಗೆ ಸ್ಪಂದಿಸಿಲ್ಲವೆಂದೂ, ಸಾಮಾಜಿಕವಾಗಿ, ರಾಜಕೀಯವಾಗಿ ಅವರ ತತ್ವಗಳ ಕಾಣಿಕೆಗಳು ಏನು ಇಲ್ಲ ಎಂದು ವಿಮರ್ಶಕರು ಹೇಳುತ್ತಾರೆ.

ನಂತರ ವಿಮರ್ಶಕರು ಅವರ ಜನನ, ಬಾಲ್ಯ ಜೀವನದ ಬಗ್ಗೆ ಚರ್ಚಿಸಿದ್ದಾರೆ. ನಂತರ ಬರಹಗಾರರ ಚಿಂತನೆಯ ಸ್ವರೂಪ ಮತ್ತು ವೈಶಿಷ್ಟ್ಯದ ಬಗ್ಗೆ ಚರ್ಚಿಸುತ್ತಾ ಹೋಗುತ್ತಾರೆ. ಸಮಾಜದಲ್ಲಿನ ವರ್ಗ, ವರ್ಣ, ಸಂಘರ್ಷದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಪ್ರಬಲರು, ಸಶಕ್ತರು, ಕ್ರೂರಿಗಳು ಆದ ಇನ್ನೊಬ್ಬರ ಮೇಲೆ ಅಧಿಕಾರ ಚಲಾಯಿಸಬಲ್ಲಂಥ ಜನರು ತುತ್ತತುದಿಯಲ್ಲಿದ್ದಾರೆ. ಕೆಳಸ್ಥರದಲ್ಲಿ ದುರ್ಬಲರೂ, ಸಭ್ಯರು, ಆದಂಥ ಜನ ಹೋರಾಡುತ್ತಾ ಹೆಣಗುತ್ತಿದ್ದಾರೆ. ಇದಕ್ಕೆ ಲೇಖಕರು ಒಂದು ಉದಾಹರಣೆಯನ್ನು ನೀಡಿದ್ದಾರೆ. "ಒಂದು ಮರದ ಬಗ್ಗೆ ವಿಚಾರ ಮಾಡಿ ಅದರ ಬಲ ಹಾಗೂ ವೈಭವ ಕೆಳಗೆ ಆಳದಲ್ಲಿ ಹುದುಗಿರುವ ಬೇರುಗಳಿಂದ ಬಂದಿವೆ; ಮರದ ಮೇಲ್ಭಾಗ ಕೋಮಲ ಎಲೆಗಳಿಂದ, ಮೃದು ಚಿಗುರುಗಳಿಂದ, ಅತ್ಯಂತ ದುರ್ಬಲವಾದ ರೆಂಬೆಕೊಂಬೆಗಳಿಂದ ಅಚ್ಛಾದಿತವಾಗಿದೆ" (ಪು.ಸಂ. ೧೫೭). ಸಮಾಜದಲ್ಲಿನ ವರ್ಗ, ವರ್ಣ ವ್ಯವಸ್ಥೆಯನ್ನು ಲೇಖಕರು ನಿಸರ್ಗದ ಒಂದು ಮರದಿಂದ ಉದಾಹರಣೆಯಾಗಿ ನೀಡಿದ್ದನ್ನು ವಿಮರ್ಶಕರು ಚರ್ಚಿಸುತ್ತಾ ಹೋಗಿದ್ದಾರೆ.

ಬರಹಗಾರರು ಕೃತಿಯಲ್ಲಿ ಪ್ರಜ್ಞೆಯ ಸ್ವರೂಪದ ಬಗ್ಗೆ ಮತ್ತು ಸತ್ಯದ ಅರಿವಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನವನು ಸತ್ಯದ ಅರಿವನ್ನು ಕಂಡುಕೊಳ್ಳುವುದು ಅನುಭವದ ಮೂಲಕ, ಇನ್ನೊಬ್ಬರ ಮೂಲಕ ಅದನ್ನು ಕೇಳಿ ತಿಳಿದುಕೊಳ್ಳುವುದಲ್ಲ ಎಂದು ಹೇಳುತ್ತಾ ಸತ್ಯದ ಅರಿವನ್ನು ತಿಳಿಯಬೇಕಾದರೆ ಮನುಷ್ಯನ ಮನಸ್ಥಿತಿಗಳು, ವರ್ತನೆಗಳು ಮುಖ್ಯವಾಗುತ್ತವೆ ಎಂದು ಹೇಳುತ್ತಾರೆ.

ನಂತರ ಕೃತಿಯಲ್ಲಿ ಪ್ರೇಮ–ಕಾಮದ ಬಗ್ಗೆ ಪ್ರಸ್ತಾಪಿಸಿರುವುದನ್ನು ವಿಮರ್ಶಕರು ಚರ್ಚಿಸಿದ್ದಾರೆ. ಬರಹಗಾರರು ಪ್ರೇಮವನ್ನು ಕುರಿತು ಈ ರೀತಿ ಹೇಳುತ್ತಾರೆ. ವಿಚಾರವಿದ್ದಲ್ಲಿ ಪ್ರೇಮ ಇರುವುದಿಲ್ಲ. ಏಕೆಂದರೆ ವಿಚಾರ ನೆನಪಿನ ಮೇಲೆ ನಿಂತರೆ; ಪ್ರೇಮ ನೆನಪಲ್ಲ..... ವಿಚಾರ ಪ್ರೇಮಕ್ಕೆ ಒಯ್ಯುವುದಿಲ್ಲ ಎಂದು ಹೇಳುತ್ತಾರೆ. ಕಾಮವನ್ನು ಕುರಿತು ಚರ್ಚಿಸುವಾಗ 'ಕಾಮ' ಎನ್ನುವಂಥಹದ್ದು ಲೈಂಗಿಕ ಕ್ರಿಯೆಗಿಂತ ಭಿನ್ನವಾದುದ್ದು ಎಂದು ಚರ್ಚಿಸುತ್ತಾರೆ.

ನಂತರ ಸಮಾಜವನ್ನು ಕುರಿತು ಸಮಾಜ ಏಕೆ ಕುಸಿಯುತ್ತಿದೆ? ಮುರುಟುತ್ತಿದೆ? ಎಂಬುದರ ಬಗ್ಗೆ ಚರ್ಚಿಸಿದ್ದಾರೆ. ಈ ಕುರಿತು ಬರಹಗಾರರು ಉತ್ತರಿಸಿದ್ದಾರೆ. ಮುಖ್ಯವಾಗಿ ಪ್ರತಿಯೊಬ್ಬ ವ್ಯಕ್ತಿಯು 'ಸೃಜನಶೀಲರಾಗಬೇಕು' ಎಂದು ಹೇಳುತ್ತಾರೆ. ಮಾನವರೆಲ್ಲ ಅನುಕರಣಶೀಲರಾಗಿ ಬಿಟ್ಟಿದ್ದೇವೆ. ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ನಕಲು ಮಾಡುತ್ತಿದ್ದೇವೆ. ಇದನ್ನು ಬಿಟ್ಟು ಲೌಕಿಕ–ಅಲೌಕಿಕ, ಐಹಿಕ–ಧಾರ್ಮಿಕ, ನಾನು–ನೀನು ಎಂಬ ಭೇದ ಭಾವವಿಲ್ಲದೆ ಸಮಗ್ರ ಬದುಕಿಗಾಗಿ ಹಂಬಲಿಸಬೇಕಾಗಿದೆ ಎಂದು ಬರಹಗಾರರು ಹೇಳುತ್ತಾರೆ. ಇದರ ಜೊತೆಗೆ ಭಯ, ನೀತಿ, ನಂಬಿಕೆ, ಧರ್ಮ, ಕಾಲ, ಕಲೆ, ಸೌಂದರ್ಯ ಹೀಗೆ ಹತ್ತಾರು ವಿಚಾರ ಬಗ್ಗೆ ತಮ್ಮ ಅನಿಸಿಕೆಗಳನ್ನು ಹೇಳಿಕೊಂಡಿದ್ದಾರೆ.

ಬರಹಗಾರರು ಕೊನೆಯದಾಗಿ ಶಿಕ್ಷಣದ ಬಗ್ಗೆ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. 'ಸಮಾಜದ ಅಡಿಗಲ್ಲು' ಶಿಕ್ಷಣ. ಶಿಕ್ಷಣದಿಂದ ಮಾನವನು ಸರ್ವತೋಮುಖ ಅಭಿವೃದ್ಧಿ ಸಾಧಿಸಬಹುದು. ಸಮಾಜದಿಂದ ಭಿನ್ನವಾಗಿ ಗುರಿತಿಸಿಕೊಳ್ಳಬಹುದು. ಮತ್ತು ಹೊಸ ಸಮಾಜವನ್ನು ಕಟ್ಟಬಹುದು ಎಂದು ಹೇಳುತ್ತಾ ಚರ್ಚೆಯನ್ನು ಮುಗಿಸುತ್ತಾರೆ.

ಉದಾಹರಣೆಯಾಗಿ ಜೀವನ ಚರಿತ್ರೆಯನ್ನು ನೋಡಬಹುದು

"ಜೆ.ಕೆ. ಎಂದೇ ಪ್ರಸಿದ್ಧರಾಗಿದ್ದ ಜಿಡ್ಡು ಕೃಷ್ಣಮೂರ್ತಿಯವರ ಜೀವನ ಮತ್ತು ದರ್ಶನಗಳನ್ನು ಪರಿಚಯಾತ್ಮಕವಾಗಿ ತಿಳಿಸಿಕೊಡುವ ಸರಳ ಸುಂದರ ಪುಸ್ತಕವೊಂದು ಇತ್ತೀಚೆಗೆ ಪ್ರಕಟವಾಗಿದೆ. 'ಕ್ಷಣಕ್ಷಣಕ್ಕೂ ಹೊಸ ಬದುಕಿಗೆ' ಎಂಬ ಈ ಪುಸ್ತಕದ ಸಂಪಾದಕರೂ, ಅನುವಾದಕರೂ ಆದ ಶ್ರೀ. ಟಿ.ಜೆ. ಭಟ್, ಹಾಸಣಗಿ ಪುಸ್ತಕದ ಉದ್ದೇಶ ಮತ್ತು ಸ್ವರೂಪಗಳನ್ನು ಮೊದಲೇ ಸ್ಪಷ್ಟಪಡಿಸಿದ್ದಾರೆ."[೨೪]

"ಈ ಹಿಂದೆ ಜೆ.ಕೆ.ಯನ್ನು ಕನ್ನಡಕ್ಕೆ ತರುವ ಬಿಡಿ ಬಿಡಿ ಪ್ರಯತ್ನಗಳು ನಡೆದಿದ್ದರೂ ಇಷ್ಟು ವ್ಯಾಪಕವಾಗಿ, ಸಮಗ್ರವಾಗಿ ಅವರು ಕನ್ನಡ ಭಾಷೆಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲ ಬಾರಿ ಎಂದು ಹೇಳಬಹುದು. ಹಾಗೆ ನೋಡಿದರೆ ಜೆ.ಕೆ. ಕನ್ನಡದಲ್ಲಿ ಹಲವಾರು ಬರಹಗಾರರು, ಕಲಾವಿದರ ಹಾಗೂ ಬುದ್ಧಿಜೀವಿಗಳ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ ಮುಂತಾದವರು ಈ ಪ್ರಭಾವದ ಬಗ್ಗೆ ಬಹಿರಂಗವಾಗಿಯೇ ಮಾತನಾಡಿಕೊಂಡಿದ್ದನ್ನು ಕೇಳಿದ್ದೇನೆ."[೨೫]

"ಆಂಧ್ರಪ್ರದೇಶ ಮದನಪಲ್ಲಿ ಎಂಬ ಊರಿನಲ್ಲಿ, ತೆಲುಗು ಬ್ರಾಹ್ಮಣ ಕುಟುಂಬವೊಂದರಲ್ಲಿ, ೧೮೯೫ರಲ್ಲಿ ಜನಿಸಿದ ಜಿಡ್ಡು ಕೃಷ್ಣಮೂರ್ತಿ ಮುಖ್ಯವಾಗಿ ಥಿಯಾಸೋಫಿಕಲ್ ಸೊಸೈಟಿಯ ಆನಿಬೆಸಂಟ್‌ರನ್ನು ಆಕರ್ಷಿಸಿ ವಿಶಿಷ್ಟ ರೀತಿಯಲ್ಲಿ ಬೆಳೆದು, ಶಿಕ್ಷಣ ಪಡೆದು ತುಂಬಾ ಚಿಕ್ಕ ವಯಸ್ಸಿನಲ್ಲೇ ವಿಶ್ವವಿಖ್ಯಾತಿ ಪಡೆದರು."[೨೬]

"ಪ್ರೇಮ, ಕಾಮಗಳ ಬಗ್ಗೆ ಜೆ.ಕೆ. ಬರೆಯುತ್ತಾರೆ: 'ವಿಚಾರವಿದ್ದಲ್ಲಿ ಪ್ರೇಮ ಇರುವುದಿಲ್ಲ. ಏಕೆಂದರೆ ವಿಚಾರ ನೆನಪಿನ ಮೇಲೆ ನಿಂತಿದೆ; 'ಪ್ರೇಮ' ನೆನಪಲ್ಲ .... ವಿಚಾರ ಪ್ರೇಮಕ್ಕೆ ಒಯ್ಯುವುದಿಲ್ಲ. ಪ್ರೇಮವನ್ನು ಬೆಳೆಸುವುದು ಇಲ್ಲ. ಹೂದೋಟ ಬೆಳೆಸಿದ ಹಾಗೆ ಪ್ರೇಮ–ಪ್ರೀತಿಗಳನ್ನು ಬೆಳೆಸಲಿಕ್ಕೆ ಬರುವುದಿಲ್ಲ. ಬೆಳೆಸಬೇಕೆಂಬ ಅಭಿಲಾಷೆಯೇ ವಿಚಾರದ ಚಟುವಟಿಕೆ, ಲೈಂಗಿಕ ಕ್ರಿಯೆಯ ಬಗ್ಗೆ ಸದಾ ಯೋಚಿಸುತ್ತಿರುವುದು ಕಾಮುಕತೆಯಾಗುತ್ತದೆ. ಅದು ಲೈಂಗಿಕ ಕ್ರಿಯೆಗಿಂತ ಸಂಪೂರ್ಣ ಭಿನ್ನವಾದದ್ದು. ಹೆಚ್ಚಿನ ಜನರು ಕಾಮುಕ ಭಾವೋದ್ವೇಗವನ್ನೇ ಪ್ರೇಮವೆಂದು ತಿಳಿದುಕೊಂಡಿರುತ್ತಾರೆ. ಲೈಂಗಿಕ ಕ್ರಿಯೆಯ ಮೊದಲು ಹಾಗೂ ಅನಂತರ ಅದರ ಬಗ್ಗೆಯೇ ಹಪಹಪಿಸುತ್ತಿರುವುದು ಲಂಪಟತನವಾಗುತ್ತದೆ. ಈ ಲಂಪಟತನವೇ ವಿಚಾರ'. 'ಕಾಮ ಅಥವಾ ಲೈಂಗಿಕತೆ ಪವಿತ್ರವೂ ಅಲ್ಲ, ಅಪವಿತ್ರವೂ ಅಲ್ಲ. ಮನಸ್ಸನ್ನು ಅನುಕರಣೆ, ವಿಧೇಯತೆ, ಧಾರ್ಮಿಕ, ಅನುಸರಣೆಗಳಿಂದ ಬಿಡುಗಡೆಗೊಳಿಸುವಲ್ಲಿ ಲೈಂಗಿಕತೆಗೆ ಅದರದೇ ಆದ ಸ್ಥಾನ' ಇದ್ದೇ ಇದೆ."[೨೭]

"ಜೆ. ಕೆ. ಯವರಿಗೆ ಶಿಕ್ಷಣದ ಬಗೆಗಿನ ಕಲ್ಪನೆಗಳು ಕುತೂಹಲಕಾರಿಯಾಗಿ ಕಾಣುತ್ತವೆ: ಸ್ವಯಂ ಪ್ರಗತಿಯ, ಸಂತೃಪ್ತಿಯ ಹುಡುಕಾಟವಿಲ್ಲದೇ, ಮನವು ಶೋಧನೆಯಲ್ಲಿರುವಾಗ ಈ ಗಮನಿಸುವಿಕೆ ತಾನೇ ಇರುತ್ತದೆ. ಈ ಬಗೆಯ ಗಮನಿಸುವಿಕೆಯನ್ನು ಮಗುವಿನಲ್ಲಿ ಪ್ರಾರಂಭದಿಂದಲೂ ಬೆಳೆಸಬೇಕು. ವಿನಯ, ಸೌಜನ್ಯ, ಸಹನೆ, ಸಭ್ಯತೆಗಳ ಮೂಲಕ ವ್ಯಕ್ತಗೊಳ್ಳುವ ಪ್ರೇಮ ಎಲ್ಲಿರುತ್ತದೆಯೋ, ಆಗ ಸಂವೇದನಾ ಶೂನ್ಯತೆ ನಿರ್ಮಿಸುವ ಕೋಟೆ, ನಿರ್ಬಂಧಗಳೆಲ್ಲ ತಮ್ಮಷ್ಟಕ್ಕೇ ಇಲ್ಲವಾಗುತ್ತದೆ."[೨೮]

ಕೊನೆ ಟಿಪ್ಪಣಿಗಳು

೦೧. ಟಿ. ಪಿ. ಅಶೋಕ, ಪುಸ್ತಕ ಪ್ರೀತಿ, ೧೯೯೩, ಪು – ೧
೦೨. ಅದೇ., ಪುಟ – ೧೧
೦೩. ಅದೇ., ಪುಟ – ೧೫
೦೪. ಅದೇ., ಪುಟ – ೧೫
೦೫. ಅದೇ., ಪುಟ – ೩೪೨
೦೬. ಅದೇ., ಪುಟ – ೩೪೩
೦೭. ಅದೇ., ಪುಟ – ೪೨೭
೦೮. ಅದೇ., ಪುಟ – ೩೫೧
೦೯. ಅದೇ., ಪುಟ – ೧೮೩
೧೦. ಅದೇ., ಪುಟ – ೧೮೪
೧೧. ಅದೇ., ಪುಟ – ೧೮೪
೧೨. ಅದೇ., ಪುಟ – ೨೫
೧೩. ಅದೇ., ಪುಟ – ೨೬
೧೪. ಅದೇ., ಪುಟ – ೨೮
೧೫. ಅದೇ., ಪುಟ – ೨೯
೧೬. ಅದೇ., ಪುಟ – ೯೨
೧೭. ಅದೇ., ಪುಟ – ೯೫
೧೮. ಅದೇ., ಪುಟ – ೯೯
೧೯. ಅದೇ., ಪುಟ – ೧೦೦
೨೦. ಅದೇ., ಪುಟ – ೨೨೬
೨೧. ಅದೇ., ಪುಟ – ೨೨೭
೨೨. ಅದೇ., ಪುಟ – ೨೩೦
೨೩. ಅದೇ., ಪುಟ – ೨೩೨

೨೪. ಅದೇ., ಪುಟ – ೧೫೫

೨೫. ಅದೇ., ಪುಟ – ೧೫೬

೨೬. ಅದೇ., ಪುಟ – ೧೫೬

೨೭. ಅದೇ., ಪುಟ – ೧೫೮

೨೮. ಅದೇ., ಪುಟ – ೧೫೯

ಅಧ್ಯಾಯ ೫

ನರಹಳ್ಳಿ ಬಾಲಸುಬ್ರಹ್ಮಣ್ಯ : ಪುಸ್ತಕ ವಿಮರ್ಶೆಯ ಸ್ವರೂಪ

ಅಧ್ಯಾಯ ೫

ನರಹಳ್ಳಿ ಬಾಲಸುಬ್ರಹ್ಮಣ್ಯ : ಪುಸ್ತಕ ವಿಮರ್ಶೆಯ ಸ್ವರೂಪ

ಪುಸ್ತಕ ವಿಮರ್ಶೆ ಕುರಿತ ಪುಸ್ತಕ ವಿಮರ್ಶೆ ಕೃತಿಗೆ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ಸಾಹಿತ್ಯ ಸಂಸ್ಕೃತಿ' ಎಂದು ಕರೆದಿದ್ದಾರೆ. ಸಾಹಿತ್ಯ ಎನ್ನುವುದು ಒಂದು ಸಂಸ್ಥೆ. ಈ ಸಂಸ್ಥೆ ತನ್ನದೇಯಾದ ಒಂದು ವಿಸ್ತಾರವಾದ ಲೋಕವನ್ನು ಒಳಗೊಂಡಿದೆ. ಕರ್ನಾಟಕದಲ್ಲಿ ಸಂಸ್ಕೃತಿ ಎಂಬ ಪದವನ್ನು ವಿಸ್ತಾರವಾದ ನೆಲೆಯಲ್ಲಿ ಗ್ರಹಿಸಲಾಗುತ್ತಿದೆ. ಸಮಾನ ಲಕ್ಷಣಗಳುಳ್ಳ ಗುಂಪು ಅಥವಾ ಸಂಸ್ಥೆಗಳಿಗೆ ಸಂಸ್ಕೃತಿ ಎನ್ನುವ ಪದವನ್ನು ಜೋಡಿಸಲಾಗುತ್ತಿದೆ. ಉದಾಹರಣೆಗೆ ರಾಜಕೀಯ ಸಂಸ್ಕೃತಿ, ಸಮಾಜ ಸಂಸ್ಕೃತಿ, ಸಿನಿಮಾ ಸಂಸ್ಕೃತಿ, ಮಹಿಳಾ ಸಂಸ್ಕೃತಿ, ವಿದ್ಯಾರ್ಥಿ ಸಂಸ್ಕೃತಿ, ಕಾಲೇಜು ಸಂಸ್ಕೃತಿ, ದೇವಾಲಯ ಸಂಸ್ಕೃತಿ, ಆಶ್ರಮ ಸಂಸ್ಕೃತಿ ಅನ್ನುವ ಹಾಗೆ ಗೂಂಡಾ ಸಂಸ್ಕೃತಿ, ಚಾಕು-ಚೂರಿ ಸಂಸ್ಕೃತಿ, ಧರೋಡೆ ಸಂಸ್ಕೃತಿ ಮುಂತಾದ ಬಗೆಯಲ್ಲಿ ಈ ಪದವನ್ನು ಬಳಸುತ್ತಾ ಬರಲಾಗಿದೆ. ಇವುಗಳನ್ನು ಗಮನಿಸದಾಗ ಯಾವುದೇ ಸಂಸ್ಥೆಯೊಳಗೆ ಅದು ತನ್ನ ಚಟುವಟಿಕೆಗಳ ಮೂಲಕ ಒಂದು ಸಂಸ್ಕೃತಿಯನ್ನು ಬಿಂಬಿಸುತ್ತದೆ. ಹಾಗೆಯೇ ಕೆಟ್ಟದಾದ ಚಟುವಟಿಕೆಗಳನ್ನೂ ಬಿಂಬಿಸುತ್ತದೆ. 'ಸಾಹಿತ್ಯ ಸಂಸ್ಕೃತಿ' ಎಂದರೆ ಸಾಹಿತ್ಯ ಎನ್ನುವ ಸಂಸ್ಥೆಯೊಳಗೆ ನಡೆಯಬಹುದಾದ ಕ್ರಿಯಾಶೀಲವಾದ, ಸೃಜನಶೀಲವಾದ ಚಟುವಟಿಕೆಗಳನ್ನು ಬಿಂಬಿಸುತ್ತದೆ. ಸಾಹಿತ್ಯ ಯಾವಾಗಲೂ ಲೋಕದ ಅನುಭವಗಳನ್ನು, ದರ್ಶನಗಳನ್ನು ತನ್ನೊಳಗಿಟ್ಟುಕೊಂಡು ಓದುಗನಿಗೆ ಬಿತ್ತರಿಸುತ್ತದೆ. ಸಾಹಿತ್ಯದ ಓದು ಯಾರನ್ನಾದರೂ ಸುಸಂಸ್ಕೃತರನ್ನಾಗಿಸುತ್ತದೆ. ಹಾಗಾಗಿ ಪುಸ್ತಕಗಳು ಮನುಷ್ಯನ ಸಂಸ್ಕೃತಿಯನ್ನು ಬಿಂಬಿಸುತ್ತಾ ಬಂದಿದೆ. ಈ ಹಿನ್ನೆಲೆಯಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ತಮ್ಮ ಕೃತಿಗೆ 'ಸಾಹಿತ್ಯ ಸಂಸ್ಕೃತಿ' ಎಂದು ಕರೆದಿದ್ದಾರೆ.

೪೧ ಪುಸ್ತಕಗಳ ಪುಸ್ತಕ ವಿಮರ್ಶೆಯನ್ನು ಒಳಗೊಂಡ ಹಲವಾರು ಸಾಹಿತ್ಯ ಪ್ರಕಾರಗಳಿಂದ ಕೂಡಿದ ಒಂದು ಪುಸ್ತಕ. ಈ ಕೃತಿಯು ಕಾದಂಬರಿ, ಆತ್ಮಚರಿತ್ರೆ, ವಿಮರ್ಶಾಲೇಖನಗಳು, ಕಾವ್ಯಸಂಕಲನ, ಕಥಾಸಂಕಲನ, ಅಭಿನಂದನಾ ಗ್ರಂಥಗಳು, ಜೀವನ ಚರಿತ್ರೆ, ಕವನ ಸಂಕಲನ, ಅಂಕಣಬರಹ, ನಾಟಕ, ಲಲಿತಪ್ರಬಂಧ ಹೀಗೆ ಅನೇಕ ಸಾಹಿತ್ಯ ಪ್ರಕಾರಗಳಿಂದ ಕೂಡಿದೆ.

ನರಹಳ್ಳಿಯವರ ಕೃತಿಯನ್ನು ನೋಡಿದಾಗ, ಮೇಲ್ನೋಟಕ್ಕೆ ಗಮನ ಸೆಳೆಯುವ ಸಂಗತಿ ಅವರ ಆಸಕ್ತಿಯನ್ನು ಕೆರಳಿಸುವ ಕೃತಿಗಳ ವೈವಿಧ್ಯ. ಈ ಮೇಲಿನ ಸಾಹಿತ್ಯ ಪ್ರಕಾರಗಳನ್ನು ಗಮನಿಸಿದಾಗ ತಿಳಿದು ಬರುತ್ತದೆ. ನನಗೆ ಪ್ರಿಯವಾದುದ್ದು ಕಾವ್ಯ. ನಾನು ಕಾವ್ಯ ಪ್ರಕಾರವನ್ನು ಕುರಿತು ಮಾತ್ರ ಬರೆಯುತ್ತೇನೆ. ಹೀಗೆ ನರಹಳ್ಳಿ ತಮ್ಮ ಆಸಕ್ತಿಯನ್ನು ಸೀಮಿತಗೊಳಿಸಿಕೊಂಡಿಲ್ಲ. ಯಾವುದೇ ಕೃತಿಯು ಅವರ ಸಮಗ್ರ ಓದಿಗೆ ಗುರಿಯಾಗಬಹುದು. ನರಹಳ್ಳಿಯವರು ನಿಜವಾದ ಅರ್ಥದಲ್ಲಿ ಒಂದು ಕೃತಿಯ ಸಮಗ್ರ ಓದುಗ ಎಂದು ಹೇಳಬಹುದು. ಅವರು ತಮ್ಮ ಇಡೀ ವ್ಯಕ್ತಿತ್ವವನ್ನು ತೊಡಗಿಸಿ ಕೃತಿಯ ಅಭ್ಯಾಸದಲ್ಲಿ ತೊಡಗುತ್ತಾರೆ. ಅವರಿಗೆ ತಮ್ಮ ಓದಿನ ನಿಯೋಗದ ಬಗ್ಗೆ ಕೂಡ ಖಚಿತವಾದ ನಿಲುವುಗಳಿವೆ. ಸಮಕಾಲೀನ ಸಾಂಸ್ಕೃತಿಕ ಒತ್ತಡಗಳು ಅವರ ಓದಿನ ಗುರಿಯನ್ನು ಏಕಾಗ್ರಗೊಳಿಸುತ್ತವೆ ಎಂದು ಹೇಳಬಹುದು.

ನರಹಳ್ಳಿಯವರು ಬರೆಯುವ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕಗಳ ಬಗ್ಗೆ ಮಾತ್ರ ಪುಸ್ತಕ ವಿಮರ್ಶೆಗೆ ಕೈಗೆತ್ತಿಕೊಳ್ಳುತ್ತಾರೋ? ಅಥವಾ ಅವರು ಬರೆಯದೆ ಇರುವ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕಗಳ ಬಗ್ಗೆ ಪುಸ್ತಕ ವಿಮರ್ಶೆಗೆ ಕೈಗೆತ್ತಿಕೊಳ್ಳುತಾರೋ? ಅಥವಾ ಇವೆರಡರ ಕಾಲವನ್ನು ನಿರ್ಲಕ್ಷಿಸಿ ಯಾವುದೇ ಸಂದರ್ಭದ ಕೃತಿಯೆಂದು ವಿಮರ್ಶೆಗೆ ತೊಡಗುತ್ತಾರೋ? ಎಂಬ ಪ್ರಶ್ನೆ ಎದುರಾದಾಗ ಅವರು ಯಾವುದೇ ಕೃತಿಯಾಗಲಿ, ಹಳೆಯದಿರಬಹುದು, ಹೊಸದಿರಬಹುದು, ಅದನ್ನು ಲೆಕ್ಕಿಸದೆ ಕೃತಿ ವಿಮರ್ಶೆ ಮಾಡಲು ತೊಡಗುತ್ತಾರೆ. ಉದಾಹರಣೆಯಾಗಿ ನಾವು ಹೇಳುವುದಾದರೆ ಆದಿ ಕವಿ ಪಂಪನ ಕೃತಿಗಳಾದ ಆದಿಪುರಾಣ, ವಿಕ್ರಮಾರ್ಜುನ ವಿಜಯ. ಈ ಕೃತಿಗಳಿಂದ ಹಿಡಿದು ಹೊಸ ತಲೆಮಾರಿನ ಬರಹಗಾರರಾದ ಅಮರೇಶ ನುಗಡೋಣಿಯವರ 'ಬಿಸಿಲ ಹನಿಗಳು' ಕಥಾ ಸಂಕಲನವನ್ನು ಕುರಿತು ವಿಮರ್ಶೆ ಮಾಡಿರುವುದನ್ನು 'ಸಾಹಿತ್ಯ ಸಂಸ್ಕೃತಿ' ಎಂಬ ಅವರ ಕೃತಿಯಲ್ಲಿ ಕಾಣಬಹುದಾಗಿದೆ.

ನರಹಳ್ಳಿಯವರು ಜಿ.ಎಸ್.ಎಸ್, ಅನಂತಮೂರ್ತಿ, ಭೈರಪ್ಪ, ತೇಜಸ್ವಿಯವರನ್ನು ಚರ್ಚಿಸುವಷ್ಟೇ ಉತ್ಸಾಹದಿಂದ ಹಾ.ಮಾ. ನಾಯಕ, ಜಿ. ವೆಂಕಟಸುಬ್ಬಯ್ಯರವರನ್ನು ಚರ್ಚಿಸುತ್ತಾರೆ. ಗಿರೀಶ್ ಕಾರ್ನಾಡ್, ತೇಜಸ್ವಿ, ಕಂಬಾರ, ಲಕ್ಷ್ಮೀ ನಾರಾಯಣ ಭಟ್ಟರಂಥ ಲೇಖಕರ ಬಗ್ಗೆ ಬರೆಯುವಾಗ ವಿಮರ್ಶೆಯ ಪರಂಪರೆಯನ್ನು ಬೆಳೆಸುವ ಸಂಕಲ್ಪದಿಂದ ಹೊಸ ಮಾತು ಹೇಳಲು

ಯತ್ನಿಸುತ್ತಾರೆ. ರಾಘವೇಂದ್ರಪಾಟೀಲ, ವಿವೇಕ್‌ಶಾನಭಾಗ್, ಕೆ. ಸತ್ಯನಾರಾಯಣ, ಆನಂದ ಝುಂಜರವಾಡರಂಥ ಹೊಸಪೀಳಿಗೆಯ ಪ್ರತಿಭಾವಂತರ ಕೃತಿಗಳ ಬಗ್ಗೆ ಉತ್ಸಾಹದಿಂದ ಬರೆಯಲು ಹಿಂಜರಿಯುವುದಿಲ್ಲ. ಒಟ್ಟಾರೆಯಾಗಿ ನರಹಳ್ಳಿಯವರು ಸಾಹಿತ್ಯದ ಎಲ್ಲಾ ಕೃತಿಗಳ ಬಗ್ಗೆಯೂ ವಿಮರ್ಶೆ ಮಾಡಲಿಕ್ಕೆ ಗಮನಹರಿಸುತ್ತಾರೆ.

ನರಹಳ್ಳಿಯವರು ಯಾವುದೇ ಕೃತಿಯನ್ನು ವಿಮರ್ಶೆಗೆ ಕೈಗೆತ್ತಿಕೊಂಡಾಗ ಸ್ಪಷ್ಟವಾದ ವಿಮರ್ಶಾಧೋರಣೆ, ಧಾಟಿಯೊಂದಿಗೆ ಕೃತಿಯ ಅಭ್ಯಾಸಕ್ಕೆ ತೊಡಗುವ ನರಹಳ್ಳಿ, ಪ್ರಾಚೀನ ಕೃತಿಯನ್ನು ಓದುವಾಗ ಆಧುನಿಕ ಸಂದರ್ಭಕ್ಕೆ ಅದು ಸಂಬಂಧಿಸಿಕೊಳ್ಳುವ ಬಗೆಯನ್ನು ಪರಿಶೀಲಿಸುತ್ತಾರೆ. ಆಧುನಿಕ ಕೃತಿಯನ್ನು ಓದುವಾಗ ಪರಂಪರೆಯ ಹಿನ್ನೆಲೆಯಲ್ಲಿ ಅದು ಪಡೆಯುವ ಅರ್ಥವಂತಿಕೆಯನ್ನು ಕುರಿತು ಮಾತಾಡುತ್ತಾರೆ. ಕೃತಿ ಯಾವುದೇ ಇರಲಿ, ಯಾವ ಪ್ರಕಾರದ್ದೇ ಇರಲಿ, ಯಾವ ಕಾಲದ್ದೆ ಇರಲಿ, ಆ ಕೃತಿಯ ಅಧ್ಯಯನದಿಂದ ಪಡೆದ ಅನುಭವದ ಬೆಳಕೇ ಅವರಿಗೆ ಒದಗುವ ವಿಮರ್ಶಾ ಪ್ರಮಾಣ. ಇಂದಿನ ಬದುಕನ್ನು ಶುಚಿಗೊಳಿಸುವಲ್ಲಿ, ರುಚಿಗೊಳಿಸುವಲ್ಲಿ, ಸಮೃದ್ಧಿಗೊಳಿಸುವಲ್ಲಿ, ಜೀವಂತವಾಗಿ ಇಡುವಲ್ಲಿ ಈ ಕೃತಿ ಏನನ್ನು ಒದಗಿಸುತ್ತದೆ ಎಂದು ಪ್ರಶ್ನಿಸಿಕೊಂಡು ಅದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಕೃತಿಯ ಮೌಲಿಕತೆಯನ್ನು ಗ್ರಹಿಸುವಲ್ಲಿ ಅವರು ಸಾಹಿತ್ಯಕ ಸೂತ್ರಗಳಿಗಿಂತ ಹೆಚ್ಚಾಗಿ ಜೀವನ ಸೂತ್ರಗಳನ್ನೇ ಅವಲಂಬಿಸುತ್ತಾರೆ.

ನರಹಳ್ಳಿಯವರ 'ಸಾಹಿತ್ಯ ಸಂಸ್ಕೃತಿ' ಕೃತಿಯನ್ನು ಅವಲೋಕಿಸಿದಾಗ ಇದು ಕೃತಿನಿಷ್ಠ ವಿಮರ್ಶೆಯೋ? ಕರ್ತೃನಿಷ್ಠ ವಿಮರ್ಶೆಯೋ? ಅಥವಾ ಈ ಕೃತಿಯು ಯಾವ ವಿಮರ್ಶೆಯನ್ನು ಒಳಗೊಂಡಿದೆ? ಎಂಬಂತಹ ನೂರಾರು ಪ್ರಶ್ನೆಗಳು ಎದುರಾಗುತ್ತಾ ಹೋಗುತ್ತವೆ. ಆಗ ಒಬ್ಬ ಉತ್ತಮ ವಿಮರ್ಶಕನಿಗೆ ಎದುರಾಗಲೇಬೇಕಾದಂತಹ ಪ್ರಶ್ನೆಗಳು ಅಥವಾ ಅವರು ಮಾಡಿರುವ ಪುಸ್ತಕ ವಿಮರ್ಶೆಯ ವಿಧಾನಗಳನ್ನು ಗುರುತಿಸುತ್ತ ಹೋಗುತ್ತಾರೆ. ಹೇಳಿಕೆಗಳನ್ನು ಆರಂಭದಲ್ಲಿ ಕೃತಿಯಿಂದ ಉಲ್ಲೇಖಿಸುವುದು ಅಥವಾ ಲೇಖಕರು ಹೇಳಿದ್ದನ್ನು ಉಲ್ಲೇಖಿಸುವುದು, ಕೃತಿಯ ವಸ್ತುವನ್ನು ಸರಳವಾಗಿ, ಸಂಕ್ಷಿಪ್ತವಾಗಿ ಹೇಳುವುದು, ಸಾರಾಂಶ ರೀತಿಯಲ್ಲಿ ವಿಶ್ಲೇಷಣೆ ಮಾಡುವುದು, ಇನ್ನೊಬ್ಬ ಲೇಖಕರ ಕೃತಿ ಮತ್ತು ಅವರ ಇತರ ಕೃತಿಯ ಪಾತ್ರಗಳ ಜೊತೆಗೆ ತುಲನಾತ್ಮಕವಾಗಿ ಚರ್ಚೆ ಮಾಡುವುದು ಪ್ರಮುಖ ಲೇಖಕರ ಮತ್ತು ಇತರ ಲೇಖಕರ ಎರಡು ಚಿಂತನೆಗಳನ್ನು ಜೋಡಿಸಿ, ಚರ್ಚಿಸಲು ಯತ್ನಿಸುವುದು, ಪ್ರಮುಖ ವಾಗ್ವಾದಗಳನ್ನು ಚರ್ಚಿಸುವುದು ಹೀಗೆ ಅನೇಕ ವಿಧಾನಗಳನ್ನು ಬಳಸಿ ಕೃತಿಯ ವಿಮರ್ಶೆಯನ್ನು ಮಾಡಿದ್ದಾರೆ.

ಮುಖ್ಯವಾದ ಒಂದು ಭಾಗವನ್ನು ಉದ್ಧರಿಸಿ ಅದರ ವಿಮರ್ಶೆಗೆ ತೊಡಗುತ್ತಾರೆ

ಎಂ.ಜಿ. ಕೃಷ್ಣಮೂರ್ತಿಯವರು ಬರೆದ 'ಕೃತಿ ಸಂಸ್ಕೃತಿ' ವಿಮರ್ಶಾ ಲೇಖನಗಳ

ಸಂಕಲನವನ್ನು ಕುರಿತು ವಿಮರ್ಶೆ ಮಾಡುವಾಗ ಮೊದಲಿಗೆ ಕೃತಿಯಲ್ಲಿನ ಹೇಳಿಕೆಗಳನ್ನು ಅಥವಾ ಲೇಖಕರು ಹೇಳಿದ ಹೇಳಿಕೆಗಳನ್ನು ಬಳಸುತ್ತಾ ಇವರು ಪುಸ್ತಕ ವಿಮರ್ಶೆಗೆ ತೊಡಗುತ್ತಾರೆ.

"ಕನ್ನಡ ಸಾಹಿತ್ಯ ನಮ್ಮೆಲ್ಲರಿಗಿಂತಲೂ ದೊಡ್ಡದು. ವಿಮರ್ಶೆಯಲ್ಲಿ ವ್ಯಕ್ತಿ ದ್ವೇಷಕ್ಕೆ ಮತ್ತು ಗುಂಪುಗಳಿತನಕ್ಕೆ ಜಾಗವಿಲ್ಲ; ಕೆಲವ ಜನರ ಅಭಿಪ್ರಾಯಗಳಲ್ಲಿ ಹೋಲಿಕೆಗಳಿದ್ದ ಮಾತ್ರಕ್ಕೆ ಅವರೆಲ್ಲ ಒಂದು ಗುಂಪು, ಬೇರೆಯವರನ್ನು ದ್ವೇಷಿಸುತ್ತಾರೆ ಎಂದು ಹೇಳುವುದು ಸಾಹಿತ್ಯವಿಮರ್ಶೆ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಒಬ್ಬ ವಿಮರ್ಶಕನ ಅಭಿಪ್ರಾಯ ತಪ್ಪಿದ್ದರೆ, ಅದು ತಪ್ಪೆಂದು ಸಿದ್ಧಮಾಡಿ ತೋರಿಸುವುದು, ಆ ಅಭಿಪ್ರಾಯಗಳಿಗೆ ಆಧಾರವೇನು? ಎಂದು ಕೇಳುವುದು ಮತ್ತೊಬ್ಬ ವಿಮರ್ಶಕನ ಕೆಲಸ. ಆ ಕೆಲಸ ಮಾಡದ ವಿಮರ್ಶಕ, ವಿಮರ್ಶೆ ಮಾಡದೇ ಇರುವುದೇ ಒಳ್ಳೆಯದು. ಈ ಹೊಣೆಗಾರಿಕೆಯನ್ನು ನಾವು ಒಪ್ಪಿಕೊಳ್ಳದಿದ್ದರೆ, ಸಾಹಿತ್ಯ ವಿಮರ್ಶೆ ಬೀದಿ ಜಗಳವಾಗುತ್ತದೆ; ಅತಿಮುಖ್ಯವಾಗಿ ಬೌದ್ಧಿಕ ಕೆಲಸವೊಂದು ನಿಂತು ಹೋಗದಿದ್ದರೂ, ಆ ಕೆಲಸಕ್ಕೆ ಅನಾವಶ್ಯಕ ಅಡಚಣೆಯುಂಟಾಗುತ್ತದೆ."[೧]

ಈ ಮೇಲಿನ ಉಲ್ಲೇಖವನ್ನು ಗಮನಿಸಿದರೆ ಇದರಲ್ಲಿ ಕೃತಿಯ ಬಗೆಗೆ ಯಾವುದೇ ವಿವರಗಳಿಲ್ಲ. ಆದರೆ ಈ ಕೃತಿ ಸೇರಿರುವ ಪ್ರಕಾರವನ್ನು ಕುರಿತು ವಿಶ್ಲೇಷಣೆ ಮಾಡುವುದನ್ನು ಸಮರ್ಥಿಸಿಕೊಳ್ಳುವ ದಾಟಿಯಲ್ಲಿ ಈ ಉಲ್ಲೇಖವನ್ನು ಮಾಡಿದ್ದಾರೆ. ಇದರ ಮುಖೇನ ಕೃತಿ-ಸಂಸ್ಕೃತಿ, ಕೃತಿಯೊಳಗಿನ ವಿಶ್ಲೇಷಣೆಯನ್ನು ಒಪ್ಪಿಕೊಳ್ಳುತ್ತಾ ಪುಸ್ತಕ ವಿಮರ್ಶೆ ಆರಂಭವಾಗಿದೆ. ಇದರ ಜೊತೆಯಲ್ಲಿ ಸ್ವವಿಶ್ಲೇಷಣೆಯನ್ನು ಸೇರಿಸುವ ಯತ್ನವಿದೆ. ಮತ್ತು ಅಪ್ರಸ್ತುತೆಯಿಂದ ಪ್ರಸ್ತುತದೆಡೆಗೆ ಗಮನ ಸೆಳೆಯುವ ಮನೋಭಾವವು ಕೂಡ ಇದೆ.

ಉದಾಹರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. 'ಕೆ.ವಿ.ಸುಬ್ಬಣ್ಣ ಅವರ ಆಯ್ದ ಬರಹಗಳು' ಸಂಪಾದಕರು ಟಿ.ಪಿ. ಅಶೋಕ, ಈ ಕೃತಿಯನ್ನು ವಿಮರ್ಶೆಗೆ ಕೈಗೆತ್ತಿಕೊಳ್ಳುವಾಗ ಲೇಖಕರ ಹೇಳಿಕೆ ಮೂಲಕ ಕೃತಿಯನ್ನು ಆರಂಭಿಸಿರುವುದನ್ನು ಕಾಣಬಹುದು.

"ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನ ಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟುಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನು ತಂದಿವೆ. ಈ ತಿಳುವಳಿಕೆಗಳ ಮಾರ್ಗ-ದೇಶಿ, ಸ್ವಕೀಯ-ಪರಕೀಯ, ಪೌರತ್ವ-ಪಾಶ್ಚಾತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿ ಬರುವ ತಿಳುವಳಿಕೆಗಳನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ"[೨] ಎಂದು ಕನ್ನಡ ವಿಶ್ವವಿದ್ಯಾಲಯದ ಆಶಯವನ್ನು ಉಪಕುಲಪತಿ ಚಂದ್ರಶೇಖರ ಕಂಬಾರರು ಹೇಳಿದ್ದಾರೆ.

ನರಹಳ್ಳಿಯವರು ಈ ಮೇಲಿನ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಹೇಳಿಕೆಯ ಮೂಲಕ ಪುಸ್ತಕ ವಿಮರ್ಶೆ ಪ್ರಾರಂಭಿಸಿದ್ದಾರೆ. ಇದು ಸರಿಯಲ್ಲ ಏಕೆಂದರೆ ವಿಮರ್ಶಕನಿಗೆ ತನ್ನದೇ ಆದ ಜವಾಬ್ದಾರಿಗಳು ಇರುತ್ತವೆ. ಅವುಗಳನ್ನು ಸರಿಯಾಗಿ, ನೇರವಾಗಿ, ಸುತ್ತಿ ಬಳಸಿ ಹೇಳದೆ, ಕೃತಿಯನ್ನು ಪ್ರವೇಶಿಸಿ ಕೃತಿಯಲ್ಲಿರುವ ಸಾಧಕ–ಭಾದಕಗಳ ಬಗ್ಗೆ ತಾತ್ವಿಕವಾಗಿ ಚರ್ಚೆ ಮಾಡುತ್ತಾ ಅದರ ಫಲಿತಾಂಶ ನೀಡಬೇಕಾಗಿತ್ತು. ಆದರೆ ವಿಮರ್ಶೆ ಓದುಗರನ್ನು ಆರಂಭದಲ್ಲಿಯೇ ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡಲಾಗಿದೆ. ಏಕೆಂದರೆ ಇದು ಕೃತಿಗಾದರೂ ಸಂಬಂಧವಿಲ್ಲ. ಕೃತಿಕಾರನಿಗಾದರೂ ಸಂಬಂಧಿಸಿಲ್ಲ ಹಾಗೆ ಇಲ್ಲ–ಸಲ್ಲದ ಹೇಳಿಕೆಗಳ ಮೂಲಕ ವಿಮರ್ಶೆಗೆ ತೊಡಗುವುದು ಸರಿಯಲ್ಲ ಎಂದು ಹೇಳಬಹುದು.

ಉದಾಹರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. ಯು. ಆರ್. ಅನಂತಮೂರ್ತಿಯವರು ಬರೆದ 'ಭವ' ಕಾದಂಬರಿಯನ್ನು ವಿಮರ್ಶೆಗೆ ಕೈಗೆತ್ತಿಕೊಳ್ಳುವಾಗ ಲೇಖಕರು ಆ ಕಾದಂಬರಿಯ ಕರ್ತೃವಾದ ಯು. ಆರ್. ಅನಂತಮೂರ್ತಿಯವರ ಹೇಳಿಕೆ ಮುಖಾಂತರ ಪುಸ್ತಕ ವಿಮರ್ಶೆಯನ್ನು ಪ್ರಾರಂಭಿಸುತ್ತಾರೆ.

"ಈಗ ನಾವು ಯೋಚಿಸುವ ಕ್ರಮ ನೋಡಿ: ನಮ್ಮ ಜಾತಿ, ನಮ್ಮ ವಿವಾಹ, ನಮ್ಮ ಧರ್ಮ, ನಮ್ಮ ವಿಧವೆಯರು, ನಮ್ಮ ಹಬ್ಬಹರಿದಿನಗಳು, ನಮ್ಮ ಆಚರಣೆಗಳು– ಎಲ್ಲವೂ ನಮ್ಮ ಹೇಸಿಗೆಯ ಸಂಗಾತಿಗಳಾಗಿ ಬಿಟ್ಟಿವೆ. ಈ ಸಂಸ್ಕೃತಿಯಲ್ಲಿ ಬೆಳೆದ ಬಸವ, ಕಬೀರರಂಥವರು ಸಂಸ್ಕೃತಿಗೆ ಒಳಗಿನವರಾಗಿದ್ದೂ ತಮ್ಮ ಸಂಸ್ಕೃತಿಯನ್ನು ನಿಷ್ಠುರವಾಗಿ ಟೀಕಿಸಬಲ್ಲವರಾಗಿದ್ದರು. ಆದರೆ ನಾವು ಹೊರಗೆ ನಿಂತು ಅಸಹ್ಯ ಪಡುತ್ತೇವೆ. ಇದಕ್ಕೊಂದೇ ಕಾರಣ: ಸಾಮ್ರಾಜ್ಯಶಾಹಿ ಇತಿಹಾಸದಲ್ಲಿ ನಾವು ಅನುಭವಿಸಿದ ಆಘಾತ. ಸದ್ಯದ ಇನ್ನೂರು ವರ್ಷಗಳ ಚರಿತ್ರೆಯ ದಬ್ಬಾಳಿಕೆಯಿಂದ ಸ್ವತಂತ್ರವಾಗುವ ಸನ್ನಾಹದಲ್ಲಿ ನನ್ನ ಮನಸ್ಸಿದೆ."[೨]

ಈ ಮೇಲಿನ ಉಲ್ಲೇಖವನ್ನು ಗಮನಿಸಿದರೆ ಕಾದಂಬರಿಯ ಮಧ್ಯ ಭಾಗದ ಯಾವುದೇ ಸಂದರ್ಭವನ್ನು ಕೈಗೆತ್ತಿಕೊಂಡು ಈ ಕೃತಿಯ ಪುಸ್ತಕವಿಮರ್ಶೆಗೆ ಪ್ರಾರಂಭಿಸಿದ್ದಾರೆ. ಇವರು ಪುಸ್ತಕ ವಿಮರ್ಶೆಯ ಮಾದರಿಯಲ್ಲಿ ಒಂದು ಚಿಂತನೆಯನ್ನು ಉಲ್ಲೇಖಿಸಿ ಅದರ ಹಿನ್ನೆಲೆಯಲ್ಲಿ ಲೇಖಕರನ್ನು ಅವರ ಕೃತಿಯನ್ನು ವಿಶ್ಲೇಷಿಸುವುದು ಒಂದು ಮುಖ. ಈ ರೀತಿಯ ಮಾದರಿಯಲ್ಲಿ ಲೇಖಕರ ಹಿಂದೆ ತಾತ್ವಿಕತೆಯನ್ನು ಅವರ ಇತ್ತೀಚಿನ ಗತಿಯ ಸ್ವರೂಪವನ್ನು ಪರಸ್ಪರ ಚರ್ಚಿಸುವುದು ಅಲ್ಲದೆ ಅವರ ಬದಲಾವಣೆಯ ಗತಿಯನ್ನು ವಿಶ್ಲೇಷಿಸುವುದು ಇಂಥ ಮಾದರಿಗಳಿಂದ ಒದಗಿ ಬರುತ್ತದೆ.

ಹಲವಾರು ಹೇಳಿಕೆಗಳನ್ನು ನೀಡುತ್ತಾ ವಿಮರ್ಶೆ ಮಾಡುವುದು\

ಎಂ.ಜಿ. ಕೃಷ್ಣಮೂರ್ತಿಯವರು ಬರೆದ 'ಕೃತಿ–ಸಂಸ್ಕೃತಿ' ವಿಮರ್ಶಾ ಲೇಖನಗಳ ಸಂಕಲನವನ್ನು ಕುರಿತು ವಿಮರ್ಶೆ ಮಾಡುವಾಗ ಹಲವಾರು ವಿವಿಧ ಲೇಖಕರ ಮತ್ತು ಕೃತಿಕಾರರ ಹೇಳಿಕೆಗಳನ್ನು ಬಳಸುತ್ತಾ ಪುಸ್ತಕ ವಿಮರ್ಶೆಗೆ ತೊಡಗಿದ್ದಾರೆ. ಉದಾಹರಣೆಯಾಗಿ ಈ ಕೆಳಕಂಡಂತೆ ನೋಡಬಹುದು.

"ಕನ್ನಡ ಸಾಹಿತ್ಯ ನಮ್ಮೆಲ್ಲರಿಗಿಂತಲೂ ದೊಡ್ಡದು. ವಿಮರ್ಶೆಯಲ್ಲಿ ವ್ಯಕ್ತಿ ದ್ವೇಷಕ್ಕೆ ಮತ್ತು ಗುಂಪುಗಳಿತನಕ್ಕೆ ಜಾಗವಿಲ್ಲ; ಕೆಲವು ಜನರ ಅಭಿಪ್ರಾಯಗಳಲ್ಲಿ ಹೋಲಿಕೆಗಳಿದ್ದ ಮಾತ್ರಕ್ಕೆ ಅವರೆಲ್ಲ ಒಂದು ಗುಂಪು. ಬೇರೆಯವರನ್ನು ದ್ವೇಷಿಸುತ್ತಾರೆ ಎಂದು ಹೇಳುವುದು ಸಾಹಿತ್ಯ ವಿಮರ್ಶೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಒಬ್ಬ ವಿಮರ್ಶಕರ ಅಭಿಪ್ರಾಯ ತಪ್ಪಿದ್ದರೆ ಅದು ತಪ್ಪೆಂದು ಸಿದ್ಧಮಾಡಿ ತೋರಿಸುವುದು. ಆ ಅಭಿಪ್ರಾಯಗಳಿಗೆ ಆಧಾರವೇನು ಎಂದು ಹೇಳುವುದು ಮತ್ತೊಬ್ಬ ವಿಮರ್ಶಕನ ಕೆಲಸ. ಆ ಕೆಲಸ ಮಾಡದ ವಿಮರ್ಶಕ ವಿಮರ್ಶೆ ಮಾಡದೆ ಇರುವುದೇ ಒಳ್ಳೆಯದು. ಈ ಹೊಣೆಗಾರಿಕೆಯನ್ನು ನಾವು ಒಪ್ಪಿಕೊಳ್ಳದಿದ್ದರೆ ಸಾಹಿತ್ಯ ವಿಮರ್ಶೆ ಬೀದಿಜಗಳವಾಗುತ್ತದೆ; ಅತಿ ಮುಖ್ಯವಾಗಿ ಬೌದ್ಧಿಕ ಕೆಲಸವೊಂದು ನಿಂತು ಹೋಗದಿದ್ದರೂ ಆ ಕೆಲಸಕ್ಕೆ ಅನವಶ್ಯಕ ಅಡಚಣೆಯುಂಟಾಗುತ್ತದೆ."[೪]

"ಕನ್ನಡದಲ್ಲಿ ಉತ್ತಮ ವಿಮರ್ಶೆ ಬರುತ್ತಿಲ್ಲ. ನಿಜವಾಗಿ ವಿಮರ್ಶಾ ಸಾಹಿತ್ಯ ಸರಿಯಾಗಿ ಬೆಳೆಯಲೇ ಇಲ್ಲ. ಇದೊಂದು ದೊಡ್ಡ ಕೊರತೆ ಎಂಬ ಮಾತು ಹೀಗೆ ಅನೇಕ ವರ್ಷಗಳಿಂದ ಕೇಳಿಬರುತ್ತಿದೆ. ಈ ಮಾತು ಬಹಳ ಮಟ್ಟಿಗೆ ನಿಜವೂ ಹೌದು. ಇದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಉತ್ತಮ ಸಾಹಿತ್ಯಕ ವಿಮರ್ಶೆಗೆ ಸಮರ್ಥರಾದವರು ಇಲ್ಲ ಎಂಬುದಲ್ಲ, ಅಂಥ ವಿಮರ್ಶೆಗೆ ಬೇಕಾದ ನೈತಿಕ ಧೈರ್ಯ ಬೆಳೆಯಲಿಲ್ಲ ಎಂಬುದೇ ಆಗಿದೆ . . . . ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ ಇವುಗಳಿಂದ ಸಾಮಾನ್ಯವಾಗಿ ಮಲೀನವಾಗಿದೆ."[೫]

"ನವ್ಯ ಸಾಹಿತ್ಯದ ಮೊದಲ ದಿನಗಳಲ್ಲಿ ನನ್ನಂಥವರಿಗೆ ಇದ್ದ ಪರಿಪೂರ್ಣ ಓದುಗರೆಂದರೆ – ಎಂ.ಜಿ.ಕೆ ಸತತವಾಗಿ ಆತ್ಮ ವಿಮರ್ಶೆ ಇಲ್ಲದೇ ಒಬ್ಬ ಲೇಖಕ ಬರೆಯಲಾರ ಎಂಬುದನ್ನು ನಮಗೆ ಮನದಟ್ಟು ಮಾಡಿದವರು – ತಮ್ಮ ಸ್ವಂತದ ಉದಾಹರಣೆಯಿಂದಲೇ – ಮುಖ್ಯವಾಗಿ ಇಬ್ಬರು. ಎಂ.ಜಿ.ಕೆ. ಮತ್ತು ಅಡಿಗರು. ಹೀಗೆ ಸಹಸ್ರಾರು ಓದುಗರು ಕೊಡಲಾರದ ಪೋಷಣೆಯಲ್ಲಿ ನಮ್ಮ ಬರವಣಿಗೆಯ ಪ್ರಾರಂಭದಲ್ಲಿ ಕೊಟ್ಟವರು."[೬]

"ಕಾದಂಬರಿ ಇತರ ಸಾಹಿತ್ಯ ಪ್ರಕಾರಗಳಂತೆ ಭಾಷೆಯು ಒಂದು ವ್ಯಾಪಾರವಾದ್ದರಿಂದ, ಭಾಷೆಯ ಮೂಲಕವೇ ತಾನು ಹೇಳಬೇಕೆಂದಿರುವುದನ್ನು ಲೇಖಕ ಹೇಳಬೇಕಾಗಿರುವುದರಿಂದ

ಭಾಷೆಗೂ, ಸಂಸ್ಕೃತಿಗೂ ಅತಿ ನಿಕಟ ಸಂಬಂಧವಿರುವುದರಿಂದ, ಒಂದು ಸಾಹಿತ್ಯ ಕೃತಿಯನ್ನು ಅದು ಯಾವ ಭಾಷೆಯಲ್ಲಿ ಬರೆದಿದೆಯೋ ಆ ಭಾಷೆಗೆ ರೂಪಕೊಟ್ಟು ಮತ್ತು ಆ ಭಾಷೆಯಿಂದ ರೂಪಿತವಾದ ಸಂಸ್ಕೃತಿಯ ಚೌಕಟ್ಟಿನಲ್ಲಿಯೂ ನೋಡಬೇಕಾಗುತ್ತದೆ. ಸಾಹಿತ್ಯ ವಿಮರ್ಶೆಯ ಮೂಲಕ ಒಂದು ಸಂಸ್ಕೃತಿಯ ಚೌಕಟ್ಟಿನಲ್ಲಿ ಏನೇನಾಗುತ್ತಿತ್ತು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯ. ಇವು ನನ್ನ ಕೆಲವು ಪೂರ್ವ ಗ್ರಹಗಳು."[೭]

"ಕಾದಂಬರಿ ಒಂದು ಕಲಾಸೃಷ್ಟಿ ಎಂದು ನಾವು ಒಪ್ಪಿಕೊಂಡಲ್ಲಿ ಉಳಿದ ಕಲಾಸೃಷ್ಟಿಗಳಂತೆ ಕಾದಂಬರಿಯೂ ಕೂಡ ಒಂದು 'ಬಂಧ' (Form). ವಿಮರ್ಶಕ ತಾನು ವಿಮರ್ಶಿಸುವ ಕಾದಂಬರಿಯ ಒಟ್ಟು ಶಿಲ್ಪಕ್ಕೂ ಗಮನಕೊಡಬೇಕು; ಒಂದು ಕಾದಂಬರಿಯ ಶಿಲ್ಪ ಮತ್ತು ಅದರ ಅರ್ಥ, ಅದರ ವಿವರಗಳಲ್ಲೆಲ್ಲ, ಆ ವಿವರಗಳನ್ನೆಲ್ಲ ಒಳಗೊಂಡು ಅವಕ್ಕೆಲ್ಲ ಒಂದು ಅರ್ಥಪೂರ್ಣ ಸಂಬಂಧ ಕಲ್ಪಿಸುವ ಕಲ್ಪನೆ ಮತ್ತು ಶಕ್ತಿಯಲ್ಲಿದೆ ಎಂದು ಒಪ್ಪಿಕೊಂಡಂತಾಗುತ್ತದೆ."[೮]

"ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಯವರ ವಿಮರ್ಶೆಗೆ ನಾನು ಇಷ್ಟೊಂದು ಮಹತ್ವ ಕೊಡಲು ಕಾರಣ ಇಷ್ಟು. ಅವರು ನವೋದಯ ಕಾಲದ ಅತ್ಯಂತ ಮುಖ್ಯರಾದ ವಿಮರ್ಶಕರು ಮತ್ತು ನನಗೆ ತಿಳಿದಿರುವಂತೆ ಒಟ್ಟು ಹೇಳಿಕೆಗಳಿಂದ ತೃಪ್ತಿಪಡೆದಂತಹ ಪ್ರಥಮ ದರ್ಜೆಯ ವಿಮರ್ಶಕರು. ಅವರ ವಿಮರ್ಶೆಯಲ್ಲಿ ಅನನುಭವಿಯ ಅಥವಾ ಸಂಭಾವಿತ ನಟನೆಯ ಯಾವ ಅಂಶವೂ ಇಲ್ಲ. ಒಟ್ಟಿನಲ್ಲಿ ಅವರ ಸಾಧನೆಗಳು ಗಮನಾರ್ಹವಾಗಿವೆ."[೯]

"ಯಾವುದೇ ಕಾಲದ ಇಂಗ್ಲೀಷ್ ವಿಮರ್ಶಕ ಸಮಕಾಲೀನ ಕನ್ನಡ ವಿಮರ್ಶಕನಂತೆ ಭಗ್ನ ಸ್ಥಿತಿಯ ವಾಸ್ತವವನ್ನು ಎದುರಿಸುತ್ತಿರಬಹುದೇ ಎಂದು ನನಗೆ ಸಂಶಯವಾಗುತ್ತದೆ. ಇಂಗ್ಲೀಷ್ ವಿಮರ್ಶಕ ಮಧ್ಯಕಾಲದಿಂದ ಈಗಿನವರೆಗೆ ಅಖಂಡ ಸಾಹಿತ್ಯ ಪರಂಪರೆಯನ್ನು ತೋರಿಸಬಲ್ಲ. ಆದರೆ ಕನ್ನಡ ವಿಮರ್ಶಕ ವಿಸ್ತಾರವಾದ ಸಾಹಿತ್ಯ ಇತಿಹಾಸವನ್ನು ತೋರಿಸಬಹುದಾದರೂ ಸಂಪ್ರದಾಯದ ಪ್ರಧಾನ ಅಂಶವಾದ ಕಾಳಜಿಗಳ ಅವಿಚ್ಛಿನ್ನತೆಯನ್ನು ಅವನು ತೋರಿಸಲಾರ. ಇಂಗ್ಲೀಷ್ ವಿಮರ್ಶಕನೊಬ್ಬ ಟಿ.ಎಸ್. ಎಲಿಯೆಟ್, ಕವಿಗಳು ಮತ್ತು ನಾಟಕಕಾರರ ಮಧ್ಯೆ ಫಲಪ್ರದವಾಗಿ ಸ್ಥಾಪಿಸಬಹುದಾದ ಸಂಬಂಧವನ್ನು ಕನ್ನಡ ವಿಮರ್ಶಕನೊಬ್ಬ ಬೇಂದ್ರೆ, ಪುಟ್ಟಪ್ಪ, ಅಡಿಗರಿಗೂ ಮತ್ತು ಮಾರ್ಗ ಮತ್ತು ಮಧ್ಯಕಾಲೀನ ಕವಿಗಳಿಗೂ ಮಧ್ಯೆ ಸ್ಥಾಪಿಸಬಹುದೆಂದು ನಾನಂತೂ ಭಾವಿಸಲಾರೆ. ಇದಕ್ಕೆ ಕಾರಣಗಳು ಐತಿಹಾಸಿಕವಾಗಿರಬಹುದು ಅಥವಾ ಸಮಾಜಶಾಸ್ತ್ರೀಯವೂ ಆಗಿರಬಹುದು. ಆದರೆ ಈ ಭಗ್ನಸ್ಥಿತಿಯ ವಾಸ್ತವವನ್ನು ಕಡೆಗಣಿಸಲಾಗದು. ಇಂಗ್ಲೀಷ್ ಲೇಖಕನೊಬ್ಬ ವಿಮರ್ಶಿಸುವಾಗ, ಸಂಪ್ರದಾಯವೊಂದರ ಹಿನ್ನೆಲೆಯಲ್ಲಿ ಒಬ್ಬ ಲೇಖಕನನ್ನು ಬೆಲೆಗಟ್ಟಬಹುದು. ಆದರೆ ಕನ್ನಡ ವಿಮರ್ಶಕನೊಬ್ಬ ಕನ್ನಡ ಸಾಹಿತ್ಯ ಪರಂಪರೆಯ ಹೊರಗೆ

ಹೋಗಬೇಕಾಗುತ್ತದೆ. ಅಂದರೆ ಒಂದು ಕಡೆ ಸಂಸ್ಕೃತ ಸಾಹಿತ್ಯ ಪರಂಪರೆಯತ್ತ, ಮತ್ತೊಂದು ಕಡೆ ಯುರೋಪಿಯನ್ ಪರಂಪರೆಯತ್ತ ಹೋಗಬೇಕಾಗುತ್ತದೆ."[೧೦]

"ವಸಾಹತುಘಟ್ಟದ ಮುಖ್ಯ ರೋಗವೇ ವಸಾಹತು ಪೂರ್ವದ ರಚನೆಗಳೊಡನೆ ಅಧಿಕೃತ ಸಂಬಂಧವನ್ನು ಅಸಾಧ್ಯವಾಗಿಸುವುದು. ಉದಾಹರಣೆ ಕೊಟ್ಟು ಈ ಅಂಶ ಸ್ಪಷ್ಟ ಪಡಿಸಬೇಕಾದರೆ ಕುವೆಂಪು ಅವರನ್ನು ವರ್ಡ್ಸ್‌ವರ್ತ್ ಜೊತೆಗಿಟ್ಟು ಹೋಲಿಸುವುದು ಸಹಜವಾಗಿ, ತಾರ್ಕಿಕವಾಗಿ ಕಾಣುತ್ತದೆ. ಆದರೆ ಅವರನ್ನು ಹರಿಹರನ ಜೊತೆಗಿಟ್ಟು ನೋಡುವುದಕ್ಕೆ ಕನ್ನಡ ವಿಮರ್ಶೆ ಹಿಂಜರಿದಿದೆ. ಪರಂಪರೆಯೊಂದನ್ನು ಸಜೀವ ಸಾಹಿತ್ಯವನ್ನಾಗಿ ನೋಡಲು, ಚರ್ಚೆ ಮಾಡಲು ಹಿಂಜರಿಕೆ ಹುಟ್ಟುವುದೇ ಬೌದ್ಧಿಕ ವಸಾಹತೀಕರಣದ ಮುಖ್ಯ ಲಕ್ಷಣ."[೧೧]

ನರಹಳ್ಳಿಯವರು ಎಂ. ಜಿ. ಕೃಷ್ಣಮೂರ್ತಿಯವರ 'ಕೃತಿ–ಸಂಸ್ಕೃತಿ' ವಿಮರ್ಶಾ ಲೇಖನಗಳ ಸಂಕಲನವನ್ನು ಪುಸ್ತಕ ವಿಮರ್ಶೆಗೆ ಕೈಗೆತ್ತಿಕೊಂಡು ಅದನ್ನು ಏಳು ಪುಟಕ್ಕೆ ಸೀಮಿತಗೊಳಿಸಿ ಪುಸ್ತಕ ವಿಮರ್ಶೆ ಮಾಡಿದ್ದಾರೆ. ಆದರೆ ಅದರಲ್ಲಿ ಎಂಟು ಜನರ ಹೇಳಿಕೆಗಳು ಕಂಡುಬಂದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಏಕೆಂದರೆ ಜನಪದರ ಒಂಧು ಗಾದೆ ಈಗಿದೆ. 'ಮೂಗಿಗೆ ಮೂಗುತಿ ಭಾರ' ಎನ್ನುವ ಹಾಗೆ ಏಳು ಪುಟದ ವಿಮರ್ಶೆಗೆ ಎಂಟು ಜನರ ಹೇಳಿಕೆಗಳು ಭಾರವೆನಿಸಿದೆ. ಇಡೀ ಪುಸ್ತಕದ ಕೃತಿ ವಿಷಯಕ್ಕೆ ಕೈ ಹಾಕದೆ ಕೇವಲ ಬರೀ ವಿವಿಧ ಲೇಖಕರ, ಕೃತಿಕಾರರ ಹೇಳಿಕೆಗಳನ್ನು ತಿಳಿಸುತ್ತಾ ಹೋಗಿದ್ದಾರೆ. ಈಗಾದರೆ 'ಪುಸ್ತಕ ವಿಮರ್ಶೆ' ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದು ನಿಲ್ಲುತ್ತದೆ. ಹಾಗಾಗಿ ವಿಮರ್ಶಕರು ನೇರವಾಗಿ ಕೃತಿಗೆ ಪ್ರವೇಶಿಸಿ ಕೃತಿಯ ಕುರಿತು ಚಿಂತನೆ ನಡೆಸಿದರೆ ಚೆನ್ನಾಗಿರುತ್ತಿತ್ತು. ಈ ಇಲ್ಲದ ಸಲ್ಲದ ಹೊಂದಾಣಿಕೆಯೇ ಆಗದ ಹೇಳಿಕೆಗಳನ್ನು ನೀಡುತ್ತಾ ಪುಸ್ತಕ ವಿಮರ್ಶೆಗೆ ತೊಡಗಿರುವುದು ಬಹಳ ನೋವಿನ ಸಂಗತಿಯಾಗಿದೆ. ಹಾಗಾಗಿ ಅನವಶ್ಯಕ ವಿಷಯವನ್ನು ವಿಮರ್ಶೆಯಲ್ಲಿ ಬರೆಯುವುದು ಸಲ್ಲ ಎಂದು ಹೇಳುತ್ತೇವೆ.

ಉದಹಾರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. 'ಕೆ.ವಿ. ಸುಬ್ಬಣ್ಣ ಅವರ ಆಯ್ದಬರಹಗಳು' ಸಂಪಾದಕ ಟಿ.ಪಿ. ಅಶೋಕ ಅವರ ಕೃತಿಗೆ ನರಹಳ್ಳಿಯವರು ಪುಸ್ತಕ ವಿಮರ್ಶೆಗೆ ಈ ಕೃತಿಯನ್ನು ತೆಗೆದುಕೊಂಡು ಹಲವಾರು ವಿವಿಧ ಲೇಖಕರ ಮತ್ತು ಕೃತಿಕಾರರ ಹೇಳಿಕೆಗಳ ಮೂಲಕ ಈ ಮೇಲಿನ ಕೃತಿಯನ್ನು ವಿಮರ್ಶೆ ಮಾಡಿದ್ದಾರೆ. ಅದನ್ನು ಈ ಕೆಳಕಂಡಂತೆ ಹೇಳಲಾಗಿದೆ.

"ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ. ಅಲ್ಲದೆ ಪಶ್ಚಿಮದಿಂದ ಹರಿದುಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ. ಜೊತೆಗೆ ದಿಗ್ಭ್ರಮೆಯನ್ನು ತಂದಿವೆ. ಈ ತಿಳುವಳಿಕೆಗಳ

ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಶಾಸ್ತ್ರ-ಕಲೆ, ಅಭಿಜಾತ-ಜಾನಪದ, ಮಾರ್ಗ-ದೇಸಿ, ಸ್ವಕೀಯ-ಪರಕೀಯ, ಪೌರಾತ್ಯ-ಪಾಶ್ಚತ್ಯ ಈ ಬಗೆಯ ದ್ವಂದ್ವಗಳ ಸಾಮರಸ್ಯ ಮತ್ತು ಸಂಘರ್ಷಗಳ ಒಡಲಿನಲ್ಲಿ ಹುಟ್ಟಿಬರುವ ತಿಳುವಳಿಕೆಯನ್ನು ಹಿಡಿದುಕೊಂಡು ಕನ್ನಡದಲ್ಲಿ ಅದಕ್ಕೆ ಅಭಿವ್ಯಕ್ತಿಯನ್ನು ಕೊಡಬೇಕಾಗಿದೆ."[೧೨]

"ರಾಜಕೀಯ ಕ್ಷೇತ್ರದಲ್ಲಿ ವಿಫಲವಾಯಿತು ಎನ್ನಿಸುವ ಆದರ್ಶಗಳೆಲ್ಲವೂ ಸುಬ್ಬಣ್ಣನ ಊರಿನಲ್ಲಿ ಒಂದು ದೀಪದಂತೆ ಸಜೀವವಾಗಿ ಉಳಿದು ಬೆಳೆದಿವೆ".[೧೩]

"ನಮ್ಮ ನಮ್ಮ ವಿವಿಧ ಪರಂಪರೆಯ ಗತಿ (ಥೀಸಿಸ್) ವಿಜ್ಞಾನ ಸಂಸ್ಕೃತಿಯ ವಿಗತಿ(ಆಂಟಿಥೀಸಿಸ್)ಯೊಡನೆ ಸಂಘರ್ಷಿಸಿ ಹೊಸ ಸಂಗತಿಯನ್ನು ಸೃಜಿಸುವ ಪ್ರಕ್ರಿಯೆ ಇಂದಿನ ಅಗತ್ಯವೆಂದು ಸುಬ್ಬಣ್ಣ ಪ್ರತಿಪಾದಿಸುತ್ತಾರೆ. ಈ ಮೂಲಕ ಪಶ್ಚಿಮದ ವಿಜ್ಞಾನ ದೃಷ್ಟಿಗೆ ಪರ್ಯಾಯವಾದ ಸಮ್ಯುಕ್ ದೃಷ್ಟಿಯೊಂದನ್ನು ಗುರುತಿಸಿಕೊಳ್ಳಲು ಸುಬ್ಬಣ್ಣ ಪ್ರಯತ್ನಿಸುತ್ತಾರೆ".[೧೪]

"ಭೂತದಿಂದ ನಾವು ನಮ್ಮ ವರ್ತಮಾನಕ್ಕೆ ಯಾವ ಪ್ರಯೋಜನ ದೊರಕಿಸಿಕೊಳ್ಳುತ್ತೇವೆ ಎನ್ನುವುದು; ನೆನ್ನೆಯ ನೆನಪಿನಿಂದ ನಾವು ಇವತ್ತು ನಮ್ಮನ್ನು ಕೆರಳಿಸಿಕೊಳ್ಳುತ್ತೇವೋ ಅಥವಾ ಅರಳಿಸಿಕೊಳ್ಳುತ್ತೇವೋ ಎನ್ನುವುದು; ಭೂತದ ಬೇತಾಳ ಎದುರು ಬಂದು ಸವಾಲು ಹಾಕಿದಾಗ ವಿವೇಕದ ಉತ್ತರಕೊಟ್ಟು ಅದನ್ನು ಮಣಿಸಿಕೊಳ್ಳುತ್ತೇವೋ ಅಥವಾ ತಪ್ಪು ಉತ್ತರಕೊಟ್ಟು ಬಲಿಯಾಗಿ ಹೋಗುತ್ತೇವೋ ಎನ್ನುವುದು."[೧೫]

"ಹಿನ್ನೆಲೆಯಲ್ಲಿ ವ್ಯಾಸಯುಗ-ಗುಪ್ತಯುಗಗಳು ಕಾಲದ ಆಳವನ್ನು ಕಲ್ಪಿಸಿಕೊಡುತ್ತಿರುವಾಗ ಅದರ ಪ್ರತ್ಯಂತರದಲ್ಲಿ ಇವತ್ತಿನ ನಮ್ಮ ಸಮೂಹ ವ್ಯವಸ್ಥೆಗಳನ್ನು ವ್ಯಕ್ತಿ ವಿಕೃತಿಗಳನ್ನು ಅವುಗಳಿಂದ ಹುಟ್ಟುವ ಸ್ವಾತಂತ್ರ್ಯ - ಸಮಾನತೆ - ಸಮಾಜ, ಕೇಂದ್ರೀಕರಣ - ವಿಕೇಂದ್ರಿಕರಣ, ನಾಯಕತ್ವ -ವಿನಾಯಕತ್ವ, ಗ್ರಾಮ - ನಗರ, ಯಂತ್ರಬಾಹುಳ್ಯ - ಯಂತ್ರ ಸಂಯಮ, ರಾಷ್ಟ್ರಪ್ರೇಮ-ಲೋಕೈಕವಾದ, ಸಮೃದ್ಧಿ - ಸರಳತೆ, ಬೋಗ - ತ್ಯಾಗ, ಹಿಂಸೆ - ಅಹಿಂಸೆ, ಸ್ಮರಣೆ - ವಿಸ್ಮರಣೆ ಮುಂತಾದ ಸ್ಥೂಲ ಸೂಕ್ಷ್ಮ ದ್ವಂದ್ವಗಳನ್ನು ಬಗೆದುಕೊಳ್ಳಲು ನೇರವಾಗಿ ಶಾಕುಂತಲ ನನಗೆ ಒದಗಿಕೊಂಡಿತು".[೧೬]

"ಅಡಿಕೆ ಬೆಳೆದುಕೊಂಡಿರುವ ನನಗೂ ಅಭಿವ್ಯಕ್ತಿ ಬೇಕು, ಭಾಷೆ ಬೇಕು, ಸಾಹಿತ್ಯ ಬೇಕು; ಸಾಹಿತ್ಯಕ್ಕೆ ನನ್ನನ್ನು ತೆರೆಯುವ ವಿಮರ್ಶೆಬೇಕು. ಆದರೆ ವಿಮರ್ಶೆಯೆನ್ನುವುದು, ಚಹರೆಯಿಲ್ಲದ ಬಟಾಬಯಲಲ್ಲಿ ಚತುರ ಚೆಂಡಾಟ ನಡೆಸುವಥರದ್ದಾದರೆ ಅದರಲ್ಲಿ ನನಗೆ ಆಸಕ್ತಿ ಹುಟ್ಟುವುದಿಲ್ಲ. ಒಂದು ವಿಶಿಷ್ಟ ಪದವು ಷೇಕ್ಸ್‌ಪಿಯರ್‌ನ ಯಾವಾವ ನಾಟಕಗಳಲ್ಲಿ ಎಷ್ಟೆಷ್ಟು ಸಲ ಬಳಕೆಯಾಗುತ್ತದೆ ಎನ್ನುವುದನ್ನು ಕಷ್ಟಪಟ್ಟು ಪಟ್ಟಿಮಾಡಿ ಓದತೊಡಗಿದರೆ ಅದು ನನಗೆ ಆಕಳಿಕೆ ತರಿಸುತ್ತದೆ.

ನಿತ್ಯಹಗಲು ನಾವು ನಡೆದಾಡುವ ಬೀದಿಯನ್ನೂ ಬದುಕನ್ನು ಮರೆತು ಸಾಹಿತ್ಯವೊಂದೇ ಜಗತ್ತು ಅನ್ನುವ ಹಾಗೆ, ಸೆಮಿನಾರ್ ಕೋಣೆಯ ನಿರ್ವಾತ ವಿಸ್ಮೃತಿಯಲ್ಲಿ – ನಿದ್ದೆ ನಡೆದಾಟದ ಥರಾ – ನಡೆವ ಚರ್ಚೆಗಳು ನನ್ನಲ್ಲಿ ವಿಚಿತ್ರ ಭಯ ಹುಟ್ಟಿಸುತ್ತವೆ. ಸಾಹಿತ್ಯ, ಕಲೆ, ವಿಮರ್ಶೆಗಳು ನನಗೆ ಬೇಕು. ಹಳ್ಳಿಯ ಮೂಲೆಯಲ್ಲಿ ಅಡಿಕೆ ಬೆಳೆದುಕೊಂಡಿರುವ ನನ್ನನ್ನು ಎಲ್ಲೋ ಪರಿಗಣಿಸಬಲ್ಲಂಥ ಹೇಗೋ ಒಳಗೊಳಿಸಿಕೊಳ್ಳಬಲ್ಲಂಥ ಸಾಹಿತ್ಯ, ಕಲೆ ವಿಮರ್ಶೆ ಬೇಕು."[೧೬]

ನರಹಳ್ಳಿಯವರು ಹೇಳಿಕೆಗಳನ್ನು ಹಾಕುತ್ತಾ, ಹಾಕುತ್ತಾ, ಕೇವಲ ಹೇಳಿಕೆಗಳ ಪರಿಚಯ ಮತ್ತು ಕೃತಿ ಪರಿಚಯ ಮಾಡುತ್ತಾ ಹೋಗುತ್ತಾರೆ, ವಿಶ್ಲೇಷಣಾತ್ಮಕವಾಗಿ ಮತ್ತು ವ್ಯಾಖ್ಯಾನಾತ್ಮಕವಾಗಿ ಚರ್ಚೆ ಮಾಡುವುದನ್ನು ಮರೆತಿದ್ದಾರೆ ಎಂದು ಹೇಳಬಹುದು.

ಖ್ಯಾತ ಲೇಖಕರ ಜೊತೆ ಮತ್ತು ಅವರ ಕೃತಿಗಳ ಜೊತೆ ಹೋಲಿಸುವುದು

ನರಹಳ್ಳಿಯವರು ಪ್ರಸ್ತುತ ಕೃತಿಯನ್ನು ಚರ್ಚಿಸುವಾಗ ಬೇರೆ ಖ್ಯಾತ ಲೇಖಕರ ಜೊತೆ ಹೋಲಿಸುವುದು, ಅವರ ಕೃತಿಗಳ ವೈಶಿಷ್ಟ್ಯವನ್ನು ಕುರಿತು ಹೇಳುವುದು ಬೇರೆ ಬೇರೆ ಲೇಖಕರ ಕೃತಿಗಳ ಪ್ರಮುಖ ಅಂಶಗಳನ್ನು ಗುರುತಿಸಿ ಅದರ ಮುಖೇನ ಪ್ರಸ್ತುತ ಕೃತಿಯನ್ನು ವಿಶ್ಲೇಷಿಸುವುದು ಮಾಡುತ್ತಾರೆ.

ಉದಾಹರಣೆಯಾಗಿ ನಾವು ನೋಡುವುದಾದರೆ ಯು.ಆರ್. ಅನಂತಮೂರ್ತಿಯವರ 'ಭವ' ಕಾದಂಬರಿಯನ್ನು ವಿಮರ್ಶಿಸುವಾಗ ಕೃತಿಯ ಕರ್ತೃವಿನ ಇತರ ಕಾದಂಬರಿಗಳ ಜೊತೆಗೆ ಅಂದರೆ ಅನಂತಮೂರ್ತಿಯವರ ಸಂಸ್ಕಾರ, ಭಾರತೀಪುರ, ಅವಸ್ಥೆ ಈ ಕಾದಂಬರಿಯಲ್ಲಿ ಬರುವ ಪಾತ್ರಗಳಾದ ಪ್ರಾಣೇಶಾಚಾರ್ಯ, ಜಗನ್ನಾಥ ಅಥವಾ ಕೃಷ್ಣಪ್ಪ ಎನ್ನುವಂತಹ ಪ್ರಾತಿನಿಧಿಕ ಪಾತ್ರಗಳಲ್ಲ ಎನ್ನುವಂತೆ ಹೇಳುತ್ತಾ 'ಭವ' ಕಾದಂಬರಿಯಲ್ಲಿ ಬರುವಂತಹ ಪಾತ್ರಗಳ ಕುರಿತು ಹೇಳುತ್ತಾರೆ. ಮತ್ತು ಇತರ ಖ್ಯಾತ ಲೇಖಕರಾದ ಶಿವರಾಮ ಕಾರಂತರ 'ಮರಳಿಮಣ್ಣಿಗೆ' ಕೃತಿಯ ಬಂಧದ ಬಗ್ಗೆ, ಭವ ಕಾದಂಬರಿಯನ್ನು ವಿಮರ್ಶಿಸುವುದನ್ನು ಕಾಣಬಹುದು.

ಉದಾಹರಣೆಯಾಗಿ ನಾವು ಇನ್ನೊಂದು ಕೃತಿಯನ್ನು ತೆಗೆದುಕೊಂಡರೆ ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿಕ್ರಾಸ್' ಕೃತಿಯೊಂದಿಗೆ ಯಶವಂತ ಚಿತ್ತಾಲರ 'ಪುರುಷೋತ್ತಮ' ಕೃತಿಯ ಬಗ್ಗೆ ಚರ್ಚಿಸಿದ್ದಾರೆ. ಕೆಲವೊಮ್ಮೆ ಅದೇ ಲೇಖಕರ ಹಿಂದಿನ ಕೃತಿಗಳಲ್ಲಿನ ವಸ್ತುವನ್ನು ಕುರಿತು ಚರ್ಚಿಸುತ್ತಾರೆ.

ಉದಾಹರಣೆಯಾಗಿ ನಾವು ಇನ್ನೊಂದು ಕೃತಿಯನ್ನು ತೆಗೆದುಕೊಂಡು ನೋಡಬಹುದು. ಗಿರೀಶ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕವನ್ನು ವಿಮರ್ಶಿಸುವಾಗ ಅದರಲ್ಲಿ ಬರುವ ವಿಶಾಖಳ ಪಾತ್ರದ ಜೊತೆಗೆ ಸಂಸ್ಕಾರ ಕಾದಂಬರಿಯಲ್ಲಿ ಬರುವ ಚಂದ್ರಿಯ ಪಾತ್ರಕ್ಕೆ ಹೋಲಿಸುವುದು

ಮತ್ತು ನೆನಪಿಸಿಕೊಳ್ಳುವುದನ್ನು ಕಾಣಬಹುದು ಮತ್ತು ಅಗ್ನಿ ಮತ್ತು ಮಳೆ ಕೃತಿಯ ಜೊತೆಗೆ ಅವರ ಮೂಲಕೃತಿ ಯವಕ್ರೀತ ಅಖ್ಯಾನದ ವಸ್ತುಬಂಧನ ಜೊತೆಗೆ ಹೋಲಿಸುವುದು. ನರಹಳ್ಳಿಯವರ ಪುಸ್ತಕ ವಿಮರ್ಶೆಯ ಇನ್ನೊಂದು ಮಾದರಿಯನ್ನು ಈ ಮೇಲಿನಂತೆ ಕಾಣಬಹುದು.

ಪುಸ್ತಕದ ಕರ್ತೃವಿನ ಅಭಿಪ್ರಾಯಗಳನ್ನು ಇಟ್ಟುಕೊಂಡು ಪುಸ್ತಕ ವಿಮರ್ಶೆಗೆ ತೊಡಗುವುದು

"ನಮ್ಮ ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಚವರ್ಗ ಮತ್ತು ಜಾತಿಗಳೂ, ಮಿಕ್ಕದನ್ನು ಮಧ್ಯಂತರ ವರ್ಗ ಮತ್ತು ಜಾತಿಗಳೂ ತಿಂದು ಹಾಕುತ್ತಿರುವುದರಿಂದ, ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರಣದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟ್ಟೊತ್ತುವ ಪಶುಸದೃಶ ಶೂದ್ರ ಸಮುದಾಯವೊಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಸಾಹಿತ್ಯಾಭಿರುಚಿಯನ್ನು ಮೇಲು ಜಾತಿ ಮತ್ತು ವರ್ಗದವರು ಸೊತ್ತಾಗಿಯೇ ಉಳಿಸುವ ಯತ್ನ ನಮ್ಮ ವಿದ್ಯಾಭ್ಯಾಸದ ಯೋಜನೆಗಳು ಮತ್ತು ವಿದ್ಯಾಭ್ಯಾಸ ಕ್ರಮ. ಭಾಷೆಯು ಹೇಗೆ ಕೇವಲ ಉಳ್ಳವರ ಸೊತ್ತು ಮಾತ್ರವೇ ಆಗತೊಡಗಿದೆಯೆಂದರೆ ಈಗ ಭಾಷೆಯಲ್ಲಿ ಆಲೋಚನೆ ಮತ್ತು ಅಭಿವ್ಯಕ್ತಿ ಬಯಸುವುದೇ ಮೋಸಗಾರಿಕೆಯಾಗುವ ಹೊತ್ತು ಬರುತ್ತಿದೆ. ಅಂಥದರಲ್ಲಿ ಸಾಹಿತ್ಯದಲ್ಲೂ ನಾವು ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡು ಸಹೃದಯ ಸ್ತೋಮವನ್ನು ಸೀಮಿತಗೊಳಿಸಿಕೊಳ್ಳುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ಥ ನಾಗರೀಕತೆಯ ಪರಾಕಾಷ್ಠೆ ಎಂದಷ್ಟೇ ಹೇಳಬಹುದು."[೧೮]

ನರಹಳ್ಳಿಯವರು ಪ್ರಸ್ತುತ ಕೃತಿಯ ಲೇಖಕರು ಬೇರೆ ಯಾವುದೋ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾರೆ. ಇದರ ಮೂಲಕ ಕೃತಿಯನ್ನು ವಿಮರ್ಶೆಗೆ ತೊಡಗಿಸಿಕೊಳ್ಳುವುದನ್ನು ಕಾಣಬಹುದು. ತೇಜಸ್ವಿಯವರ ಕಾದಂಬರಿಯನ್ನು ವಿಮರ್ಶಿಸುವಾಗ ಆರಂಭದಲ್ಲಿ ಮೂಲಭೂತವಾದಂತಹ ಪ್ರಶ್ನೆಯನ್ನು ಎತ್ತುತ್ತಾರೆ. ಲೇಖಕರು ಎತ್ತಿದ ಈ ಪ್ರಶ್ನೆಯನ್ನಿಟ್ಟುಕೊಂಡೆ ಪುಸ್ತಕ ವಿಮರ್ಶಕರು ಅದಕ್ಕೆ ಮೂಲಭೂತ ಕಾರಣವನ್ನು ಹುಡುಕಿಕೊಳ್ಳುವ ಯತ್ನದಲ್ಲಿ ಪುಸ್ತಕ ವಿಮರ್ಶೆಯಿದೆ. ಆದರೂ ಈ ಪುಸ್ತಕ ವಿಮರ್ಶೆಯೂ ಕೃತಿಯ ವಸ್ತು ಹೋದಂತೆ ನಿರೂಪಿಸಲಾಗಿದೆ. ತಮ್ಮ ಚರ್ಚೆಗೆ ಬೇಕಾದ ಸಾಲುಗಳನ್ನು, ಚಿಂತನೆಗಳನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಹಾಗಾಗಿ ಇದು ಪುಸ್ತಕ ವಿಮರ್ಶೆಯಂತೆ ಕಂಡರೂ 'ವೈಯಕ್ತಿಕ ವಿಮರ್ಶೆ'ಯೂ ಆಗಿದೆ. ಕೆಲವೊಮ್ಮೆ ಮುಖ್ಯ ವಿಚಾರಧಾರೆಗಳನ್ನು ತಿಳಿಸುವ ವಾಹಿನಿಯಾಗಿ ಕೆಲಸ ಮಾಡುತ್ತದೆ. ಈಗೆ ನರಹಳ್ಳಿಯವರು ಪುಸ್ತಕ ವಿಮರ್ಶೆಯನ್ನು ಕೈಗೊಂಡಿದ್ದಾರೆ. ಇದು ಸರಿಯಲ್ಲ ಏಕೆಂದರೆ ನೇರವಾಗಿ ಕೃತಿಯ ಆಳಕ್ಕೆ ಇಳಿದು ಕೃತಿಯನ್ನು ಶೋಧಿಸುವ ಕೆಲಸವಾಗಬೇಕು. ಮತ್ತು ಕೃತಿಯನ್ನು ಕುರಿತ ವಿವರಣೆ, ವಿಶ್ಲೇಷಣೆಗೆ ಹೆಚ್ಚಿನ ಆಧ್ಯತೆ ನೀಡದೆ ವ್ಯಾಖ್ಯಾನಕ್ಕೆ ಹೆಚ್ಚು ಆಧ್ಯತೆ ನೀಡಬೇಕೆಂದು ಹೇಳುತ್ತೇವೆ.

ಕೃತಿಯ ವಸ್ತುವನ್ನು ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ಹೇಳುವುದು

ನರಹಳ್ಳಿಯವರು ಕೃತಿಯ ವಸ್ತುವನ್ನು ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ಸಾರಾಂಶದ ರೀತಿಯಲ್ಲಿ ಪುಸ್ತಕ ವಿಮರ್ಶೆಗೆ ತೊಡಗಿರುವುದನ್ನು ಕಾಣಬಹುದಾಗಿದೆ. 'ಗಿರೀಶ ಕಾರ್ನಾಡ್'ರವರ 'ಅಗ್ನಿ ಮತ್ತು ಮಳೆ' ನಾಟಕವನ್ನು ಉದಾಹರಣೆಯಾಗಿ ಈ ಕೆಳಕಂಡಂತೆ ನೋಡಬಹುದು.

ವಿಶಾಖ : ನನಗೆ ಈಗೇನಾದರೂ ಆದರೆ ನಾನು ನನ್ನನ್ನು ಎಂದೂ ಕ್ಷಮಿಸಿಕೊಳ್ಳಲಾರೆ. ಹೋಗು ಯವಕ್ರೀತ. ನಿನ್ನ ಅಗ್ನಿ ಹೋತ್ರಕ್ಕೆ ಹೋಗು. ಬೇಡಿಕೊಳ್ಳುತ್ತೇನೆ.

ಯವಕ್ರೀತ : (ರೇಗಿ) ನಿನಗೆ ಹೇಳಿದ್ದೇನೂ ಅರ್ಥವೇ ಆಗೋದಿಲ್ಲೇನು? ನಿನಗೆ ಪ್ರಜ್ಞೆ ಬುದ್ಧಿ ಅನ್ನೋದೇ ಇಲ್ಲವೇನು? ಓಡಿ ಹೋಗದಿದ್ದರೆ ನಾನು ಆಹ್ವಾನ ಯಾಕೆ ಕೊಡುತ್ತಿದ್ದೆ?

ವಿಶಾಖ : ಆಹ್ವಾನ? ಏನು ಆಹ್ವಾನ?

ಯವಕ್ರೀತ : ಇದೆಲ್ಲ ತನ್ನಷ್ಟಕ್ಕೆ ತಾನೇ ಇಷ್ಟು ಸಲೀಸಾಗಿ ಕೂಡಿಬಂದಿದೆ ಅಂತ ತಿಳಿದುಕೊಂಡಿಯೇನು? ಅರವಸು ಸರಿಯಾದ ಹೊತ್ತಿಗೆ ಹಳ್ಳಕ್ಕೆ ಹೇಗೆ ಬಂದ? ನಿನ್ನ ಮಾವ ಈ ಹೊತ್ತೇ ಆಶ್ರಯಕ್ಕೆ ಹೇಗೆ ಮರಳಿದ?

ವಿಶಾಖ : (ಹೆದರಿ) ಸಾಕು, ಯವಕ್ರೀತ, ಇನ್ನೇನೂ ಹೇಳಬೇಡ. ನನಗೇನೂ ಗೊತ್ತಾಗಬೇಕಾಗಿಲ್ಲ. ತಪ್ಪು ನನ್ನದು, ನಾನು ನಿನ್ನ ಮಾತಿಗೆ ಸೋಲಬಾರದಿತ್ತು.

ಯವಕ್ರೀತ : ನೀನು ಒಪ್ಪಿದೆ, ಕೆಲಸ ಸುಲಭವಾಗಿ ಕೈಗೊಂಡಿತು. ನೀನು ಒಪ್ಪದೇ ಹೋಗಿದ್ದರೆ, ನಿನ್ನನ್ನು ಬಲತ್ಕಾರವಾಗಿ ವಶಮಾಡಿಕೊಳ್ಳಬೇಕಾಗುತ್ತಿತ್ತು.[೯]

ನರಹಳ್ಳಿಯವರು 'ಅಗ್ನಿ ಮತ್ತು ಮಳೆ' ಕೃತಿಯನ್ನು ಓದುಗರಿಗೆ ಸರಳವಾಗಿ ಅರ್ಥಮಾಡಿಸಲು ಹೋಗಿ ಅದು ಸಾರಂಶ ರೂಪದ್ದಾಗಿದೆ. ಒಂದು ಕೃತಿಯನ್ನು ಓದಿದರೆ ಆ ಸಾರಂಶ ತಿಳಿದು ಬಿಡುತ್ತದೆ. ಆದರೆ ವಿಮರ್ಶೆಯಲ್ಲಿ ಈ ಸಾರಾಂಶದ ಅವಶ್ಯಕತೆ ಅಗತ್ಯವೆಂಬ ಪ್ರಶ್ನೆ ಎದುರಾಗುತ್ತದೆ. ವಿಮರ್ಶೆ ಎನ್ನುವಂತಹದ್ದು ಓರೆಗೆ ಹಚ್ಚುವ ಕೆಲಸವಾಗಬೇಕು. ಓದುಗರನ್ನು ದಿಗ್ಭ್ರಮೆಗೊಳಿಸುವಂತಾಗಬೇಕು. ಓದುಗರು ಮೆಚ್ಚಿಕೊಳ್ಳುವಂತೆ ಆಗಬೇಕು. ಹಾಗಾಗಿ ವಿವರಣೆ, ಸಾರಾಂಶದ ರೀತಿಯ ಪುಸ್ತಕ ವಿಮರ್ಶೆಯನ್ನು ತೊರೆದು ವಿಶ್ಲೇಷಣಾತ್ಮಕ, ವ್ಯಾಖ್ಯಾನಾತ್ಮಕವಾದಂತಹ ಹೇಳಿಕೆಗಳ ವಿಮರ್ಶೆಯನ್ನು ತಾವು ಮಾಡಬೇಕು ಎಂದು ಹೇಳಬಹುದು.

ನರಹಳ್ಳಿಯವರ ಪುಸ್ತಕ ವಿಮರ್ಶೆಯಲ್ಲಿ ಎದ್ದು ಕಾಣುವ ಇನ್ನು ಕೆಲವು ಅಂಶಗಳೆಂದರೆ ಕೆಲವೊಮ್ಮೆ ಅನಗತ್ಯ ವಿವರಗಳ ಚರ್ಚೆ ಅಥವಾ ಲೇಖಕರ ವಿವರಗಳ ಪ್ರಸ್ತಾಪ, ಲೇಖಕರು ಆ

ಕ್ಷೇತ್ರಕ್ಕೆ ಪ್ರವೇಶಿಸಿದ ಹಿನ್ನೆಲೆ ಇತರ ಬಾಹ್ಯ ವಿವರಗಳ ನಿರೂಪಣೆ ಇವುಗಳು ಪುಸ್ತಕ ವಿಮರ್ಶೆಯಲ್ಲಿ ಅಗತ್ಯವೇ? ಪ್ರಸ್ತುತ ಲೇಖಕರು ಆ ಕ್ಷೇತ್ರಕ್ಕೆ ಪ್ರವೇಶಿಸಿದ ಹಿನ್ನೆಲೆಯನ್ನು ಸ್ಪಷ್ಟಪಡಿಸುವುದಕ್ಕಾಗಿ ಇದ್ದಕ್ಕಿದ್ದ ಹಾಗೆ ಲೇಖಕರ ಬಗೆಗೆ ಇತರ ಪ್ರಸಿದ್ಧ ಲೇಖಕರು ಹೇಳಿದ ಮಾತುಗಳನ್ನು ಉಲ್ಲೇಖಿಸುವುದನ್ನು ಕಾಣಬಹುದು. ಇಂಥ ಒಂದು ಮಾದರಿ 'ಸಾಹಿತ್ಯ ಸಂಸ್ಕೃತಿ' ಕೃತಿಯ ಎಲ್ಲಾ ಪುಸ್ತಕ ವಿಮರ್ಶೆಗಳಲ್ಲೂ ಪ್ರಾರಂಭಿಕ ಎರಡು ಪುಟದವರೆಗೂ ಕೃತಿ ಪ್ರವೇಶಿಸುವದುನ್ನು ಕಾಣುವುದಿಲ್ಲ. ಬದಲಾಗಿ ಮೇಲಿನ ವಿವರಗಳೇ ಹಾಸು ಹೊಕ್ಕಿವೆ. ಸಾಹಿತ್ಯ ಸಂಸ್ಕೃತಿಯ ಪುಸ್ತಕ ವಿಮರ್ಶೆಗಳಲ್ಲಿ ಪುಸ್ತಕ ವಿಮರ್ಶಕರ ವಿಮರ್ಶಾ ಶೈಲಿಯು ಲೇಖಕರು ಹೇಳಿದ ಮಾತುಗಳನ್ನು ಆಯ್ದುಕೊಂಡು ಅದಕ್ಕೆ ಪೂರಕವಾದ ಇತರ ಮಾತುಗಳಿಗೆ ತಮ್ಮ ಅಂಶವನ್ನು ಸೇರಿಸುವ ತುರ್ತು ಏನಿರುತ್ತದೆ? ಪ್ರತ್ಯೇಕವಾದ ಚರ್ಚೆಯಲ್ಲಿ ಏಕೆ ಗ್ರಹಿಸುವುದಿಲ್ಲ? ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ ಲೇಖಕರ ಮಾತುಗಳ ಮೂಲಕವೇ ಅವರ ಶೈಲಿಯ ಧೋರಣೆಯನ್ನು ಗುರುತಿಸುವುದು ಪುಸ್ತಕ ವಿಮರ್ಶಕರ ಒಂದು ನಿಲುವಾಗಿದೆ.

ಕೊನೆ ಟಿಪ್ಪಣಿಗಳು

೦೧. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಸಂಸ್ಕೃತಿ, ೧೯೯೮, ಪು – ೧

೦೨. ಅದೇ., ಪುಟ – ೯

೦೩. ಅದೇ., ಪುಟ – ೧೬

೦೪. ಅದೇ., ಪುಟ – ೧

೦೫. ಅದೇ., ಪುಟ – ೨

೦೬. ಅದೇ., ಪುಟ – ೨, ೩

೦೭. ಅದೇ., ಪುಟ – ೩, ೪

೦೮. ಅದೇ., ಪುಟ – ೪, ೫

೦೯. ಅದೇ., ಪುಟ – ೫

೧೦. ಅದೇ., ಪುಟ – ೬

೧೧. ಅದೇ., ಪುಟ – ೬, ೭

೧೨. ಅದೇ., ಪುಟ – ೮

೧೩. ಅದೇ., ಪುಟ – ೯

೧೪. ಅದೇ., ಪುಟ – ೧೧

೧೫. ಅದೇ., ಪುಟ – ೧೨

೧೬. ಅದೇ., ಪುಟ – ೧೩

೧೭. ಅದೇ., ಪುಟ – ೧೩

೧೮. ಅದೇ., ಪುಟ – ೩೬

೧೯. ಅದೇ., ಪುಟ – ೫೮

ಅಧ್ಯಾಯ ೩

ರಹಮತ್ ತರೀಕೆರೆ : ಪುಸ್ತಕ ವಿಮರ್ಶೆಯ ಸ್ವರೂಪ

ಅಧ್ಯಾಯ ೩

ರಹಮತ್ ತರೀಕೆರೆ : ಪುಸ್ತಕ ವಿಮರ್ಶೆಯ ಸ್ವರೂಪ

ರಹಮತ್ ತರೀಕೆರೆಯವರು ತಮ್ಮ ಪುಸ್ತಕಗಳ ವಿಮರ್ಶಾ ಕೃತಿಗೆ 'ಚಿಂತನೆಯಪಾಡು' ಎಂದು ಕರೆದಿದ್ದಾರೆ. ಅವರು ತಮ್ಮ ಇನ್ನೊಂದು ಸಾಹಿತ್ಯ ಕುರಿತ ಲೇಖನಗಳ ಸಂಗ್ರಹಕ್ಕೆ 'ಕತ್ತಿ ಅಂಚಿನ ದಾರಿ' ಎಂದು ಕರೆದಿದ್ದಾರೆ. ಪುಸ್ತಕ ವಿಮರ್ಶೆಯೆನ್ನುವುದು ಇವರ ಪಾಲಿಗೆ ಬೌದ್ಧಿಕ ಚಟುವಟಿಕೆಯ ಸಾಹಸದ ಕೆಲಸವೆಂದು ಭಾವಿಸಿದ್ದಾರೆ. ಪುಸ್ತಕ ವಿಮರ್ಶೆಯೆಂದರೆ, ಒಂದು ಪುಸ್ತಕವನ್ನು ಓದಿ, ಅದರ ಗುಣಾವಗುಣಗಳನ್ನು ಸರಳವಾಗಿ ಹೇಳುವ ದಾರಿಯನ್ನು ಇವರು ಅನುಸರಿಸುವವರಲ್ಲ. ಒಂದು ಕೃತಿಯನ್ನು ಅದರ ಚಾರಿತ್ರಿಕ ಸಂದರ್ಭದೊಡನೆ ಮತ್ತು ಕೃತಿಯ ವರ್ತಮಾನದ ಒತ್ತಡಗಳನ್ನು ಶೋಧಿಸುವ ಬೌದ್ಧಿಕ ಕೆಲಸವೆಂದು ತಿಳಿದಿದ್ದಾರೆ. ಹೀಗಾಗಿ ವಿಮರ್ಶೆಯೆನ್ನುವುದು ಸರಳವೂ ಅಲ್ಲ, ಸುಲಭವೂ ಅಲ್ಲ. ಅದೊಂದು ಗಂಭೀರ ಸೃಜನಶೀಲ ಚಟುವಟಿಕೆ ಎಂದು ಭಾವಿಸಿದ್ದಾರೆ. ಪುಸ್ತಕದ ತಿರುಳನ್ನು ಗ್ರಹಿಸುವ ಮೂಲಕ ತಮ್ಮ ಚಿಂತನೆಯ ನೆಲೆಯಲ್ಲಿ ಅದನ್ನು ಅರ್ಥೈಸುವ, ವಿವರಿಸುವ ವಿಶೇಷ ಸಾಮರ್ಥ್ಯವನ್ನು ಇವರು ಪ್ರಕಟಿಸುತ್ತಾ ಬಂದಿದ್ದಾರೆ. ಹಾಗಾಗಿ ಪುಸ್ತಕ ವಿಮರ್ಶೆಯೆಂದರೆ ಅದೊಂದು ಬೌದ್ಧಿಕ ಸೃಜನಶೀಲ ಕೆಲಸವೆಂದು ತಿಳಿದಿದ್ದರಿಂದ ತಮ್ಮ ಚಿಂತನೆಯಪಾಡನ್ನು ಕೃತಿಗಳ ಮೂಲಕ ಪ್ರಕಟಿಸುತ್ತಾ ಬಂದಿದ್ದಾರೆ. ಇಲ್ಲಿ 'ಪಾಡು' ಎಂದರೆ ಕಷ್ಟ ಎಂದೇ ಅರ್ಥ. ಈ ಕೆಲಸ ಶ್ರಮವನ್ನು, ಶ್ರದ್ಧೆಯನ್ನು ಬೇಡುತ್ತದೆ ಎಂದು ನಂಬಿದರು.

೨೦ ಪುಸ್ತಕಗಳ ಪುಸ್ತಕ ವಿಮರ್ಶೆಯನ್ನು ಒಳಗೊಂಡ ಹಲವಾರು ಸಾಹಿತ್ಯ ಪ್ರಕಾರಗಳಿಂದ ಕೂಡಿದ ಒಂದು ಪುಸ್ತಕ. ಈ ಕೃತಿಯು ಕಾದಂಬರಿ, ಆತ್ಮಚರಿತ್ರೆ, ವಿಮರ್ಶಾಲೇಖನಗಳು, ಕಥಾ

ಸಂಕಲನ, ಅಭಿನಂದನಾಗ್ರಂಥಗಳು, ಜೀವನಚರಿತ್ರೆ, ಕವನಸಂಕಲನ, ಗದ್ಯಸಂಪುಟ, ಪ್ರವಾಸಕಥನ, ವಿಮರ್ಶಾಕೃತಿಗಳು ಹೀಗೆ ಅನೇಕ ಸಾಹಿತ್ಯ ಪ್ರಕಾರಗಳಿಂದ ಕೂಡಿದೆ. ತರೀಕೆರೆಯವರ 'ಚಿಂತನೆಯ ಪಾಡು' ಕೃತಿಯನ್ನು ಅವಲೋಕಿಸಿದಾಗ ಇದು ಕೃತಿನಿಷ್ಠ ವಿಮರ್ಶೆಯೋ? ಅಥವಾ ಕರ್ತೃನಿಷ್ಠ ವಿಮರ್ಶೆಯೋ? ಎನ್ನುವ ಅನುಮಾನ ಉಂಟಾಗುತ್ತದೆ. ಕಾರಣ ಇಲ್ಲಿ ಹೆಚ್ಚಾಗಿ ಈ ಕೃತಿಯ ಕರ್ತೃ ಪ್ರತಿಯೊಂದು ಕೃತಿಯ ಕರ್ತೃವಿನ ಬಗ್ಗೆ ಮತ್ತು ಕರ್ತೃವಿನ ಪರಿಸರದ ಬಗ್ಗೆ ಮತ್ತು ಈ ಕೃತಿಯು ಹುಟ್ಟಲು ಕರ್ತೃವಿನಲ್ಲಿರುವ ಕಾರಣಗಳ ಬಗ್ಗೆ ಮತ್ತು ಆ ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ಚರ್ಚಿಸುತ್ತಾ ಹೋಗಿದ್ದಾರೆ.

ಕರ್ತೃನಿಷ್ಠ ವಿಮರ್ಶೆಗೆ ಉದಾಹರಣೆಯಾಗಿ ನೋಡುವುದಾದರೆ ಕತೆ ಹೇಳುವ ಕಾಯಕದಲ್ಲಿ (ಕುಂವೀಯವರ 'ಬರೀ ಕತೆಯಲ್ಲೋ ಅಣ್ಣಾ') ಈ ಕೃತಿಯನ್ನು ಕುರಿತು ಹೇಳುವುದಾದರೆ ಕುಂ.ವೀ.ಯವರು ಬರೆದಂತಹ' ಬರೀ ಕತೆಯಲ್ಲೋ ಅಣ್ಣಾ' ಕಥಾಸಂಕಲನದಲ್ಲಿರುವ ಕಥೆಗಳ ಬಗ್ಗೆ ವಿವರವಾಗಿ ತಿಳಿಸಿದರೆ ಸಾಕಾಗುತ್ತಿತ್ತು. ಆದರೆ ಅದಕ್ಕಿಂತ ಹೆಚ್ಚು ಆಧ್ಯತೆ ಅದನ್ನು ರಚಿಸಿದಂತಹ ಕರ್ತೃವಿಗೆ ಮತ್ತು ಕರ್ತೃವಿನ ಪರಿಚಯ ಆಧ್ಯತೆ ನೀಡಿರುವುದನ್ನು ಈ ಕೆಳಕಂಡಂತೆ ನಾವು ಕಾಣಬಹುದು. "ಕುಂ.ವೀ. ಸಣ್ಣಕಥೆಗಳ ಜೊತೆಗೆ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಸಾಧಾರಣ ಮಟ್ಟದ ಕಾದಂಬರಿಗಳು, ಅವುಗಳಲ್ಲಿ ಕೆಲವು ಸಿನಿಮಾ ಕೂಡಾ ಆದವು. ೧೯೯೮ರಲ್ಲಿ ಬಂದ ಬೃಹತ್ ಕಾದಂಬರಿ 'ಶಾಮಣ್ಣ' ಅವರ ಮಹತ್ತರ ಪ್ರಯತ್ನಗಳಲ್ಲಿ ಒಂದಾಗಿದೆ. ಈಗ 'ಅರಮನೆ' ಎಂಬ ಮತ್ತೊಂದು ಬೃಹತ್ ಕಾದಂಬರಿ ಪ್ರಕಟವಾಗುತ್ತಿದೆ. ಸಣ್ಣ ಕಥೆಗಾರರೊಬ್ಬರು, ಯಾಕೆ ಹೀಗೆ ಬೃಹತ್ ಮಹತ್ತಿಗೆ ಮಾಡಿದ ಯತ್ನಗಳೇ ಹೊರತು, ನಮ್ಮ ಮಹತ್ವದ ಕಾದಂಬರಿಗಳಾಗುತ್ತಿಲ್ಲ ಎನ್ನುವುದು ವಿಚಿತ್ರ ಸತ್ಯವಾಗಿದೆ. ಇದನ್ನೆಲ್ಲಾ ನೋಡಿದಾಗ ಕುಂ.ವೀ. ಪ್ರತಿಭೆ ಸಮರ್ಥವಾಗಿ ವ್ಯಕ್ತವಾಗುವ ಪ್ರಕಾರ ಸಣ್ಣ ಕಥೆಯೇ ಇರಬಹುದು ಅನಿಸುತ್ತದೆ. ನೂರು ಕಥೆಗಳನ್ನು ರಾಶಿ ಹಾಕಿದರೂ ಇದು ಕುಂ.ವೀ. ಯವರದೇ ಕತೆ ಎಂದು ಗುರುತಿಸುವಂತೆ ಕತೆಗಳು ತಮ್ಮ ಚಹರೆಯನ್ನು ಪಡೆದುಕೊಂಡು ಬಿಟ್ಟಿವೆ. ಕುಂ.ವೀ. ಕತೆಗಳ ಮುಖ್ಯ ಲಕ್ಷಣಗಳೆಂದರೆ ಹಳ್ಳಿಗಾಡಿನ ಜಮೀನುದಾರಿ ವ್ಯವಸ್ಥೆಯನ್ನು ಶಾಕ್ ಕೊಡುವಂತೆ ಚಿತ್ರಿಸುವುದು; ಆ ವ್ಯವಸ್ಥೆಯ ಒಳಗಿಂದಲೇ ಅದಕ್ಕೆ ಸವಾಲು ಹಾಕಿ ಅಲ್ಲಾಡಿಸುವಂತಹ ಅಧೋಲೋಕದ ಪ್ರತಿರೋಧಿ ನಾಯಕರನ್ನು ಚಿತ್ರಿಸುವುದು; ಆ ಪ್ರತಿರೋಧದ ಚಿತ್ರಣಕ್ಕಾಗಿ ವಿಡಂಬನೆಯಿಂದ ತುಂಬಿದ ಒಂದು ತಮಾಷೆಯ ಕಥನವನ್ನು ಬಳಸುವುದು."[೧]

ಉದಾಹರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. ಧಾರ್ಮಿಕನ ವೈಚಾರಿಕತೆ (ಪುತಿನ ಅವರ ಸಮಗ್ರ ಗದ್ಯ ಸಂಪುಟ) ಈ ಕೃತಿಯನ್ನು ಕುರಿತು ವಿಮರ್ಶೆ ಮಾಡುವಾಗ ಈ ಕೃತಿಯ ಕರ್ತೃವಿಗೆ ಹೆಚ್ಚಿನ ಆಧ್ಯತೆ ನೀಡಿದ್ದಾರೆ. ಅವರು ಎಲ್ಲಿ ಹುಟ್ಟಿದರು? ಅವರ ಜೀವನ

ಚರಿತ್ರೆ ಸಾಧನೆ ಅವರು ಬೆಳೆದು ಬಂದ ಬಗೆಯ ಬಗ್ಗೆ ಕೃತಿಯ ಆರಂಭದಲ್ಲಿ ವಿವರಣೆಯನ್ನು ನೀಡುತ್ತಾ ಹೋಗುತ್ತಾರೆ. ಇದರ ಅವಶ್ಯಕತೆ ಇಲ್ಲ ಎಂದು ನನಗೆ ಅನಿಸುತ್ತದೆ. ಕಾರಣವೇನೆಂದರೆ ಕೃತಿ ಹುಟ್ಟಿದ ನಂತರ ಕೃತಿಕಾರ ಸತ್ತಹಾಗೆ ಹಾಗಾಗಿ ಕೃತಿಯ ಬಗ್ಗೆ ಹೆಚ್ಚು ಗಮನ ತೋರಿ ಅಲ್ಲಿನ ಅಂಶಗಳಿಗೆ ಹೆಚ್ಚಿನ ಗಮನ ಹರಿಸಬೇಕಾಗಿತ್ತು. ಆದರೆ ಕೃತಿಯ ಕರ್ತೃವಿನ ಬಗ್ಗೆ ವಿವರಣೆ ನೀಡುವುದು ಅಷ್ಟು ಸಮಂಜಸ ಅನಿಸುವುದಿಲ್ಲ. ಈ ಮೇಲೆ ಹೇಳಿದಂತೆ ಉದಾಹರಣೆಯಾಗಿ ಈ ಕೆಳಗಿನಂತೆ ಕಾಣಬಹುದು.

"ನಮ್ಮ ಹಿರಿಯ ಲೇಖಕರು ಬದುಕಿ ಬರೆದ ಚಾರಿತ್ರಿಕ ಸಂದರ್ಭವೇ ತುಂಬ ಸಂಕೀರ್ಣವಾದುದು. ವೈಯಕ್ತಿಕವಾಗಿ ಪುತಿನ ಅವರ ಜೀನವದ ಹಿನ್ನೆಲೆಯೂ ಇಷ್ಟೇ ಸಂಕೀರ್ಣವಾಗಿದೆ. ಗುಡಿಯೊಂದರ ಪುರೋಹಿತರ ಮಗನಾಗಿದ್ದ ಅವರು ಬ್ರಿಟೀಷರ ಸೈನಿಕ ಕಛೇರಿಯಲ್ಲಿ ನೌಕರರಾದರು. ಗಾಂಧೀವಾದಿಯಾಗಿ ಖಾದಿ ತೊಡುತ್ತಿದ್ದರು. ಧಾರ್ಮಿಕರಾಗಿದ್ದು ಎಲ್ಲರಿಗೂ ಕಾಣುವಂತೆ ಹಣೆಗೆ ನಾಮ ಹಾಕುತ್ತಿದ್ದರು. ಸಂಸ್ಕೃತದಲ್ಲಿ ಪಾಂಡಿತ್ಯ ಪಡೆದಿದ್ದರು. ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದರು. ಫ್ರೆಂಚ್ ಕಲಿತಿದ್ದರು. (ಕನ್ನಡ ಲೇಖಕರಲ್ಲಿ ಫ್ರೆಂಚ್ ಕಲಿತಿದ್ದವರ ಪೈಕಿ ಮತ್ತೊಬ್ಬರೆಂದರೆ ಎ.ಎನ್. ಮೂರ್ತಿರಾವ್) ಮನೆ ಮಾತು ತಮಿಳಾಗಿದ್ದ ಅವರು ಪರಿಸರ ಭಾಷೆಯಾದ ಕನ್ನಡದಲ್ಲಿ ಬರೆದರು. ಬ್ರಿಟೀಷರ ಸೇವೆ, ಗಾಂಧಿವಾದ, ರಾಮಾನುಜಭಕ್ತಿ, ಪಾಶ್ಚಿಮಾತ್ಯ ಸಾಹಿತ್ಯದ ಓದು, ಸಂಸ್ಕೃತದಲ್ಲಿ ವಿದ್ವತ್ತು, ಫ್ರೆಂಚ್ ಅಭ್ಯಾಸ, ತಮಿಳು ತಾಯಿಮಾತು, ಕನ್ನಡದಲ್ಲಿ ಸಾಹಿತ್ಯ ರಚನೆ, ಇವೆಲ್ಲಾ ಪರಸ್ಪರ ಸೇರದ ಸಂಗತಿಗಳಂತೆ ತೋರುತ್ತವೆ. ಆದರೆ ಇವು ಒಬ್ಬ ವ್ಯಕ್ತಿಯಲ್ಲಿ ಏಕಕಾಲಕ್ಕೆ ಸಂಘರ್ಷ ಮತ್ತು ಹೊಂದಾಣಿಕೆ ಮಾಡಿಕೊಂಡು ಇದ್ದುದು ಮಾತ್ರ ಚಾರಿತ್ರಿಕವಾಗಿ ನಿಜ. ಹೊರತೋರಿಕೆಗೆ 'ಕಂದಾಚಾರಿ' ಅನಿಸುವ ಪುತಿನ, ಆಳದಲ್ಲಿ ಆಧುನಿಕ ಮನಸ್ಸಿನ ಧಾರ್ಮಿಕ ಲೇಖಕರಾಗಿದ್ದರು. ಅಂದರೆ ಅವರು ಸಂಪ್ರದಾಯವನ್ನು ಪೂರಾ ತಿರಸ್ಕರಿಸದೆ ಅದರ ಗೊಡ್ಡುತನದಿಂದ ಬಿಡುಗಡೆಯಾಗುವು; ಯುರೋಪಿನ ಆಧುನಿಕತೆಗೆ ಪೂರಾ ಶರಣಾಗದೆ ಸಂಶಯದಿಂದಲೇ ಸ್ವೀಕರಿಸುವ ಎಚ್ಚರದ ನಿಲುವನ್ನು ತೆಗೆದುಕೊಂಡರು. ಈ ಎಚ್ಚರವೇ ಅವರ ಜೀವನ ದೃಷ್ಟಿಯನ್ನು ಅದರ ಜೀವಂತಿಕೆಯನ್ನು ರೂಪಿಸಿತು."[೨]

ಕರ್ತೃನಿಷ್ಠ ವಿಮರ್ಶೆಗೆ ಇನ್ನೊಂದು ಉತ್ತಮ ಉದಾಹರಣೆ ನೋಡುವುದಾದರೆ "ಗಾಯಗಳ ಬರಹ (ಅಮೃತಾ ಪ್ರೀತಂ ಅವರ 'ರಸೀದಿ ಟಿಕೇಟು') ಪಂಜಾಬಿ ಭಾಷೆಯಲ್ಲಿ ಬರೆಯುವ ಅಮೃತಾ ಪ್ರೀತಂ, ಕವಿಯಾಗಿ ಕಾದಂಬರಿಕಾರರಾಗಿ ಅಪಾರ ಜನಮನ್ನಣೆ ಪಡೆದ ಭಾರತೀಯ ಲೇಖಕರಲ್ಲಿ ಒಬ್ಬರು. ಅವರು ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಪಂಜಾಬಿ ಲೇಖಕಿ. ಅವರ ಸಾಹಿತ್ಯವು ಭಾರತೀಯ ಭಾಷೆಗಳಲ್ಲಿ ಮಾತ್ರವಲ್ಲದೆ, ಜಗತ್ತಿನ ಅನೇಕ ಭಾಷೆಗಳಿಗೂ

ಅನುವಾದವಾಗಿದೆ. ಯುಗೋಸ್ಲಾವಿಯಾದ ಭಾಷೆಗಳಲ್ಲಿ ಅವರ ಅಭಿಮಾನಿಗಳಿದ್ದಾರೆ. ಕನ್ನಡದಲ್ಲಿ ಅಮೃತಾರ ಬಿಡಿ ಕತೆಗಳು ಬಂದಿವೆ. ಹಾ.ಮಾ. ನಾಯಕರು ಇವರ ಕವನಗಳನ್ನು ಅನುವಾದಿಸಿ (ಸುನೇರಿ) ಪ್ರಕಟಿಸಿದ್ದಾರೆ. ಅಮೃತಾ ನಮ್ಮ ಶಿವರಾಮ ಕಾರಾಂತರಂತೆ ಜಗತ್ತನ್ನೆಲ್ಲಾ ತಿರುಗಾಡಿದ ಲೇಖಕಿ: ಸಾರ್ವಜನಿಕ ಬದುಕಿನಲ್ಲಿ ಅಪಾರ ಕೀರ್ತಿ ಪಡೆದವರು. ಆದರೂ ಅವರ ಕವಿತೆ ಮತ್ತು ಆತ್ಮಕತೆಗಳಲ್ಲಿ ನೋವೇ ತುಂಬಿಕೊಂಡಿದೆ."[೩]

ಅಮೃತಾ ಪ್ರೀತಂರವರ ಆತ್ಮಚರಿತ್ರೆ 'ರಸೀದಿ ತಿಕೇಟು' ಈ ಕೃತಿಯ ಬಗ್ಗೆ ಹೆಚ್ಚಿನ ವಿಮರ್ಶೆಯನ್ನು ಮಾಡಬೇಕಿತ್ತು, ಆದರೆ ಇದನ್ನು ರಚನೆ ಮಾಡಿದಂತಹ ಅಮೃತಾರ ಬಗ್ಗೆ ವಿವರಣೆ ನೀಡುವುದು ಮತ್ತು ಅವರು ಬರೆದಂತಹ ಕೃತಿಗಳಿಗೆ ಬಂದಂತಹ ಪ್ರಶಸ್ತಿ ಬಗ್ಗೆ ಮತ್ತು ಅವರು ರಚಿಸಿದಂತಹ ಕೃತಿಗಳನ್ನು ಅನುವಾದ ಮಾಡಿದ ವಿವರಗಳ ಬಗ್ಗೆ ಮತ್ತು ಇನ್ನೊಬ್ಬ ಪ್ರವಾಸ ಕವಿ ಮತ್ತು ಕನ್ನಡದ ಪ್ರಖ್ಯಾತ ಕವಿಯಾದ ಶಿವರಾಂಕಾರಂತರಿಗೆ ಹೋಲಿಸುವುದು ಅಷ್ಟು ಸಮಂಜಸವಲ್ಲ ಎಂದು ಈ ಸಂದರ್ಭದಲ್ಲಿ ಎಂದೆನಿಸುತ್ತದೆ. ಹೀಗೆ ಮಾಡುವುದರಿಂದ ಕೃತಿಯ ಬಗೆಗಿನ ಗಮನ ಮರೆತು ಅದನ್ನು ರಚಿಸಿದಂತಹ ಕರ್ತೃವಿನ ಬಗೆಗೆ ನಾವು ಹೆಚ್ಚು ಗಮನ ಹರಿಸಬೇಕಾಗುತ್ತದೆ. ಹಾಗಾಗಿ ಕೃತಿನಿಷ್ಠ ವಿಮರ್ಶೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸುತ್ತದೆ.

ಲೇಖಕನ ಪರಿಸರದ ಬಗ್ಗೆ

ಚಿಂತನೆಯ ಪಾಡು ಕೃತಿಯು ಲೇಖಕನಿಷ್ಠ ವಿಮರ್ಶೆಯಿಂದ ಕೂಡಿದ್ದು, ಅದರ ಜೊತೆಗೆ ಲೇಖಕನ ಪರಿಸರದ ಅಂಶಕ್ಕೂ ಕೂಡ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಅದನ್ನು ನಾವು ಈ ಕೆಳಗಿನ ಉದಾಹರಣೆಯ ಮುಖಾಂತರ ನೋಡಬಹುದು. ಚಿಂತನೆಯ ಪಾಡು ಕೃತಿಯಲ್ಲಿ ಕಂಡುಬರುವ 'ತುಳುಸಂಸ್ಕೃತಿಜಗತ್ತು' (ಎಚ್. ನಾಗವೇಣಿಯವರ 'ಮೀಯುವ ಆಟ') ಕಥಾಸಂಕಲನವನ್ನು ಕುರಿತು ವಿಮರ್ಶೆ ಮಾಡುವಾಗ ಕರ್ತೃನಿಷ್ಠ ವಿಮರ್ಶೆಗೆ ಹೆಚ್ಚು ಆಧ್ಯತೆ ನೀಡಿದ್ದದಲ್ಲದೆ ಕರ್ತೃವಿನ ಪರಿಸರಕ್ಕೂ ಕೂಡ ಗಮನ ಹರಿಸಿದ್ದಾರೆ.

"ನಾನು ಕಡಲ ತಡಿಯಲ್ಲಿ ಬೆಳೆದವಳು. ತುಳು ನಾಡಿನ ಸಿರಿಯನ್ನು ಕಂಡವಳು. ನಾನು ಹುಟ್ಟಿದ್ದು ಬೆಳೆದದ್ದು ಹೊರ ಜಗತ್ತನ್ನು ನೋಡಿದ್ದು ಎಲ್ಲ ಅಲ್ಲೇ. ಭೂತ–ಕೋಲ, ಕಂಬಳ, ತಾಳಮದ್ದಲೆ, ಯಕ್ಷಗಾನ ದಿಗಿಣದ ಜೊತೆ ಕಡಲು, ತೀರ, ಅಲೆ, ಬಲೆ, ಬಿರುಮಳೆ, ಕರೆಗಾಳಿ, ಮೀನಿನ ವಾಸನೆ....... ಎಲ್ಲವೂ ನನ್ನ ಒಳ ಹೊರಗನ್ನು ತುಂಬಿಕೊಂಡಿತ್ತು. ಅದು ನನ್ನ ಒಳಗೋ ನಾನು ಅದರ ಒಳಗೋ........ ಹೀಗಿರುವಾಗ ನಾನು ಕಾರ್ಯನಿಮಿತ್ತ ಈ ಕಡಲಿಂದ ತುಳುಮಣ್ಣಿನಿಂದ ದೂರಸರಿದೆ. ನೆಲ, ನೀರು, ಆಕಾಶ, ಬಟ್ಟೆ, ರುಚಿ, ವಾಸನೆ, ಜನ ಎಲ್ಲದಕ್ಕೂ ಅರ್ಥ, ಮಹತ್ವ ಇರುತ್ತದೆಂದು ನನಗೆ ಗೊತ್ತಾಗಿದ್ದೇ ಆವಾಗ. ನನ್ನ ಕಾಲ ಕೆಳಗಿನ

ನೆಲವೇ ಕುಸಿದ ಅತಂತ್ರ ಸ್ಥಿತಿಯಲ್ಲಿ ನಾನು ತಬ್ಬಲಿಯಾಗಿ ನರಳಿದೆ. ಮಾತಿನಿಂದ ಮೌನಕ್ಕೆ, ಬಹಿರ್ಮುಖದಿಂದ ಅಂತರ್ಮುಖಕ್ಕೆ ನಾನು ನಡೆದದ್ದು ಆಗ. ಆ ಅಂತರ್ಮುಖತೆಯೇ ಇಲ್ಲಿನ ಕಥೆಗಳಿಗೆ ಜೀವ ತುಂಬಿದೆ."[೪]

"ಇವು ನಾಗವೇಣಿ ಅವರ ತಮ್ಮ ಮೊದಲ ಕಥಾ ಸಂಕಲನ 'ನಾಶನೇ ನೀರು' (೧೯೦೭) ಮುನ್ನುಡಿಯಲ್ಲಿ ಹೇಳಿಕೊಂಡಿರುವ ಮಾತುಗಳು; ಈ ಮಾತುಗಳು ಅವರ 'ಗಾಂದಿವಾದ' (೧೯೯೯) ಕಾದಂಬರಿಗೂ, ಪ್ರಸ್ತುತ ಕಥಾಸಂಕಲನ 'ಮೀಯುವ ಆಟ'ಕ್ಕೂ ಬಹು ಮಟ್ಟಿಗೆ ಅನ್ವಯಿಸುತ್ತದೆ. ಕಾರಣ. ಇವು ಕೂಡ ಅವರು 'ತುಳುಮಣ್ಣಿ'ನಿಂದ 'ದೂರ'ವಾದ ನಂತರ ನೆನಪುಗಳು ಮರುಕಳಿಸಿಕೊಂಡು ಬರೆದವು. ಹೀಗಾಗಿ ಅವರ ಬರಹದಲ್ಲಿ ತುಳುನಾಡ ಬದುಕಿನ ವಿವರಗಳು ದಟ್ಟವಾಗಿ ಬರುತ್ತವೆ. ಮಾತ್ರವಲ್ಲ ಆಪ್ತವಾದ ಮಮಕಾರದ ನಿಲುವಿನಲ್ಲಿ ಸಹ ಬರುತ್ತವೆ. ಹಾಗೆ ಬರುವುದು ಅವರ ಕಥೆಕಾದಂಬರಿಗಳ ಒಂದು ಶಕ್ತಿ ಕೂಡ. ಆದರೆ ಅನುಭವಿಗಳು ಒದಗಿಸುವುದೇ ಸಂಭ್ರಮವಾದ ಕಡೆ, ವಿವರಗಳೇ ಭಾರವಾಗಿ ಕಥನಕ್ಕೆ ಮಿತಿಯನ್ನು ತಂದಿವೆ."[೫]

"ಲೇಖಕರು ಬಾಲ್ಯ ಕಾಲದಲ್ಲಿ ಪಡೆದ ಅನುಭವ ಜಗತ್ತು ಅವರ ಕೃತಿಗಳಲ್ಲಿ ಯಾಕೆ ಮತ್ತೆ ಮತ್ತೆ ಬರುತ್ತದೆ ಎಂಬ ಪ್ರಶ್ನೆಗೆ ಬಹುಶಃ ಲೇಖಕಿಯ ಮಾತುಗಳಲ್ಲಿ ಕೊಂಚ ಉತ್ತರವಿದ್ದಂತಿದೆ. ಇವು ಕತೆ, ಕಾದಂಬರಿಯ ಹುಟ್ಟಿಗೆ ಸಂಬಂಧವಿದ್ದಂತೆ ಒಂದು ಸತ್ಯವನ್ನು ಕೂಡ ಹೇಳುತ್ತಿವೆ. ಅದೆಂದರೆ, ಪಡೆದ ಅನುಭವ ಎಷ್ಟೇ ವಿಶಿಷ್ಟವಾಗಿರಲಿ, ಅದರ ಹುಟ್ಟುವ ಪರಿಸರದೊಳಗೆಯೇ ಬದುಕುವಾಗ ಅದರ ಮಹತ್ವ ಗೊತ್ತಾಗುವುದಿಲ್ಲ; ಅದನ್ನು ಸೃಜನಶೀಲವಾಗಿ ಬಳಸುವುದಕ್ಕೆ ಬೇಕಾದ ಪ್ರೇರಣೆಯೂ ಒದಗುವುದಿಲ್ಲ. ಆ ಅನುಭವ ಲೋಕದಿಂದ ಅಗಲಿದಾಗ ಅದರ ಸೆಳೆತ ಶುರುವಾಗುತ್ತದೆ; ಅನುಭವಗಳಿಗೆ ಕತೆಕಾದಂಬರಿಗಳ ಆಕಾರ ಕೊಡುವುದಕ್ಕೆ ಒತ್ತಡ ನಿರ್ಮಾಣವಾಗುತ್ತದೆ. ಹಾಗಾದರೆ, ಸೃಜನಶೀಲ ಬರಹಕ್ಕೆ ಅನುಭವ ಒದಗುವ ಪರಿಸರದಿಂದ ಅಗಲಿಕೆ ಮತ್ತು ದೂರ ಇರುವಿಕೆಯು ಅನಿವಾರ್ಯವೇ? ನಮ್ಮ ಬಹುತೇಕ ಲೇಖಕರು ಅನುಭವ ಪ್ರಪಂಚದಿಂದ 'ದೂರ' ಸರಿದವರು; ದೂರ ಸರಿದ ಕಾರಣಕ್ಕಾಗಿಯೇ ಅದನ್ನು ಮತ್ತೆ ಆವಾಹನೆ ಮಾಡಿ ಕಟ್ಟುವವರು."[೬]

ಒಂದು ಕೃತಿಯ ವಿಮರ್ಶೆಗೆ ಬಂದಾಗ ಆ ಕೃತಿಯ ತಾತ್ವಿಕ ಚಿಂತನೆಯನ್ನು ಕುರಿತು ವಿಮರ್ಶೆ ಮಾಡುವುದು ಒಳ್ಳೆಯದು. ಕೃತಿಯನ್ನು ರಚಿಸಿದಂತಹ ಕರ್ತೃವಿನ ಪರಿಸರದ ಬಗ್ಗೆ ಬರೆಯುತ್ತಾ ಹೋದರೆ ವಿಮರ್ಶೆಯು ಹೊಳಪನ್ನು ಕಳೆದುಕೊಳ್ಳುವುದರ ಮೂಲಕ ಪುಟ ಮೀರುವ ವಿಮರ್ಶೆ ಎಂದೆನಿಸಿಕೊಳ್ಳುತ್ತದೆ. ಹಾಗಾಗಿ ವಿಮರ್ಶೆ ಮಾಡುವಾಗ ಕೃತಿನಿಷ್ಠ ವಿಮರ್ಶೆ ಮಾಡುವುದು ಒಂದು ಉತ್ತಮ ವಿಮರ್ಶೆ ಎನಿಸಿಕೊಳ್ಳುತ್ತದೆ.

"ಅಮೃತಾರ ವೈಯಕ್ತಿಕ ಜೀವನವೂ ಹಲವಾರು ವೈಪರಿತ್ಯಗಳಿಂದ ಕೂಡಿತ್ತು. ಅವರು ಪ್ರೇಮಿಸಿದ್ದು ಯಾರನ್ನೋ, ಲಗ್ನವಾಗಿದ್ದು ಮತ್ಯಾರನ್ನೋ, ಬಾಳಿನ ಹೆಚ್ಚುಕಾಲ ಕಳೆದಿದ್ದೂ ಯಾರ ಜೊತೆಯೋ – ಪ್ರತಿಭಾ ನಂದಕುಮಾರ್ ಅವರ 'ನಾವು ಹುಡುಗಿಯರೇ ಹೀಗೆ' ಕವನದ ನಾಯಕಿಯಂತೇ ತಾವು ಮದುವೆಯಾದ ಗಂಡ ಪ್ರೀತಮ್ ಸಿಂಗ್, ತಮ್ಮ ಮನೋಭಾವಕ್ಕೆ ಸರಿಹೊಂದುವುದಿಲ್ಲ ಎಂಬ ಕಾರಣದಿಂದ ಅಮೃತಾ ವಿಚ್ಛೇದನ ಕೊಟ್ಟರು. ಅವರು ಉರ್ದು ಲೇಖಕ ಸಾಹಿರ್‌ಲೂದಿಯಾನ್ವಿ ಅವರನ್ನು ಗಾಢವಾಗಿ ಪ್ರೇಮಿಸುತ್ತಿದ್ದರು. ಸಾಹಿರ್ ಅವರಿಗೆ ದಕ್ಕಲಿಲ್ಲ. ಕೊನೆಗೆ ಅಮೃತಾಗೆ ಬದುಕಿನಲ್ಲಿ ಸಿಕ್ಕ ಸಂಗಾತಿ, ಕಲಾವಿದ ಅಮ್ರೋಜ್. ತಮ್ಮ ಬಗ್ಗೆ ಜಗತ್ತು ಏನೆನ್ನುತ್ತದೆ ಎಂದು ಲೆಕ್ಕಿಸದೆ ಅಮೃತಾ ಬದುಕಿದರು; ಅದಕ್ಕೆ ಪ್ರತಿಯಾಗಿ ಬಂದ ಟೀಕೆಗೆ ನೊಂದುಕೊಂಡರು. ನೊಂದ ನೋವನ್ನೆಲ್ಲ ಸಾಹಿತ್ಯದಲ್ಲಿ ತೋಡಿಕೊಂಡರು. ನಮ್ಮ ಅಕ್ಕಮಹಾದೇವಿಯಂತೆ."[೭]

"ಅಮೃತಾ ತಮ್ಮ ಜೀವನದಲ್ಲಿ ಗಂಡನಾಗಿ, ಪ್ರೇಮಿಯಾಗಿ, ಸಂಗಾತಿಯಾಗಿ ಕಾಣಿಸಿಕೊಳ್ಳುವ ಪುರುಷರೂ ಚಿತ್ರಿಸುವ ಬಗೆ ವಿಶಿಷ್ಟವಾಗಿದೆ. ಅವರು ತಮ್ಮ ಜೀವನದಲ್ಲಿ ಬರುವ ಪುರುಷರ ಬಗ್ಗೆ, ಅವರ ಜೊತೆಗಿನ ದೈಹಿಕ ಸಂಬಂಧಗಳನ್ನು ಚಪ್ಪರಿಸುವ ದಾಟಿಯಲ್ಲಿ ಹೇಳುವುದಿಲ್ಲ; ಮಾನವೀಯ ಘನತೆಯಿಂದ ಹೇಳುತ್ತಾರೆ. ಇದುವೇ 'ರಸೀದಿ ತಿಕೇಟು'ಗೂ ಅವರ 'ಟೈಮ್ ಪಾಸ್' ಕೃತಿಗೂ ಇರುವ ತಾತ್ವಿಕ ವ್ಯತ್ಯಾಸ. ಅಮೃತಾರ ಬದುಕಿನಲ್ಲಿ ಹಾಯುವ ಪುರುಷರ ಜೊತೆಗಿನ ಅನುಭವಗಳು ತೀವ್ರವಾಗಿವೆ. ಸಾಂಕೇತಿಕವಾಗಿವೆ. ಕಾವ್ಯಾತ್ಮಕವಾಗಿವೆ."[೮]

"ಲಾಹೋರಿನಲ್ಲಿ ಸಾಹಿರ್ ಕಾಣಲು ಬಂದಾಗಲೆಲ್ಲಾ ಅವನು ನನ್ನ ಮೌನದಿಂದಲೇ ಸಿಡಿದ ಒಂದು ತುಣುಕಾಗಿ ಕುರ್ಚಿಯಲ್ಲಿ ಕುಳಿತುಕೊಂಡು ಹೊರಟು ಹೋಗುತ್ತಿದ್ದ. ಅವನು ಮೌನವಾಗಿ ಸಿಗರೇಟ್ ಸೇದುತ್ತಾ ಕುಳಿತುಕೊಳ್ಳುತ್ತಿದ್ದ. ಅರ್ಧದಷ್ಟು ಸೇದಿ ಸಿಗರೇಟನ್ನು ಬೂದಿ ಬಟ್ಟಲಲ್ಲಿ ಒತ್ತಿಬಿಡುತ್ತಿದ್ದ. ಅವನು ಹೊರಟುಹೋದ ಮೇಲೆ ಸಿಗರೇಟಿನ ದೊಡ್ಡ ದೊಡ್ಡ ತುಂಡುಗಳು ಮಾತ್ರ ಕೋಣೆಯಲ್ಲಿ ಉಳಿದಿರುತ್ತಿದ್ದವು. ಒಮ್ಮೆ....... ಅವನ ಕೈಯನ್ನು ಒಂದು ಸಲವಾದರೂ ಸ್ಪರ್ಶಿಸಬೇಕೆನಿಸಿತು. ನನ್ನೆದುರು ನನ್ನವೇ ಆದ ಸಂಸ್ಕಾರಗಳ ಒಂದು ಗೋಡೆಯಿತ್ತು. ಅದನ್ನು ದಾಟುವುದು ಸಾಧ್ಯವಾಗುತ್ತಿರಲಿಲ್ಲ.......... ಆಗಲೂ ಚಮತ್ಕಾರದ ಮೊರೆಹೊಕ್ಕು ಅವನು ಹೊರಟು ಹೋದ ಮೇಲೆ ಸಿಗರೇಟಿನ ತುಂಡುಗಳನ್ನು ಜೋಪಾನವಾಗಿ ಬೀರುವಿನಲ್ಲಿ ಕಾದಿಡ ತೊಡಗಿದೆ. ಅನಂತರ ಒಂದೊಂದು ತುಂಡನ್ನು ಏಕಾಂತದಲ್ಲಿ ಕೂತು ಉರಿಸುತ್ತಿದ್ದೆ. ಬೆರಳ ಸಂದಿಯಲ್ಲಿ....... ಒಡಿಯುತ್ತಿದ್ದಾಗ ಅವನ ಕೈಯನ್ನೇ ಸ್ಪರ್ಶಿಸಿದಂತೆ ಅನಿಸುತ್ತಿತ್ತು."........[೯]

ಅಮೃತಾರವರ ಆತ್ಮಚರಿತ್ರೆಯಾದ 'ಗಾಯಗಳ ಬರಹ' (ರಸೀದಿ ತಿಕೇಟು)ದಲ್ಲಿ ಅವರನ್ನು

ಕುರಿತು ವಿಮರ್ಶೆ ಮಾಡುವುದು ಸರಿಯಲ್ಲ ಅವರು ಬರೆದಂತಹ ಕೃತಿಯ ತಾತ್ವಿಕ ವಿಚಾರ ಮತ್ತು ಅದು ಸಮಾಜಕ್ಕೆ ನೀಡುವ ಸಂದೇಶದ ಬಗ್ಗೆ ಒಳಿತು, ಕೆಡುಕುಗಳ ಬಗ್ಗೆ ಕುರಿತು ಕೃತಿಯನ್ನು ವಿಮರ್ಶೆ ಮಾಡುವುದು ಒಳ್ಳೆಯದು, ಆದರೆ ಅಮೃತಾರವರ ಜೀವನದ ಬಗ್ಗೆ ಅವಳು ಅನುಭವಿಸಿದ ದಾಂಪತ್ಯ ಜೀವನದ ಬಗ್ಗೆಯೇ ಪುಟಗಟ್ಟಲೆ ಹೇಳಿಕೆ ಕೊಡುವುದು ಸರಿಯಲ್ಲ ಎಂದು ಹೇಳುತ್ತೇವೆ.

"ಪುಣೇಕರ್! ಈ ಹೆಸರಿನಲ್ಲಿರುವ ಊರೇ ಅವರ ಮರಾಠಿ ಮೂಲವನ್ನು ಸೂಚಿಸುತ್ತದೆ. ಶಂಬಾ ಹಾಗೂ ಬೇಂದ್ರೇ ಕೂಡ ಮರಾಠಿ ಸಂಸ್ಕೃತಿ ಮೂಲದವರು. ದೇಶದ ತುಂಬ ತಿರುಗಾಡಿ ಕೆಲಸ ಮಾಡಿದ ಪುಣೇಕರ್, ಬಹುಕಾಲ ಮುಂಬೈಯಲ್ಲಿದ್ದರು. ಆಂಗ್ಲ ಅಧ್ಯಾಪಕರೂ ಸಂಸ್ಕೃತ ವಿದ್ವಾಂಸರೂ ಕನ್ನಡ ಲೇಖಕರೂ ಆದ ಅವರು, ಹಲವು ಶಕ್ತಿಗಳ ಸಂಗಮದಂತಿದ್ದರು. ಅವರು ಇಂಗ್ಲೀಷಿನಲ್ಲಿ ಇಪ್ಪತ್ತರಷ್ಟು ಕೃತಿಗಳನ್ನು ರಚಿಸಿದರು. ಅವುಗಳ ಮೌಲ್ಯ ಮತ್ತು ಮಹತ್ವವು ಏಕರೂಪಿಯಾಗಿಲ್ಲ. ಆದರೆ ಕನ್ನಡದ ಮಟ್ಟಿಗೆ ಅವರು ಹೆಸರಾಗಿರುವುದು ತಮ್ಮ ವಿಮರ್ಶೆ ಮತ್ತು ಕಾದಂಬರಿಗಳಿಂದ."[೧೦]

ಸುಡುನೈಜಕತೆಯ ಪರಿಣಾಮ (ಶಂಕರ ಮೊಕಾಶೆ ಪುಣೇಕರ ಅವರ ಗಂಗವ್ವ ಗಂಗಾಮಾಯಿ) ಈ ಕೃತಿಯಲ್ಲಿ ಪುಣೇಕರ್! ಈ ಹೆಸರಿನಲ್ಲಿರುವ ಊರೆ ಅವರ ಮರಾಠಿ ಮೂಲವನ್ನು ತಿಳಿಸುತ್ತದೆ ಎನ್ನುವಂತಹದ್ದು, ಕರ್ತೃವಿನ ಪರಿಸರದ ಬಗ್ಗೆ ತಿಳಿಸುತ್ತದೆ. ಹಾಗೆಯೇ ಕರ್ತೃವಿನ ಪರಿಸರಕ್ಕೆ ಸಂಬಂಧಪಟ್ಟಂತಹ ಇನ್ನಿತರ ಲೇಖಕರನ್ನು ಮತ್ತು ಕವಿಗಳನ್ನು ಅವರಿಗೆ ಹೋಲಿಸುತ್ತಾ ಅವರ ಪರಿಸರದ ಬಗ್ಗೆ ಹೆಚ್ಚು ವಿವರವನ್ನು ನೀಡುತ್ತಾ ವಿಮರ್ಶೆಯನ್ನು ಬೆಳೆಸುತ್ತಾ ಹೋಗಿದ್ದಾರೆ. ನಂತರ ಅವರು ವಾಸಿಸುವ ಸ್ಥಳಗಳ ಹೆಸರನ್ನು ನೋಂದಾಯಿಸುವುದು ಅವಶ್ಯವಿಲ್ಲ ಎಂದೆನಿಸುತ್ತದೆ.

ಈ ಕೃತಿ ಹುಟ್ಟುವ ಬಗೆಯನ್ನು ಅಥವಾ ಕರ್ತೃವಿನ ಕಾರಣ

"ಅಂದು ಗೆಳೆಯ ಎನ್.ಕೆ. ಮೋಹನರಾಂ 'ಸತ್ತವರ ನೆರಳು' ನಾಟಕದೊಂದಿಗೆ ಇದ್ದಾಗ, 'ನನ್ನನ್ನೂ ಕೂಡ ನಾಟಕಕ್ಕೆ ಸೇರಿಸಿಕೊಳ್ಳಿ' ಎಂದು ಕೇಳಿದೆ. ಅವನು ನನ್ನನ್ನು ಮೇಲಿನಿಂದ ಕೆಳಗಿನವರೆಗೆ ನೋಡಿದ. ನನ್ನ ಕಾಲನ್ನು ವಿಶೇಷವಾಗಿ ಗಮನಿಸಿ 'ರಂಗ ಭೂಮಿಗೆ ನಿನ್ನಂಥವನ ಸೇರ್ಪಡೆ ಸಾಧ್ಯವೇ ಇಲ್ಲ' ಅಂದು ಬಿಟ್ಟ. ಈಗ ನಾನು ಏನು ಹೇಳಬಹುದು? ಕನ್ನಡ ರಂಗಭೂಮಿಯಲ್ಲಿ ಸಂಘಟಕರಾಗಿ ನಿರ್ದೇಶಕರಾಗಿ ಪ್ರಸಿದ್ಧರಾದ ಸಿ.ಜಿ. ಕೃಷ್ಣಸ್ವಾಮಿಯವರ ಆತ್ಮಕಥೆ ಶುರುವಾಗುವುದು ಇಂತಹದೊಂದು ಅಪಮಾನದ ನೆನಪಿನಿಂದ. ಈ ನೆನಪಿನ ಕೊನೆಯಲ್ಲಿ ಒಂದು ಪ್ರಶ್ನೆಯಿದೆ. ಈ ಪ್ರಶ್ನೆಗೆ ಕೊಟ್ಟ ಉತ್ತರದ ರೂಪದಲ್ಲಿ ಇಡೀ ಆತ್ಮಕಥೆ ಬಿಚ್ಚಿಕೊಳ್ಳುತ್ತಾ

ಹೋಗುತ್ತದೆ. ಈ ಪ್ರಶ್ನೆಯಲ್ಲಿ ಕೆಚ್ಚಿದೆ; ಪ್ರತಿಕೂಲವಾದ ಸನ್ನಿವೇಶಗಳಲ್ಲಿ ನಾನು ಬೆಳೆದೆ ಮತ್ತು ಸಾಧನೆ ಮಾಡಿದೆ ಎಂಬ ಗೆಲುವಿನ ದನಿಯಿದೆ. ಕೃತಿಯ ಶೀರ್ಷಿಕೆಯಾಗಿರುವ 'ಕತ್ತಲೆ ಬೆಳದಿಂಗಳೊಳಗೆ' ಎಂಬುದೇ ಒಂದು ರೂಪಕವಾಗಿದ್ದೂ, ಲೇಖಕರ ಸೋಲು ಗೆಲುವುಗಳ ದನಿಯನ್ನು ಇಟ್ಟುಕೊಂಡಿರುವಂತಿದೆ."[೧೧]

ರಂಗ ಕರ್ಮಿಯ ಸಂಸಾರ (ಸಿ.ಜಿ.ಕೆ.ಯವರ ಕತ್ತಾಲೆ ಬೆಳದಿಂಗಳೊಳಗೆ) ಈ ಕೃತಿಯಲ್ಲಿ ಆರಂಭದ ಸಾಲುಗಳಲ್ಲಿಯೇ ಈ ಕೃತಿ ಹುಟ್ಟುವ ಬಗೆ ಮತ್ತು ಲೇಖಕರ ಕಾರಣಗಳನ್ನು ಕೊಡುತ್ತಾ ಹೋಗಿದ್ದಾರೆ. ಈ ಕೃತಿ ಅಥವಾ ಆತ್ಮಚರಿತ್ರೆ ಹುಟ್ಟಲು ಕಾರಣ ಅವರು ಪಟ್ಟಂತಹ ಕಷ್ಟ ಮತ್ತು ನೋವುಗಳು ಕಾರಣ ಅವರೊಬ್ಬ ನಾಟಕಕಾರರಾಗಲೂ ಅವರಿಗೆ ತಮ್ಮ ಕಾಲು ಸರಿ ಇಲ್ಲದಿರುವುದು ಆದ ಕಾರಣ ನಾಟಕಕ್ಕೆ ಅವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ ಹಾಗಾಗಿ ಅವರು ತಮ್ಮಲ್ಲಿರುವ ಪ್ರತಿಭೆಯನ್ನು ತೋರಿಸಿ ಈ ನಾಟಕ ರಂಗದಲ್ಲಿ ಅಪಾರ ಸಾಧನೆ ಮಾಡಿ ಮೇಲಕ್ಕೆ ಬಂದಿರುವಂತಹದ್ದೂ ಈ ಮೇಲಿನ ಸಾಲುಗಳಲ್ಲಿಯೇ ಕಾಣಿಸುತ್ತದೆ.

"ಒಮ್ಮೆ ಪಂಜಾಬಿ ಲೇಖಕಿ ಅಮೃತಾ ಪ್ರೀತಂ ಆತ್ಮಕತೆ ಬರೆಯುವ ಆಶಯವನ್ನು ಸಹಲೇಖಕ ಖುಶವಂತ ಸಿಂಗ್ ಎದುರು ತೋಡಿಕೊಂಡರಂತೆ ಅದಕ್ಕೆ ಖುಶವಂತ್ ತಮಾಶೆಯಿಂದ 'ನಿನ್ನ ಜೀವನದಲ್ಲಿ ಆತ್ಮಕಥೆ ಬರೆಯುವಂತಹದ್ದು ಏನಿದೆ? ಇರುವಷ್ಟನ್ನು ರಸೀದಿ ತಿಕೇಟಿನ ಹಿಂಬದಿಯಿರುವ ಜಾಗದಲ್ಲಿ ಬರೆಯಬಹುದು' ಎಂದರಂತೆ. ಈ ಕೆಣಕು ಮಾತನ್ನೇ ಪ್ರೇರಣೆಯಾಗಿ ಮಾಡಿಕೊಂಡು ಅಮೃತಾ ತಮ್ಮ ಆತ್ಮಕಥೆ ಬರೆದರು ಮತ್ತು ಅದಕ್ಕೆ 'ರಸೀದಿ ತಿಕೇಟು' ಎಂದು ಹೆಸರಿಟ್ಟರು. ಹೀಗಾಗಿ ಈ ಆತ್ಮಕಥೆ ಒಂದರ್ಥದಲ್ಲಿ ಖುಶವಂತರ ಸವಾಲಿಗೆ ಕೊಟ್ಟ ಜವಾಬು. ಈ ಘಟನೆಯು, ಪ್ರತಿಕೂಲ ಪರಿಸರವನ್ನೇ ಎದುರಾಳಿಯನ್ನಾಗಿ ಮಾಡಿಕೊಂಡು ಕ್ರಿಯಾಶೀಲವಾಗುವ ಲೇಖಕಿಯ ಛಲವನ್ನು ಸೂಚಿಸುತ್ತಿದೆ. ಜೊತೆಗೆ, ಹೆಣ್ಣನ್ನು ಕುರಿತು ಸಮಾಜದಲ್ಲಿ ವ್ಯಾಪಕವಾಗಿರುವ ಪುರುಷವಾದಿ ಗ್ರಹಿಕೆಗಳನ್ನು ಸಹ ಹೇಳುತ್ತಿದೆ. ಖುಷವಂತರ ಮಾತು ಸಹಜವಾಗಿ ಮಾಡಿದ ವಿನೋದ ಆಗಿದ್ದಿರುವ ಸಾಧ್ಯತೆಯಿದೆ. ಆದರೂ ಅದು ಸಹಜವೆಂಬಂತೆ ಬೇರೂರಿರುವ ಮನೋಧರ್ಮದ ಸಂಕೇತವೂ ಆಗಿದೆ. ಇಂತಹ ಮನೋಧರ್ಮದ ವಿರುದ್ಧದ ಸೆಣಸಾಟದಲ್ಲಿ ಅಮೃತಾರ ಸೃಜನಶೀಲತೆ ರೂಪುಗೊಂಡಿತು."[೧೨]

ಗಾಯಗಳ ಬರಹ (ಅಮೃತಾ ಪ್ರೀತಂ ಅವರ 'ರಸೀದಿ ತಿಕೇಟು') ಈ ಕೃತಿಯಲ್ಲಿ ಆರಂಭದ ಸಾಲುಗಳಲ್ಲಿಯೇ ಈ ಕೃತಿಯನ್ನು ರಚಿಸಲು ಲೇಖಕಿ ಕಾರಣವನ್ನು ಕೊಡುತ್ತಾ ಹೋಗುತ್ತಾಳೆ ಮತ್ತು ಈ ಆತ್ಮಚರಿತ್ರೆ ಬರೆಯಲು ಸಮಾಜವು ಕಾರಣ ಎಂಬುದನ್ನು ನೇರವಾಗಿ ಹೇಳದೆ ತಾನು ಆತ್ಮಚರಿತ್ರೆಯಲ್ಲಿ ತೋರಿಸಿದ್ದಾರೆ. ಪುರುಷ ಪ್ರಧಾನ ಸಮಾಜದ ಎದುರು ಹೆಣ್ಣು

ಹೇಗೆ ಇರಬೇಕು ಅವರು ತಮ್ಮ ಯಾವ ದೃಷ್ಟಿಕೋನದಿಂದ ನೋಡಿದರು ಎಂಬುದನ್ನು ಹೇಳಲು ಪ್ರಯತ್ನಿಸಿದ್ದಾರೆ. ಕೃತಿಯ ಹುಟ್ಟುವಿಕೆಗೆ ಮತ್ತು ಕಾರಣಗಳಿಗೆ ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ನಮಗೆ ತಿಳಿದುಬರುತ್ತದೆ.

"ಭಾರತೀಯ ಸಮಾಜದಲ್ಲಿ ಪ್ರವಾಸ ಅಥವಾ ಯಾತ್ರೆ ನಿಷಿದ್ದವೂ ಹೌದು, ಪವಿತ್ರವೂ ಹೌದು. ಒಂದು ಕಾಲಕ್ಕೆ ಸಮುದ್ರ ದಾಟಿ ವಿದೇಶ ಯಾತ್ರೆ ಮಾಡುವುದು ಭಾರತದ ಮೇಲು ಜಾತಿಯ ಮಡಿವಂತ ಸಮುದಾಯಗಳ ಪಾಲಿಗೆ ಅಪವಿತ್ರವಾಗಿತ್ತು; ಆದರೆ ಕೆಲವು ಸಮುದಾಯಗಳಿಗೆ ಧಾರ್ಮಿಕ ಕ್ಷೇತ್ರಗಳ ಯಾತ್ರೆಗೆಂದು ಸಮುದ್ರ ದಾಟಿಯೇ ಹೋಗಬೇಕಾಗಿರುವುದರಿಂದ, 'ವಿದೇಶಿ'ಯಾತ್ರೆ ಪವಿತ್ರವೂ ಅನಿವಾರ್ಯವೂ ಆಗಿತ್ತು. ಇವುಗಳ ಜೊತೆಗೆ ಯೋಗ ಸಾಧಕರಿಗೂ, ಯತಿಗಳಿಗೂ ಚಾರಣವೂ ಮಹತ್ವದ ಆಚರಣೆಯಾಗಿತ್ತು, ಬೌದ್ಧಯತಿಗಳು, ಜೈನಮುನಿಗಳು, ಅವಧೂತರು, ಸೂಫಿಗಳು, ಸಿದ್ಧರು, ಬಾವುಲರು, ಜೋಗಿಗಳು, ಮಹಾ ತಿರುಗಾಟಗಾರರು, ಗುರು ಪಂಥಗಳಲ್ಲಿ ಗುರುವನ್ನು ಹುಡುಕಿಕೊಂಡು ಶಿಷ್ಯರು, ಶಿಷ್ಯರನ್ನು ಅರಸಿಕೊಂಡು ಗುರುಗಳು ಅಲೆದಾಟ ಮಾಡಿರುವ ನೂರಾರು ಕಥೆಗಳಿವೆ. ಭಾರತದ ಯೋಗಿಗಳು ಮಾಡುವ ತಿರುಗಾಟಗಳು ಸೋಜಿಗ ಹುಟ್ಟಿಸುತ್ತವೆ. ಗುರುನಾನಕರು ಇಡೀ ಏಷ್ಯ ಖಂಡದ ತಿರುಗಾಟ ಮಾಡುತ್ತಾರೆ. ಮಂಗಳೂರಿನ ಕದ್ರಿ ಮಂಜುನಾಥ ಗುಡಿಯಲ್ಲಿ ನಾಥಪಂಥದ ಪ್ರಮಥನಾದ ಗೋರಖನಾಥನ ವಿಗ್ರಹವಿದ್ದರೂ, ಅದನ್ನು ನಡೆಯುವ ಭಂಗಿಯಲ್ಲಿ ಕಟೆಯಲಾಗಿದೆ. ಶಂಕರರು ಕೇರಳದ ಕಾಲಟಿಯಿಂದ ಹೊರಟು ಬದರಿಯ ತನಕ ಭಾರತವನ್ನು ಅಡ್ಡ ಹಾಯುತ್ತಾರೆ. ಮೈಸೂರು ಸೀಮೆಯ ಮಂಟೆಸ್ವಾಮಿ ಇಂತಹ ಅಲೆದಾಟ ಮಾಡುವುದನ್ನು 'ಮಂಟೆಸ್ವಾಮಿ ಕಾವ್ಯ' ಸೂಚಿಸುತ್ತದೆ. ಅಲ್ಲಮ ಪ್ರಭು ಕೂಡ ತಿರುಗಾಟಗಾರ. ಆತ ಶೂನ್ಯ ಸಿಂಹಾಸನ ಏರಲು ದೊಡ್ಡದೊಂದು ತಿರುಗಾಟದಿಂದ ಅದೇ ತಾನೇ ಬಂದದ್ದನ್ನೂ 'ಶೂನ್ಯ ಸಂಪಾದನೆ' ಚಿತ್ರಿಸುತ್ತದೆ. ನಮ್ಮ ಸಾಮಾನ್ಯ ಜನ ಕೂಡ ತಿರುಪತಿ, ಶ್ರೀಶೈಲ, ಕಾಶಿ ಹೀಗೆ ತಮ್ಮ ದೈವಗಳಿರುವ ಜಾಗಕ್ಕೆ ತಿರುಗಾಟ ಮಾಡಿಕೊಂಡು ಬಂದಿದ್ದಾರೆ. ಆದರೆ ಧಾರ್ಮಿಕ ತಿರುಗಾಟಕ್ಕೆ ಮಿತಿಗಳಿವೆ. ಅಲ್ಲಿನ ನೋಟಕ್ಕೂ ಪರಿಮಿತಿಗಳಿವೆ. ರಾಜ ಪ್ರಭುತ್ವಗಳ ಕಾಲದಲ್ಲಿ ಸೈನ್ಯದ ಜೊತೆ ಹೋಗುತ್ತಿದ್ದ ಕವಿಗಳೂ ಚರಿತ್ರೆಕಾರರೂ ಪ್ರವಾಸಕಥನ ಬರೆದಿದ್ದಾರೆ. ಆದರೆ ಪ್ರಭುತ್ವದ ಹಿಂಸೆಯ ಭಾಗವಾಗಿರುತ್ತಿದ್ದ ಈ ಪ್ರವಾಸ ಕಥನ ರಕ್ತಸಿಕ್ತತೆಯನ್ನು ಮರೆಮಾಚುತ್ತದೆ ಅಥವಾ ಅದನ್ನು ಸಾಹಸವೆಂದು ಕೊಂಡಾಡುತ್ತದೆ. ವ್ಯಾಪಾರ ಕೂಡ ದೂರದೂರ ಸೀಮೆಯ ಜೊತೆಗೆ ಸಂಪರ್ಕ ಸಾಧ್ಯವಾಗಿಸುತ್ತದೆ. ಕಡಲ ತೀರದ ಸೀಮೆಯ ಕೇರಳ ಮತ್ತು ಬಂಗಾಳಗಳಲ್ಲಿ ಇಂತಹ ಸಾಹಸಿಗಳ ಕಥನಗಳಿವೆ. ಕಡಲ ತಡಿಯ ದೇಶಗಳಲ್ಲಿ ಇಂತಹ ಸೀಮೋಲ್ಲಂಘನೆಯ ಕಥನಗಳಿವೆ. ಬಾಗ್ದಾದಿನ ಸಿಂದಾಬಾದನ ಕತೆಗಳು ಹುಟ್ಟಿದ್ದು ಅವನ ವ್ಯಾಪಾರಿ ಪ್ರವಾಸದ ಭಾಗವಾಗಿ ತಾನೇ?"[೧೩]

ಹೆಂಗಣ್ಣು ಕಂಡ ಜಗತ್ತು (ನೇಮಿಚಂದ್ರ ಅವರ ಪೆರುವಿನ ಪವಿತ್ರ ಕಣಿವೆಯಲ್ಲಿ) ಈ ಕೃತಿಯನ್ನು ರಚಿಸಲು ಕೃತಿಕಾರನಿಗೆ ಸಾಧ್ಯವಾದದ್ದು ಹೇಗೆ ಎಂಬುದರ ಬಗ್ಗೆ ವಿವರ ನೀಡುತ್ತಾನೆ. ಹಿಂದಿನ ಕಾಲದಲ್ಲಿ ಪ್ರವಾಸ ಕಥನಕ್ಕೆ ಇರುವ ಆಧ್ಯತೆ ಬಗ್ಗೆ ಮತ್ತು ಮಹತ್ವದ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಪ್ರವಾಸ ಕಥನದಿಂದ ಆಗುವ ಉಪಯೋಗ ಮತ್ತು ದುರುಪಯೋಗ ವಿವರವನ್ನು ಆರಂಭದ ಸಾಲುಗಳಲ್ಲಿ ತಿಳಿಸಿಕೊಟ್ಟಿದ್ದಾರೆ. ಕೃತಿ ವಿಮರ್ಶೆಯಲ್ಲಿ ಕೃತಿಯು ಹುಟ್ಟಿದ ಬಗ್ಗೆ ಮತ್ತು ಕೃತಿಯನ್ನು ರಚಿಸಲು ಕಾರಣಗಳನ್ನು ತಿಳಿಸಿಕೊಡುವುದು ಸಹ ವಿಮರ್ಶಕರ ಒಂದು ಭಾಗವಾಗಿ ಬಿಟ್ಟಿದೆ.

"ಪ್ರಾಚೀನ ಇತಿಹಾಸದ ವಿದ್ವಾಂಸರಾದ ಎಸ್. ಶೆಟ್ಟರ್ ಅವರು, ತಮ್ಮ 'ಇನ್ವೈಟಿಂಗ್ ಡೆತ್', 'ಪರ್ಸ್ಯೂಯಿಂಗ್ ಡೆತ್' ಮುಂತಾದ ಕೃತಿಗಳಿಂದ ದೇಶ ವಿದೇಶಗಳಲ್ಲಿ ಖ್ಯಾತರಾಗಿರುವವರು ಅವರು ೨೦೦೦ನೇ ಇಸವಿಯಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಿದ್ದರು. ಆಗ ಅವರ ಸಂದರ್ಶನ ಮಾಡುತ್ತಾ ನಾನು 'ನೀವು ಕರ್ನಾಟಕದ ಬಗ್ಗೆ ಸಂಶೋಧನೆಯೇನೋ ಮಾಡಿದಿರಿ, ಆದರೆ ಕನ್ನಡದಲ್ಲಿ ಬರೆಯಲಿಲ್ಲ, ಯಾಕೆ? ಎಂದು ಕೇಳಿದೆ. ವಾಸ್ತವವಾಗಿ ಇದು ಭಾಷಾಭಿಮಾನದಿಂದ ಮಾಡಿದ ಆಕ್ಷೇಪಣೆಯಾಗಿರಲಿಲ್ಲ. ಯಾಕೆಂದರೆ, ಲೇಖಕರು ತಮ್ಮ ಅಭಿವ್ಯಕ್ತಿಗೆ ಆಯ್ದುಕೊಳ್ಳುವ ಭಾಷೆಯ ಅವರು ಸಂವಾದ ಮಾಡಬಯಸುವ ಸಮುದಾಯವನ್ನು ಮಾತ್ರ ನಿರ್ಧರಿಸುವುದಿಲ್ಲ; ಅದು ಅವರ ದೃಷ್ಟಿಕೋನವನ್ನು ನಿಯಂತ್ರಿಸುತ್ತದೆ. ಆಂಗ್ಲ ಭಾಷೆಯನ್ನು ಆರಿಸಿಕೊಂಡಾಗ ಸಹಜವಾಗಿಯೇ ಕನ್ನಡೇತರವೂ ಅಖಿಲ ಭಾರತೀಯವೂ ಅಥವಾ ಜಾಗತಿಕವೂ ಆದ ಓದುಗ ಸಮುದಾಯ ಎದುರಿಸುತ್ತದೆ. ಆಗ ಬರಹಕ್ಕೆ ಅಥವಾ ಮಾತಿಗೆ ನಮ್ಮ ಸಂಸ್ಕೃತಿಕ ಇತಿಹಾಸ ಪರಂಪರೆಗಳ ಬಗ್ಗೆ ವಿಮರ್ಶಾತ್ಮಕವಲ್ಲದ ಮತ್ತು ವೈಭವೀಕರಣದ ಒಂದು ಸಣ್ಣ ಆಯಾಮ ಹೇಗೋ ಬಂದು ಸೇರಿಕೊಂಡುಬಿಡುತ್ತದೆ. ಕನ್ನಡಿಗರಾಗಿದ್ದ ಎಂ.ಎನ್. ಶ್ರೀನಿವಾಸ ಅವರು ಇಂಗ್ಲೀಷಿನಲ್ಲಿ ಪ್ರಕಟಿಸಿದ ಕರ್ನಾಟಕದ ಹಳ್ಳಿಗಳನ್ನು ಕುರಿತ ಇಂಗ್ಲೀಷ್ ಕೃತಿ 'ರಿಮೆಂಬರ್ಡ್ ವಿಲೇಜ್' ನೋಡಿದರೆ ಇದು ಸ್ಪಷ್ಟಪಡಿಸುತ್ತದೆ. ನನ್ನ ಪ್ರಶ್ನೆಯಲ್ಲಿದ್ದ ಆಶಯವು ಭಾಷಾ ಆಯ್ಕೆಯ ಭಾಗವಾಗಿ ಬರುವ ಈ ರಾಜಕಾರಣವನ್ನು ಕುರಿತಾಗಿತ್ತು. ಇದಕ್ಕೆ ಶೆಟ್ಟರ್ ಉತ್ತರಿಸುತ್ತ, ತಾವು ಬರೆಯುವ ಕಾಲಕ್ಕೆ ಕರ್ನಾಟಕದ ಬಗ್ಗೆ ಕನ್ನಡದಲ್ಲಿ ಬರೆಯುವ ವಿದ್ವಾಂಸರು ಸಾಕಷ್ಟಿದ್ದರು, ಇಂಗ್ಲೀಷಿನಲ್ಲಿ ಬರೆದು ಕನ್ನಡೇತರ ಲೋಕಕ್ಕೆ ತಿಳಿಸುವವರು ಇರಲಿಲ್ಲ. ಹೀಗಾಗಿ ತಾವು ಇಂಗ್ಲೀಷಿನಲ್ಲಿ ಬರೆಯಬೇಕಾಯಿತು ಎಂದು ಹೇಳಿದರು. ಕಡೆಯಲ್ಲಿ ಕೊಂಚ ಸಂಕೋಚದಿಂದ ಕನ್ನಡದಲ್ಲಿ ಬರೆಯದ ಆಪಾದನೆಯಿಂದ ವಿಮುಕ್ತಿ ಪಡೆಯಲು ತಾವು ಯತ್ನಿಸುತ್ತಿರುವುದಾಗಿ ಹೇಳಿದರು. ಹಾಗೆ ಹೇಳಿದ ಕೆಲವು ವರ್ಷಗಳ ಬಳಿಕ 'ಕವಿರಾಜಮಾರ್ಗ'ವನ್ನು ಕುರಿತ ಅವರ ಲೇಖನಗಳು ಪತ್ರಿಕೆಯೊಂದರಲ್ಲಿ ಪ್ರಕಟವಾಗ ತೊಡಗಿದವು. ನಂತರ ಈ ಲೇಖನಗಳು ರೂಪಾಂತರ ಪಡೆದು, 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ' ಕೃತಿ ಪ್ರಕಟವಾಯಿತು. ಶೆಟ್ಟರ್ ಅವರು

ರಚಿಸಿದ ಮೊದಲ ಈ ಕನ್ನಡ ಕೃತಿಯು ಕನ್ನಡದ ವಿದ್ವಾಂಸರು (ಕೆ.ವಿ. ಸುಬ್ಬಣ್ಣ, ಎಂ.ಎಂ. ಕಲ್ಬುರ್ಗಿ ಹಾಗೂ ಕೆ.ಜಿ. ನಾಗರಾಜಪ್ಪ) ಎತ್ತಿದ ಪ್ರಶ್ನೆಗಳಿಂದ ಆರಂಭವಾಗಿರುವುದು. ಈ ಹಿನ್ನೆಲೆಯಿಂದ ಮಾರ್ಮಿಕವಾಗಿದೆ. ಇದು ಲೇಖಕರು ಕನ್ನಡ ಓದುಗ ಲೋಕದ ಜೊತೆಗೆ ಬೌದ್ಧಿಕವಾಗಿ ಮುಖಾಮುಖಿಯಾಗಲು ಮಾಡಿಕೊಂಡ ಸಂಕಲ್ಪದಂತೆ ಕೂಡ ತೋರುತ್ತದೆ."[೧೪]

ತಮಿಳು ತನದ ಮೂಲಕ ಕರ್ನಾಟಕತ್ವ (ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ) ಈ ಕೃತಿಯನ್ನು ಬರೆಯಲು ಕಾರಣ ಮತ್ತು ಹುಟ್ಟುವ ಬಗೆಯ ಬಗ್ಗೆ ಮೊದಲಿಗೆ ತಿಳಿಬೇಕೆಂದರೆ ಕನ್ನಡ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದಾಗ ಅವರ ಜೊತೆಗೆ ಮಾಡಿದ ಸಂದರ್ಶನದಲ್ಲಿ ಅವರು ಹೇಳಿದ ಮಾತುಗಳನ್ನು ಗಮನಿಸಿದಾಗ ತಿಳಿದುಬರುತ್ತದೆ. ಮತ್ತು ಈ ಕೃತಿಯನ್ನು ತಮಿಳಿನಲ್ಲಿ ರಚಿಸಿದ್ದಕ್ಕೆ ನೀವು ಕನ್ನಡದಲ್ಲಿಯೇ ಏಕೆ ರಚಿಸಲಿಲ್ಲ ಎಂಬ ಪ್ರಶ್ನೆಗೆ ತುಂಬಾ ನಾಜೂಕಾದ ಉತ್ತರವನ್ನು ಕೃತಿಕಾರನು ಕೊಟ್ಟಿರುವುದನ್ನು ಕಾಣಬಹುದು. ಹಾಗೆಯೇ ಮೇಲಿನ ಸಾಲುಗಳಲ್ಲಿಯೇ ಈ ಕೃತಿಯ ಒಳಗೊಂಡಿರುವ ಅಂಶಗಳ ಬಗ್ಗೆ ಹೇಳುತ್ತಾ ಹೋಗಿದ್ದಾರೆ. ಸಾಹಿತ್ಯ ಮತ್ತು ಇತಿಹಾಸ ಇವೆರಡು ಒಂದಕ್ಕೊಂದು ಸಂಬಂಧವಿದೆ. ಕರ್ನಾಟಕ ಆರಂಭದ ಕೃತಿಯಾದ 'ಕವಿರಾಜ ಮಾರ್ಗ' ಕೃತಿಯನ್ನು ಗಮನಿಸಿ ಎಂದು ಉದಾಹರಣೆಯ ಮೂಲಕ ಹೇಳಿದ್ದಾರೆ. ಒಟ್ಟಾರೆಯಾಗಿ ಕೃತಿ ಹುಟ್ಟುವ ಬಗೆ ಮತ್ತು ಕಾರಣವನ್ನು ಕೊಡುವುದರ ಮೂಲಕ ವಿಮರ್ಶೆಯನ್ನು ಆರಂಭಿಸಿದ್ದಾರೆ.

"ಭಾರತೀಯ ಸಮಾಜವು ಇಂದಿಗೂ ಬಗೆಹರಿಸಿಕೊಳ್ಳದ ಉಳಿಸಿಕೊಂಡಿರುವ ಸುಡು ಪ್ರಶ್ನೆಗಳಲ್ಲಿ ಭೂಹಂಚಿಕೆಯದೂ ಒಂದು. ಈ ಪ್ರಶ್ನೆಯು ಚರಿತ್ರೆಯುದ್ದಕ್ಕೂ ಮತ್ತೆ ಮತ್ತೆ ಸಂಘರ್ಷಕ್ಕೆ ಕಾರಣವಾಗುತ್ತ ಬಂದಿದೆ. ಈ ಸಂಘರ್ಷಕ್ಕೆ ಕಾರಣ, ಭೂಮಿಯು ಕೇವಲ ಭಾವನಾತ್ಮಕ ಸಂಗತಿಯಾಗಿರುವುದಲ್ಲ; ಅದು ನಾಡಿನ ಬಹು ಸಂಖ್ಯಾತ ದುಡಿಯುವ ಜನರ ಬದುಕಿನ ಅಸ್ತಿತ್ವಕ್ಕೆ ಸಂಬಂಧಿಸಿದ ಸಂಗತಿಯೂ ಆಗಿರುವುದು. ಇಂತಹ ಬಹುಪಾಲು ಭೂಮಿ ಅಥವಾ ಜಮೀನು ನಾಡಿನ ಚಿಕ್ಕ ಸಂಖ್ಯೆಯ ಭೂ ಸ್ವಾಮಿಗಳ ಕೈಯಲ್ಲಿದೆ; ಭೂಮಿಯ ಜೊತೆ ನಿತ್ಯವೂ ಒಡನಾಡುವ ಮತ್ತು ಅದನ್ನು ಗೇಯುವ ದೊಡ್ಡ ಸಂಖ್ಯೆಯ ಜನರಿಗೆ ಅದರ ಮೇಲೆ ಹಕ್ಕಿಲ್ಲ. ಅವರು ಗೇಣಿದಾರರೋ, ರೈತ ಕೂಲಿಗಳೋ ಇಲ್ಲವೇ ಸರಕಾರಿ ಲೆಕ್ಕದಲ್ಲಿ ಬಗೈರು ಹುಕುಂ ಸಾಗುವಳಿ ಮಾಡಿದ ತಪ್ಪಿತಸ್ಥರೋ ಆಗಿದ್ದಾರೆ. ಇಂತಹ ವಿಪರ್ಯಾಸಕರ ಸನ್ನಿವೇಶವು ಸಹಜವಾಗಿ ಭೂಗರ್ಭದೊಳಗಿನ ಲಾವಾರಸವನ್ನು ಬೇರೆ ಬೇರೆ ರೂಪದಲ್ಲಿ ಚಿಮ್ಮಿಸುತ್ತದೆ. ಈ ಚಿಮ್ಮುವಿಕೆಯ ಒಂದು ಪರಿಯನ್ನು ಕಾರಂತರ 'ಚೋಮನದುಡಿ' ಕಾದಂಬರಿ ಹಿಡಿದುಕೊಟ್ಟಿದೆ; ಇನ್ನೊಂದು ಪರಿಯನ್ನು ಪ್ರಸ್ತುತ 'ದುಡಿಯುವ ಕೈಗಳ ಹೋರಾಟದ ಕತೆ' ಹಿಡಿದುಕೊಡುತ್ತದೆ. ವೈರುಧ್ಯದ

ಸಂಗತಿಯೆಂದರೆ '೪೭ರ ಸ್ವಾತಂತ್ರ್ಯ' ಬಂದ ನಂತರವೇ ದೇಶದಲ್ಲಿ ಭೂಚಳುವಳಿಗಳು ಹೆಚ್ಚಿರುವುದು. ಇದು ನಮ್ಮ ರಾಜಕೀಯ ಸ್ವಾತಂತ್ರ್ಯದ ಅಪೂರ್ಣತೆಯನ್ನು ಸೂಚಿಸುವ ಸಂಗತಿ. ಕರ್ನಾಟಕದಲ್ಲಿ ಭೂ ಹೋರಾಟಗಳನ್ನು ಕಮ್ಯೂನಿಷ್ಟರು, ಸಮಾಜವಾದಿಗಳು, ದಲಿತ ಸಂಘರ್ಷ ಸಮಿತಿಯವರು, ರೈತ ಸಂಘದವರು ಹಾಗೂ ನಕ್ಸಲೈಟರು ಕೈಗೆತ್ತಿಕೊಂಡಿದ್ದಾರೆ. ಸಮಾಜವಾದಿ ಪಕ್ಷದಿಂದ ಕಾಗೋಡು, ಸೊಂಡೂರು ಮುಂತಾದ ಕಡೆ ಭೂಹೋರಾಟಗಳು ನಡೆದವು. ಇವುಗಳಲೆಲ್ಲ ಶಿವಮೊಗ್ಗ ಜಿಲ್ಲೆಯ ಕಾಗೋಡು ಎಂಬ ಹಳ್ಳಿಯಲ್ಲಿ ನಡೆದ ಸತ್ಯಾಗ್ರಹ ಹೆಸರಾಗಿದೆ. ಇದರ ಖ್ಯಾತಿಗೆ ಶಾಂತವೇರಿ ಗೋಪಾಲ ಗೌಡ, ರಾಮಮನೋಹರ ಲೋಹಿಯಾ ಮುಂತಾದವರು ಭಾಗವಹಿಸಿದ್ದೂ ಒಂದು ಕಾರಣವಾಯಿತು."[೧೫]

ಉತ್ತರ ಕನ್ನಡದ ಭೂಮಿಗೀತೆ (ವಿಷ್ಣು ನಾಯ್ಕ ಅವರ 'ದುಡಿಯುವ ಕೈಗಳ ಹೋರಾಟದ ಕತೆ') ಈ ಕೃತಿಯನ್ನು ರಚನೆ ಮಾಡಲು ಇದರ ಹಿಂದೆ ಇರುವ ಕಾರಣಗಳನ್ನು ಸವಿವರವಾಗಿ ಬಿಚ್ಚಿಟ್ಟಿದ್ದಾರೆ. ಹಿಂದಿನ ಕಾಲದಿಂದ ಇಂದಿನ ಕಾಲದವರೆಗೆ ಇರುವ ಸಮಸ್ಯೆ ಎಂದರೆ ದುಡಿಯುವ ಕೈಗಳ ಹೋರಾಟ ಕತೆಯೇ ಯಾರೋ ದುಡಿಮೆ ಮಾಡುವುದು ಯಾರೋ ಅದರ ಲಾಭ ಪಡೆಯವುದು. ಅಂದರೆ ಉಳ್ಳವರು ಇಲ್ಲದವರ ನಡುವಿನ ಹೋರಾಟವನ್ನು ಕಾಣಬಹುದಾಗಿದೆ. ಮತ್ತು ಇಂತಹ ಕ್ರಾಂತಿಗಳಿಗಾಗಿ ಹೋರಾಡಿದಂತಹ ಮಹಾನ್ ನಾಯಕರುಗಳನ್ನು ಹೆಸರಿಸುತ್ತ ಈ ಕೃತಿಯು ಬೆಳೆದು ಬಂದ ಬಗೆಯನ್ನು ವಿಮರ್ಶಕರು ತೋರಿಸಿಕೊಟ್ಟಿದ್ದಾರೆ.

ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ

"ಬಂಜಗೆರೆಯವರ ಈ ಕೃತಿಯು ಈಗ ವಿವಾದಕ್ಕೆ ಸಿಲುಕಿದೆ ಅಥವಾ ಅದನ್ನು ಸಿಲುಕಿಸಲಾಗಿದೆ. ಲಿಂಗಾಯತ ಮತಕ್ಕೆ ಸಂಬಂಧಪಟ್ಟಂತೆ ಬಂದ ಮಾಸ್ತಿಯವರ 'ಚಿಕವೀರ ರಾಜೇಂದ್ರ', ಶಿವಪ್ರಕಾಶರ 'ಮಹಾಚೈತ್ರ', ಪಿ.ವಿ. ನಾರಾಯಣ ಅವರ 'ಧರ್ಮಕಾರಣ', ಕಲ್ಬುರ್ಗಿಯವರ 'ಮಾರ್ಗ', ಮಾತೆಮಹಾದೇವಿ ಅವರ 'ವಚನ ದೀಪ್ತಿ' ಈ ಕೃತಿ ಸರಣಿಯಲ್ಲಿ ಈಗ ಇದೂ ಸೇರಿದಂತಾಗಿದೆ. ಆದರೆ ಇಲ್ಲಿನ ಪ್ರತಿಯೊಂದು ಕೃತಿಯ ವಿವಾದಕ್ಕೂ ಬೇರೆ ಬೇರೆ ಕಾರಣವಿದ್ದು, 'ಆನುದೇವಾ' ಕೃತಿ ಲಿಂಗಾಯತ ಸಮುದಾಯದ ಕೆಲವರಲ್ಲಿ ಹುಟ್ಟಿಸುವ ಸಿಟ್ಟು ಆಕ್ರೋಶಗಳಿಗೆ ಕಾರಣಗಳು ಬೇರೆಯಾಗಿವೆ. 'ಈ ಪುಸ್ತಕವನ್ನು ಸರ್ಕಾರ ನಿಷೇದಿಸಬೇಕು, ಮುಟ್ಟುಗೋಲು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ರಕ್ತದ ಕೋಡಿ ಹರಿಯುತ್ತದೆ, ಪುಸ್ತಕವನ್ನು ಸುಡಬೇಕು, ಲೇಖಕನನ್ನು ಕೊಲ್ಲಬೇಕು ಎಂಬ ಹೇಳಿಕೆಗಳು ಹೊರಡುತ್ತಿವೆ. ಈ ಹೇಳಿಕೆಗಳನ್ನು ಕೆಲವು (ಎಲ್ಲರೂ ಅಲ್ಲ) ಲಿಂಗಾಯತ ರಾಜಕಾರಣಿಗಳು ಹಾಗು ಮಠಾಧೀಶರು ಕೊಡುತ್ತಿದ್ದಾರೆ. ಈ ಹೇಳಿಕೆಗಳಿಗೆ ಒದಗಿರುವ ಒಂದು ನೈತಿಕ ಬಲವೆಂದರೆ, ಹಿಂದೆ ಕರ್ನಾಟಕ ಸರ್ಕಾರವು

'ಧರ್ಮ ಕಾರಣ'ವನ್ನು ಸರ್ಕಾರ ನಿಷೇದಿಸಿದ್ದು, ಸರಿಯೆಂದು ಸುಪ್ರೀಂಕೋರ್ಟ್ ಈಚೆಗೆ ತೀರ್ಪು ನೀಡಿರುವುದು, ನಿಷೇದಕ್ಕೆ ಒತ್ತಾಯ ಮಾಡುತ್ತಿರುವವರಲ್ಲಿ ಕೆಲವು ಸಂಶೋಧಕರೂ, ಪತ್ರಕರ್ತರೂ ಸೇರಿರುವುದು ಸೋಜಿಗ. ಆದರೆ ಕೃತಿಯನ್ನು ಅದರ ವಿಚಾರಗಳಿಗಾಗಿ ನಿಷೇಧಿಸುವುದು ಸರಿಯಲ್ಲವೆಂದೂ ವಿಚಾರವನ್ನು ವಿಚಾರದಿಂದಲೇ ಎದುರಿಸಬೇಕೆಂದೂ, ಈ ವಿಷಯದಲ್ಲಿ ಮತ್ತಷ್ಟು ಚಿಂತನೆ, ಸಂಶೋಧನೆ ನಡೆಯುವ ಅಗತ್ಯ ಇದೆಯೆಂದೂ ಪ್ರಜ್ಞಾವಂತರಿಂದ ಪ್ರತಿಕ್ರಿಯೆಗಳು ಬರುತ್ತಿವೆ. ಬಂಜಗೆರೆಯವರ ಕೃತಿಯಲ್ಲಿರುವ ವಿಚಾರಗಳ ಬಗ್ಗೆ ಸಮ್ಮತಿ ಇಲ್ಲದವರೂ, ಬಂಜ ಗೆರೆಯವರಿಗೆ ಈ ದಿಸೆಯಲ್ಲಿ ಚಿಂತನೆ ಮಾಡಲು ಮತ್ತು ಪ್ರಕಟ ಮಾಡಲು ಹಕ್ಕಿದೆಯೆಂದೂ ಹೇಳುತ್ತಿದ್ದಾರೆ."[೧೬]

"ಕರ್ನಾಟಕದ ಲಿಂಗಾಯತ ಸಮುದಾಯಕ್ಕೂ ಬಸವಣ್ಣನಿಗೂ ಇರುವ ಧಾರ್ಮಿಕ ಸಂಬಂಧ ಆಳವಾದುದು. ಆದರೆ ಬಸವಣ್ಣನದು ಲಿಂಗಾಯತ ಮತ ಅಥವಾ ಜಾತಿಯ ಆಚೆ ಇರುವ ಹಲವಾರು ಜನರ ಪ್ರೀತಿಗೂ, ಗೌರವಕ್ಕೂ ಪಾತ್ರವಾಗಿರುವ ವ್ಯಕ್ತಿತ್ವ. ಇದಕ್ಕೆ ಕಾರಣ, ಅವನೊಬ್ಬ ಕವಿಯಾಗಿರುವುದು; ಕೆಳಜಾತಿಗಳ ಮೇಲು ಚಲನೆಯ ಪರವಾದ ನಿಲುವನ್ನು ತಳೆದಿದು; ವೈದಿಕ ಪುರೋಹಿತ ಶಾಯಿಯನ್ನು ನಿರಾಕರಿಸಿದ್ದೂ; ಅಪಾರ ವಿನಯ ಹಾಗೂ ಮಾತೃತ್ವದ ಮನಸ್ಸನ್ನು ಹೊಂದಿದ್ದು, ಕರ್ನಾಟಕದಲ್ಲಿ ಹುಟ್ಟಿದ ಮಧ್ವಚಾರ್ಯರಿಗಾಗಲಿ, ಕರ್ನಾಟಕದಲ್ಲಿ ಕೆಲವು ಕಾಲವಿದ್ದ ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯ ಅವರಿಗಾಗಲಿ, ಬಸವಣ್ಣನಿಗೆ ಸಿಕ್ಕಷ್ಟು ವ್ಯಾಪಕ ಸ್ವೀಕೃತಿ ಸಿಕ್ಕಿಲ್ಲ. ರಂ. ರಾ. ದಿವಾಕರ, ಎಂ.ಆರ್. ಶ್ರೀನಿವಾಸಮೂರ್ತಿ, ಅನಕೃ, ಕುವೆಂಪು, ದೇವನೂರ ಮಹಾದೇವ, ಗೋವಿಂದಯ್ಯ, ಕೆ. ರಾಮಯ್ಯ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಕಿ.ರಂ. ನಾಗರಾಜ, ಅನಂತಮೂರ್ತಿ, ಜಿ. ರಾಜಶೇಖರ್, ಪಿವಿ. ನಾರಾಯಣ, ಸುಧಾಕರ, ದೇ.ಜ.ಗೌ, ಎ.ಕೆ. ರಾಮಾನುಜನರ್, ಶಂಕರ ಮೊಕಾಶಿ ಪುಣೇಕರ್, ಎಂ. ಜೀವನರ್, ಎಂ.ಜಿ. ಕೃಷ್ಣಮೂರ್ತಿ, ರಂಜಾನ್ ದರ್ಗಾ ಬಸವಣ್ಣನ ಮೇಲೆ ಚಿಂತನೆ ಮಾಡಿರುವ ಈ ಯಾರೂ ಹುಟ್ಟಿನಿಂದ ಲಿಂಗಾಯತರಲ್ಲ. ಆದರೆ ಇವರೆಲ್ಲ ಬಸವಣ್ಣನ ಮೇಲೆ ಆದರ ಪ್ರೀತಿಯುಳ್ಳವರು. ಆದ್ದರಿಂದ ಬಸವಣ್ಣನ ಪ್ರಶ್ನೆಯು ಕರ್ನಾಟಕದಲ್ಲಿ ಲಿಂಗಾಯತರಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ. ನಿಜ ಹೇಳಬೇಕೆಂದರೆ, ಬಸವಣ್ಣನನ್ನು ಜಾತಿಯ ಕಾರಣಕ್ಕಲ್ಲದೆ ತತ್ವದ ಕಾರಣದಿಂದ ಆದರಿಸುವವರ ಶ್ರದ್ಧೆಯೇ ನಿಜವಾಗಿ ದೊಡ್ಡದು. ಇಬ್ಬರು ದಲಿತ ಶರಣರ ಮನೆಯ ಸೇವಕರ ಮಕ್ಕಳು ಬೆರಣಿ ಆರಿಸಲು ಹೋಗಿ ಸಂಗವ ಮಾಡಿದಾಗ ತಾನು ಹುಟ್ಟಿದೆ ಎಂದು ಹೇಳಿಕೊಳ್ಳಲು ಬಸವಣ್ಣನು, ಒಂದೊಮ್ಮೆ ದಲಿತ ಮೂಲದವನು ಎಂದು ಖಚಿತವಾದರೆ ಇವರಿಗೆಲ್ಲ ಸಂತೋಷವಾಗುತ್ತದೆ. ಇದು ಸಾಬೀತಾಗದಿದ್ದರೆ ದುಗುಡವೇನು ಆಗುವುದಿಲ್ಲ. ಬಸವಣ್ಣನ ಚಿಂತನೆಗಳಿಗೆ ಅರ್ಥಪೂರ್ಣ ವಿಸ್ತರಣೆಯು, ಅವರ ಹೆಸರನ್ನು ಕಟ್ಟಡಗಳಿಗೆ, ರಸ್ತೆಗಳಿಗೆ, ವೃತ್ತಗಳಿಗೆ

ಇಡುವ ಅಶ್ವರೂಢ ಪ್ರತಿಮೆಗಳನ್ನು ಸ್ಥಾಪನೆ ಮಾಡುವವರಿಗಿಂತಲೂ ಅವನ ವಚನಗಳ ವಿಮರ್ಶಾತ್ಮಕ ಅನುಸಂಧಾನ ಮಾಡುವವರಿಂದ ನಡೆದಿದೆ."[೧೭]

"ಇದೇ ಹೊತ್ತಲ್ಲಿ ಹೇಳಬೇಕಾದ ಸಂಗತಿಯೆಂದರೇ, ಬಸವಣ್ಣನು ಧಾರ್ಮಿಕ ಕಾರಣದಿಂದ ಲಿಂಗಾಯತರಿಗೆ ಪವಿತ್ರ ಹೆಸರಾಗಿದ್ದರೂ, ಅವನ ಚಿಂತನೆಗಳಿಗೆ ವ್ಯತಿರಿಕ್ತವಾದ ಕೆಲಸಗಳಲ್ಲಿ ತೊಡಗಿ, ಅವನನ್ನು ಅಪಮಾನಿಸುವ ಶಕ್ತಿಗಳು ವೀರಶೈವ ಸಮುದಾಯದಲ್ಲಿ ಲಾಗಾಯ್ತಿನಿಂದಲೂ ನಿರತವಾಗಿರುವುದು. ಪಂಚಾಚಾರ್ಯ ಪರಂಪರೆಗೆ ಸೇರಿದ ಗುರುಗಳು, ತಾವು ಭಾಗವಹಿಸುವ ಸಭೆಗಳಲ್ಲಿ ಎಲ್ಲಾದರೂ ತಮಗಿಂತ ಮೇಲೆ ಬಸವಣ್ಣನ ಫೋಟೋ ಇದ್ದರೆ, ಅದನ್ನು ಕೆಳಕ್ಕೆ ಇಳಿಸಿ ನಂತರ ಕಾರ್ಯಕ್ರಮ ಆರಂಭಿಸುತ್ತಾರೆ. ಬಸವಣ್ಣನನ್ನು ಅವರು ಎಷ್ಟು ದ್ವೇಷ ಮಾಡುತ್ತಾರೆ ಎಂದರೆ, ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ಭೀಮಕವಿಯ 'ಬಸವಪುರಾಣ'ವನ್ನು ಸುಟ್ಟು ಹಾಕಲಾಗಿತ್ತು. ಈ ಸಂಗತಿಯನ್ನು ಮುದೇನೂರ ಸಂಗಣ್ಣನವರು ನನಗೆ ತಮ್ಮ ಸಂದರ್ಶನದಲ್ಲಿ ಹೇಳಿದರು.೨ ಈಗಲೂ ಪಂಚಪೀಠದವರು ಬಸವಣ್ಣನನ್ನು ಕೀಳಾಗಿ ತೋರಿಸಲು ಸಣ್ಣ ಅವಕಾಶವನ್ನು ಕಳೆದುಕೊಳ್ಳುವುದಿಲ್ಲ. ಅವರ ವಚನಗಳನ್ನು ಉಲ್ಲೇಖಿಸುವುದಿಲ್ಲ. ಬಸವಣ್ಣ ದಲಿತ ಮೂಲದವನಿರಬಹುದು ಎಂಬ ಬಂಜಗೆರೆಯವರ ವಾದಕ್ಕೆ ಇವರೆಲ್ಲ ಮೌನವಹಿಸಿರುವುದು ಮಾರ್ಮಿಕವಾಗಿದೆ. ಇದರಿಂದ ಬಸವಣ್ಣನನ್ನು ಧಾರ್ಮಿಕ ನಾಯಕತ್ವದ ಜಾಗದಿಂದ ಸರಿಸುವುದು ಹಾಗೂ ತಮ್ಮ ಪುರೋಹಿತಶಾಯಿ ವೈದಿಕ ಸಂಸ್ಕೃತಿಯನ್ನು ಜನರು ಹೇರುವುದು ಉತ್ಕೃಷ್ಟ ಸಲೀಸಾಗುತ್ತದೆ ಎಂದು ಅವರಿಗೆ ಅನಿಸಿರಬಹುದು."[೧೮]

ಬಸವಣ್ಣ ದಲಿತನಾಗುವ ಕಷ್ಟ (ಬಂಜಗೆರೆ ಜಯಪ್ರಕಾಶ್ ಅವರ 'ಅನುದೇವಾ ಹೊರಗಣವನು') ಈ ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳಿಯುವುದಾದರೆ ಮೊದಲಿಗೆ ಇದೊಂದು ವಿವಾದಿತ ಕೃತಿ. ಇದರಂತೆಯೇ ಇದಕ್ಕೆ ಸಂಬಂಧಪಟ್ಟ ಇನ್ನೂ ಅನೇಕ ವಿವಾದಿತ ಕೃತಿಗಳನ್ನು ಹೆಸರಿಸುತ್ತಾ ಹೋಗಿದ್ದಾರೆ. ಉದಾಹರಣೆಗೆ ಮಾಸ್ತಿಯವರ ಚಿಕವೀರ ರಾಜೇಂದ್ರ, ಶಿವಪ್ರಕಾಶರ ಮಹಾಚೈತ್ರ, ಕಲ್ಬುರ್ಗಿಯವರ 'ಮಾರ್ಗ' ಹೀಗೆ ಅನೇಕ ಕೃತಿಗಳು ವಿವಾದಿತ ಸರಣಿಯಲ್ಲಿ ನಿಂತಿವೆ. ಇವುಗಳ ಇನ್ನೊಂದು ವಿಶೇಷವೆಂದರೆ ಇವೆಲ್ಲವೂ ಲಿಂಗಾಯತ ಸಮುದಾಯಕ್ಕೆ ಸೇರಿದ ಕೃತಿಗಳಾಗಿವೆ. ಇದರ ಜೊತೆಗೆ ಈ ಕೃತಿಗಳನ್ನು ರಚಿಸಿದಂತಹ ಕೃತಿಕಾರರ ಸಮುದಾಯವನ್ನು ತಿಳಿಸಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿದವರು ಸಹ ಲಿಂಗಾಯತರನ್ನು ಕುರಿತು ಲಿಂಗಾಯತ ಸಮಾಜವನ್ನು ಕುರಿತು ಕೃತಿಗಳನ್ನು ರಚನೆ ಮಾಡಿರುವುದು ಕಂಡುಬರುತ್ತದೆ. ಉದಾ. ಮಾಸ್ತಿ ಬ್ರಾಹ್ಮಣಾ (ಅಯ್ಯಂಗಾರ್) ಸಮುದಾಯಕ್ಕೆ ಸೇರಿದವರಾಗಿದ್ದರೂ ಲಿಂಗಾಯತ ಸಮುದಾಯವನ್ನು ಕುರಿತು ಚರ್ಚಿಸಿರುವುದನ್ನು ಹೇಳುತ್ತಾರೆ. ಲಿಂಗಾಯತ ಸಮುದಾಯದಲ್ಲಿನ ಪಂಗಡಗಳ ಬಗ್ಗೆ

ವಿವರಿಸುತ್ತಾ, ತಿಳಿಸುತ್ತಾ ಹೋಗುತ್ತಾರೆ. ಲಿಂಗಾಯತ ಸಮುದಾಯದವರಲ್ಲಿ ಪಂಚಮ ಪೀಠದವರು ಲಿಂಗಾಯತ ಬಸವಣ್ಣನನ್ನು ವಿರೋಧಿಸುವುದು ಮತ್ತು ಬಳ್ಳಾರಿಯಲ್ಲಿ 'ಬಸವಪುರಾಣ' ಕೃತಿಯನ್ನು ಸುಟ್ಟು ಹಾಕಿರುವುದರ ಬಗ್ಗೆ ತಿಳಿಸಿದ್ದಾರೆ. ಅತಿ ಹೆಚ್ಚು ಲಿಂಗಾಯತ ಧರ್ಮದ ಬಗ್ಗೆಯೇ ಬಂದಂತಹ ಕೃತಿಗಳ ಬಗ್ಗೆಯೇ ವಿವಾದ ಏಕೆ? ಸೃಷ್ಟಿಯಾಯಿತು ಎಂಬ ಪ್ರಶ್ನೆಗೆ ಬಂದರೆ ಲಿಂಗಾಯತ ಧರ್ಮದ ಜನರು ಹೆಚ್ಚಾಗಿ ಇರುವುದು ಅದಕ್ಕಾಗಿ ರಾಜ್ಯದಲ್ಲಿ ಅವರ ಆಡಳಿತವೇ ಹೆಚ್ಚಾಗಿರುವುದರಿಂದ ಆ ಜನಾಂಗದ ಧರ್ಮದಲ್ಲಿ ಹೆಚ್ಚು ಕೆಲಸ ಮಾಡಿದವರು ಆ ಧರ್ಮಕ್ಕೆ ಸೇರಿದವರು ಕಂಡು ಬರುತ್ತಾರೆ ಎಂಬ ಕಾರಣಗಳು ಕೊಡುತ್ತಾರೆ.

ಉದಾಹರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. "ಒಬ್ಬ ಗ್ರಾಮೀಣ ಅವಧೂತನನ್ನು ಕುರಿತ ಈ ಕೃತಿಯು, ಅನೇಕ ಕಾರಣಗಳಿಂದ ಮುಖ್ಯವಾಗಿದೆ. ಮೊದಲನೆಯದಾಗಿ, ಇದು ಕರ್ನಾಟಕದ ಅವಧೂತ ಪರಂಪರೆಯ ಕೆಲವು ಸಾಮಾನ್ಯ ಲಕ್ಷಣಗಳನ್ನು ತಿಳಿಸುತ್ತದೆ. ಕನ್ನಡದಲ್ಲಿ ಧರ್ಮಗಳ ಅಧ್ಯಯನವೆಂದರೆ, ಪ್ರತಿಷ್ಠಿತ ಕ್ಲಾಸಿಕಲ್ ಧರ್ಮಗಳ ಹಾಗೂ ಧಾರ್ಮಿಕ ವ್ಯಕ್ತಿಗಳ ಚರಿತ್ರೆಯಾಗಿ ಬಿಟ್ಟಿದೆ. ಆದರೆ ಗ್ರಾಮೀಣ ಭಾಗದಲ್ಲಿ ಅವಧೂತರು ಆರೂಢರು ಯೋಗಿಗಳು ಎನ್ನಲಾಗುವ ಸಂತರು ಬಹುದೊಡ್ಡ ಪ್ರಮಾಣದಲ್ಲಿ ನೆಲೆಸಿದ್ದರು. ಕಡಕೋಳ ಮಡಿವಾಳಪ್ಪ, ಕೈವಾರದ ತಾತಯ್ಯ, ಚೆಳ್ಳಗುರ್ಕಿಯ ಯರ್‍ರಿತಾತ, ಸಾಹಿಬಣ್ಣರಾವ್, ಹುಬ್ಬಳ್ಳಿಯ ಸಿದ್ಧಾರೂಢರು, ಗರಗದ ಮಡಿವಾಳಪ್ಪ, ನವಲಗುಂದದ ನಾಗಲಿಂಗಯತಿ, ಸಾಲಗುಂದಿಯ ಗುರುಖಾದರಿ ಪೀಟ, ಬೀರಬ್ರಹ್ಮಯ್ಯ, ಚಿಪ್ಪಗಿರಿಯ ಭಂಭಂಸ್ವಾಮಿ, ಕೂಡಲೂರು ಬಸವಲಿಂಗ, ಕಾಡ ಸಿದ್ಧೇಶ್ವರ, ನಿರ್ವಾಣ ಸ್ವಾಮಿ, ಮುಳ್ಳಯ್ಯಸ್ವಾಮಿ ಹೀಗೆ ಅಕ್ಷರಶಃ ಸಾವಿರಾರು ಸಂಖ್ಯೆಯಲ್ಲಿ ಈ ಸಂತರು ಇದ್ದರು. ಜನತೆಯ ಸಂತರು ಎಂದು ಕರೆಯಬಹುದಾದ ಇವರು ಜನಸಮುದಾಯಗಳ ಬದುಕಿನಲ್ಲಿ ಬೇರುಬಿಟ್ಟವರು. ಈಗಲೂ ಈ ಪರಂಪರೆಯ ಸಂತರು ನಮ್ಮ ಬಗಲಲ್ಲೇ ಇದ್ದಾರೆ. ತಕ್ಷಣಕ್ಕೆ ನನಗೆ ಹಂಪಿಯ ಸದಾಶಿವಯೋಗಿಯವರು ನೆನಪಾಗುತ್ತಾರೆ. ಈ ಸಂತರನ್ನು ಕುರಿತು ಜನ ಸಮುದಾಯಗಳಲ್ಲಿ ಅನೇಕ ಮಿತ್‌ಗಳಿವೆ, ಆಚರಣೆಗಳಿವೆ. ಆದರೆ ಪ್ರಧಾನಧಾರೆಯ ಧರ್ಮಗಳ ಅಧ್ಯಯನ ಮತ್ತು ಚರಿತ್ರೆಗಳು, ಇಂತಹ ಸ್ಥಳೀಯ ಸಂತರ ಬಗ್ಗೆ ನಿರ್ಲಕ್ಷ್ಯ ವಹಿಸಿವೆ. ಹೀಗಾಗಿ ಕರ್ನಾಟಕದ ಅನೇಕ ಯೋಗಿಗಳ ಬಗ್ಗೆ ಪ್ರಾಥಮಿಕವಾದ ಮಾಹಿತಿ ಕೂಡ ಕೆಲವೊಮ್ಮೆ ಸಿಗುವುದಿಲ್ಲದ ಬಹುತೇಕ ಅವಧೂತರು ಸ್ವತಃ ದುಡಿವ ವರ್ಗ ಹಾಗೂ ಕೆಳಜಾತಿಯಿಂದ ಬಂದವರು. ಇವರ ಬದುಕಿನ ಹೆಚ್ಚಿನ ಭಾಗವು ಸಾಮಾನ್ಯ ಜನರ ಪರಿಸರದಲ್ಲೇ ಕಳೆಯುತ್ತದೆ. ಕಬೀರ ಒಬ್ಬ ನೇಕಾರನಾಗಿದ್ದ. ಶಿಶುನಾಳ ಹತ್ತಿ ಹಿಂಜುವವನು. ವೀರಬ್ರಹ್ಮಯ್ಯ ಅಕ್ಕಸಾಲಿ, ತಿಂತಿಣಿ ಮೋನಪ್ಪ ಕಮ್ಮಾರ, ಕಡಕೋಳದ ಮಡಿವಾಳಪ್ಪ ಬಟ್ಟೆ ಒಗೆಯುವವನು, ನಾಗಲಿಂಗಯತಿ ಪಾಂಚಾಳರವರನು, ಮುಕುಂದೂರು ಸ್ವಾಮಿ ಕೂಡ ದುಡಿಮೆಯ ಹಿನ್ನೆಲೆಯಿಂದ ಬಂದವರು ಎಂತಲೇ ಈ ಸಂತ

ಜಾತಿ ಮತದ ಭೇದಗಳನ್ನು ತಿರಸ್ಕರಿಸುತ್ತಾರೆ. ಮತೀಯ ಪುರೋಹಿತಶಾಹಿಯನ್ನು ನಿರಾಕರಿಸುತ್ತಾರೆ."[೧೯]

ಜನತೆಯ ಸಂತನಕತೆ (ಬೆಳಗೆರೆ ಕೃಷ್ಣಶಾಸ್ತ್ರೀ ಅವರ 'ಯೇಗ್ದಾಗೆಲ್ಲಾ ಐತೆ') ಈ ಕೃತಿಯ ಸುತ್ತಲಿನ ಪರಿಸರದ ಬಗ್ಗೆ ತಿಳಿಯುವುದಾದರೆ ಯೋಗಿ ಆಗಿರುವ ಮುಕುಂದೂರು ಸ್ವಾಮಿಗಳ ಬಗ್ಗೆ ಚರ್ಚಿಸುತ್ತಾ ಕರ್ನಾಟಕದ ಯೋಗಿಗಳ ಸರಪಳಿಯನ್ನೇ ಪರಿಚಯಿಸುತ್ತಾ ಹೋಗಿದ್ದಾರೆ. ನೇರವಾಗಿ ಕೃತಿಗೆ ಪ್ರವೇಶಿಸಿ ಯೋಗಿ ಮುಕುಂದೂರು ಸ್ವಾಮಿಯ ಬಗ್ಗೆ ಚರ್ಚಿಸುತ್ತಾ ಹೋದರೆ ಸಾಕಾಗಿತ್ತು ಆದರೆ ಲೇಖಕರು ಸುತ್ತಲಿನ ಪರಿಸರದ ಬಗ್ಗೆ ಮತ್ತು ಕರ್ನಾಟಕದ ಯೋಗಿಗಳ ಕಾಯಕದ ಬಗ್ಗೆ ಚರ್ಚಿಸಿದ್ದಾರೆ. ಶಿಶುನಾಳ ಹತ್ತಿ ಹಿಂಜುವವನು. ವೀರಬ್ರಹ್ಮಯ್ಯ ಅಕ್ಕಸಾಲಿ, ಕಡಕೋಳ ಮಡಿವಾಳಪ್ಪ ಬಟ್ಟೆ ಒಗೆಯುವವನು. ಕೃತಿಯ ವಿಮರ್ಶೆಯಲ್ಲಿ ಅವರ ಕಾಯಕದ ಬಗ್ಗೆ ಅವಶ್ಯವೇ ಕೇವಲ ಮುಕುಂದೂರು ಸ್ವಾಮಿಯ ಜೀವನದ ಹಾಗೂ ಹೋಗುಗಳ ಬಗ್ಗೆ ತಿಳಿಸುತ್ತ ಹೋದರೆ ಸಾಕಾಗಿತ್ತು.

ಉದಾಹರಣೆಯಾಗಿ ನಾವು ಇನ್ನೊಂದನ್ನು ನೋಡಬಹುದು. "ಲೋಕಾಪುರ ಅವರು ಮೂಲತಃ ಬೆಳಗಾವಿ ಜಿಲ್ಲೆಯ ಅಥಣಿ ಸೀಮೆಯವರು. 'ನಿಸರ್ಗ' ಕಾದಂಬರಿ ಬರೆದ ಶೇಡಬಾಳದ ಅಣ್ಣಾರಾಯರ ಹಾಗೆ ಬೇಸಾಯ ಮಾಡುವ ದಿಗಂಬರ ಜೈನ ಸಮಾಜಕ್ಕೆ ಸೇರಿದವರು. 'ಬೇಸಾಯ ಮಾಡುವ ದಿಗಂಬರ ಜೈನ ಸಮಾಜ' ಎಂದರೆ ಕೆಲವರಿಗೆ ಸೋಜಿಗವಾಗಿ ಬದುಕುತ್ತಿರುವ ಭಾಗಗಳೇ ಕರ್ನಾಟಕದಲ್ಲಿ ಕಡಿಮೆ. ಅಂತಹ ವಿರಳ ಭಾಗಗಳಲ್ಲಿ ಬೆಳಗಾವಿ-ಕೊಲ್ಲಾಪುರದ ಸೀಮೆಯೂ ಒಂದು. ಹಿಂಸೆಯ ಪರಿಕಲ್ಪನೆಯು ಜೈನರನ್ನು ಬೇಸಾಯ ಮಾಡಲು ನಿಷೇಧಿಸಿತಷ್ಟೆ. ಹೀಗಾಗಿ ಜೈನರು ಪ್ರಮುಖವಾಗಿ ವ್ಯಾಪಾರ ವೃತ್ತಿಯನ್ನು ಅವಲಂಬಿಸಿದರು.ಆದರೂ ಯಾವ ಯಾವುದೋ ಕಾರಣಗಳಿಗಾಗಿ ಕರ್ನಾಟಕದಲ್ಲಿ ಬೇಸಾಯ ಮಾಡುವ ಜೈನರು ಉಳಿದುಕೊಂಡರು. ಯಾವತ್ತೂ ಧಾರ್ಮಿಕ ತತ್ವಗಳು ಅಥವಾ ಗ್ರಂಥಗಳು ಸಮುದಾಯಗಳ ಸಾಮಾಜಿಕ ಆರ್ಥಿಕ ಜೀವನದ ಚಲನೆಯನ್ನು ಅಂತಿಮವಾಗಿ ನಿರ್ಣಯಿಸುವುದಿಲ್ಲ. ಜೀನವದ ಹೊಳೆಯು ತನ್ನ ಹಾದಿಯನ್ನು ತಾನೇ ಕೊರೆದುಕೊಂಡು ಹರಿಯುವುದನ್ನು ಕೆಲವೊಮ್ಮೆ ಅಸಹಾಯಕವಾಗಿ ನಿಂತು ಅವಕ್ಕೆ ನೋಡಬೇಕಾಗುತ್ತದೆ. ಜೀವನದ ನಿಷ್ಠುರ ಸೆಳವಿಗೆ ಸಿಕ್ಕು ಈ ಗ್ರಂಥ ಮತ್ತು ತತ್ವಗಳು ಸ್ವತಃ ಬದಲಾಗುವುದು ಉಂಟು. ಈ ಕಟುವಾದ ದಿಟವನ್ನು ಧಾರ್ಮಿಕ ಸಮುದಾಯಗಳನ್ನು ಕುರಿತ ಅನೇಕ ಕಥನಗಳು ನಮಗೆ ಹೇಳುತ್ತವೆ. ಇದನ್ನು ಅಣ್ಣಾರಾಯರ 'ನಿಸರ್ಗ' ಕಾದಂಬರಿಯು ಒಂದು ಸಾಂಸ್ಕೃತಿಕ ಸತ್ಯವಾಗಿ ಕಾಣಿಸಿತ್ತು. ಲೋಕಾಪುರ ಅವರ 'ಹುತ್ತ' ಕಾದಂಬರಿಯು ಕೂಡ ಇದೇ ಸತ್ಯವನ್ನು ಕಾಣಿಸುತ್ತದೆ."[೨೦]

ಮತ್ತೊಂದು ಜೈನ ಕಥನ (ಬಾಳಾಸಾಹೇಬ ಲೋಕಾಪುರ ಅವರ 'ಹುತ್ತ) ಲೇಖಕರು ಈ ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳಿಸಿದ್ದಾರೆ. ಲೋಕಾಪುರ ಇವರು 'ಬೆಳಗಾಂ' ಜಿಲ್ಲೆಯವರು ಮತ್ತು ಅಥಣಿ ಭಾಗದಲ್ಲಿ ಬರುವಂತಹ ಜನರ ಕಸುಬಿನ ಬಗ್ಗೆ ತಿಳಿಸಿದ್ದಾರೆ. ಇದರ ಜೊತೆಗೆ ಹಿರಿಯ ಲೇಖಕರಾದ ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯ ಕುರಿತು ಮಾತನಾಡಿದ್ದಾರೆ ಮತ್ತು ಶಾಂತಿ ನಾಥ ದೇಸಾಯಿಯ 'ಓಂ ಣಮೋ' ಕಾದಂಬರಿಯ ಬಗ್ಗೆ ಮಾತನಾಡಿದ್ದಾರೆ. ನಂತರ ಇವರ ಕಾದಂಬರಿಯಲ್ಲಿ ಅಡಗಿರುವ ವಿಷಯದ ಬಗ್ಗೆ ಚರ್ಚಿಸುತ್ತಾ ಹುತ್ತ ಕಾದಂಬರಿಯ ಕುರಿತು ಹೇಳುವುದನ್ನು ಗಮನಿಸಬಹುದು. ನಂತರ ಇವೆರಡು ಕಾದಂಬರಿಯ ಪ್ರೇರಣೆಯೇ 'ಹುತ್ತ' ಕಾದಂಬರಿಯ ಹುಟ್ಟುವಿಗೆ ಕಾರಣ ಎಂಬುದನ್ನು ಲೇಖಕರು ಹೇಳುತ್ತಾರೆ. ಇಲ್ಲಿ ಇದರ ಅವಶ್ಯಕವೇ? ಕೃತಿಯನ್ನು ವಿಮರ್ಶೆ ಮಾಡುವಾಗ ನೇರವಾಗಿ ಕೃತಿಗೆ ಪ್ರವೇಶಿಸಿ ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿದ್ದರೆ ಚೆನ್ನಾಗಿರುತ್ತೆ ಆದರೆ ಲೇಖಕರು ಕೃತಿಯ ಸುತ್ತಲಿನ ಪರಿಸರದ ಬಗ್ಗೆಯೇ ಚರ್ಚಿಸುತ್ತ ಪುಟಮೀರುವ ವಿಮರ್ಶೆಯಾಗಿಸಿ ಬಿಟ್ಟಿದ್ದಾರೆ. ಹಾಗಾಗಿ ಇದನ್ನು ಅರಿತು ಪುಸ್ತಕ ವಿಮರ್ಶಕರು ಸರಿಯಾಗಿ ವಿಮರ್ಶೆ ಮಾಡಿದರೆ ವಿಮರ್ಶೆಗೂ ಒಂದು ನ್ಯಾಯ ಒದಗಿಸಿದಂತಾಗುತ್ತದೆ.

ಕೊನೆ ಟಿಪ್ಪಣಿ

೦೧. ರಹಮತ್ ತರೀಕರೆ, ಚಿಂತನೆಯ ಪಾಡು, ೨೦೧೦, ಪುಟ - ೧೧೬

೦೨. ಅದೇ., ಪುಟ – ೬೪, ೬೫

೦೩. ಅದೇ., ಪುಟ – ೫೪

೦೪. ಅದೇ., ಪುಟ – ೯೬

೦೫. ಅದೇ., ಪುಟ – ೯೬

೦೬. ಅದೇ., ಪುಟ – ೯೬

೦೭. ಅದೇ., ಪುಟ – ೯೯

೦೮. ಅದೇ., ಪುಟ – ೫೬

೦೯. ಅದೇ., ಪುಟ – ೫೭

೧೦. ಅದೇ., ಪುಟ – ೫೭

೧೧. ಅದೇ., ಪುಟ – ೮೫

೧೨. ಅದೇ., ಪುಟ – ೩೩

೧೩. ಅದೇ., ಪುಟ – ೫೪

೧೪. ಅದೇ., ಪುಟ – ೧೭೧, ೧೭೨

೧೫. ಅದೇ., ಪುಟ – ೧೮೧, ೧೮೨

೧೬. ಅದೇ., ಪುಟ – ೧೨೬, ೧೨೭

೧೭. ಅದೇ., ಪುಟ – ೧೯೨

೧೮. ಅದೇ., ಪುಟ – ೧೨

೧೯. ಅದೇ., ಪುಟ – ೧೨

೨೦. ಅದೇ., ಪುಟ – ೨೦೦, ೨೦೧

ಅಧ್ಯಾಯ ೭

ಮೂವರ ಕುರಿತು ತೌಲನಿಕ ಚರ್ಚೆ

ಅಧ್ಯಾಯ ೭

ಮೂವರ ಕುರಿತು ತೌಲನಿಕ ಚರ್ಚೆ

ತೌಲನಿಕ ಅಧ್ಯಯನ ಎಂದರೆ ಒಂದು ಚಟುವಟಿಕೆ. ತೌಲನಿಕ ಸಾಹಿತ್ಯದಿಂದ ಒಬ್ಬ ವಿಮರ್ಶಕನ ನಿಲುವುಗಳನ್ನು ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಕತೆ, ನಾಟಕ, ಲಲಿತಪ್ರಬಂಧ, ಜೀವನ ಚರಿತ್ರೆ, ಪ್ರವಾಸಕಥನ, ಕಾವ್ಯ ಸಂಕಲನಗಳ ಮೂಲಕ ಇನ್ನೊಬ್ಬ ವಿಮರ್ಶಕನ ನಿಲುವುಗಳ ಜೊತೆಗೆ ಹೋಲಿಸುವ ಮೂಲಕ ಇವರಿಬ್ಬರಲ್ಲಿರುವ ಸಮಾನ ಅಂಶಗಳು, ಭಿನ್ನ ಅಂಶಗಳನ್ನು ಕುರಿತು ಚರ್ಚಿಸುವ ಮೂಲಕ ಹೊಸ ಜ್ಞಾನದ ಕಾಣ್ಕೆಯನ್ನು ಕಾಣುವ ಒಂದು ಅಧ್ಯಯನವಾಗಿದೆ.

'ಸಾಹಿತ್ಯ ವಿಮರ್ಶೆ' ಎಂಬುದು ಕೇವಲ ಪಂಡಿತರ ನಡುವಣ ವಾಗ್ವಾದವಾಗದೆ ಓದುಗ ಸಮಷ್ಟಿಯೊಂದಿಗಿನ ಸಂವಾದವಾಗಬೇಕು ಎಂದು ನಂಬಿರುವ ಕೆಲವೇ ಕೆಲವು ವಿಮರ್ಶಕರಲ್ಲಿ ಟಿ.ಪಿ. ಅಶೋಕರವರು ಒಬ್ಬರು ಕೃತಿಯನ್ನು ವಿಮರ್ಶೆಗೆ ಕೈಗೆತ್ತಿಕೊಂಡಾಗ ಸ್ಪಷ್ಟವಾದ ವಿಮರ್ಶಾಧೋರಣೆ ದಾಟಿಯೊಂದಿಗೆ ಇಂದಿನ ಬದುಕನ್ನು ಶುಚಿಗೊಳಿಸುವಲ್ಲಿ, ರುಚಿಗೊಳಿಸುವಲ್ಲಿ, ಸಮೃದ್ಧಿಗೊಳಿಸುವಲ್ಲಿ, ಜೀವಂತವಾಗಿ ಇಡುವಲ್ಲಿ ಈ ಕೃತಿ ಏನನ್ನು ಒದಗಿಸುತ್ತದೆ ಎಂದು ಪ್ರಶ್ನಿಸಿಕೊಂಡು ಅದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುವಂತಹ ನರಹಳ್ಳಿಯವರು ಮತ್ತು ಒಂದು ಕೃತಿಯನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು, ಅದರ ಒಳಹೊರಣವನ್ನು ಅರ್ಥಮಾಡಿಸುತ್ತಾ, ಜೊತೆಗೆ ಕೃತಿಯ ಓರೆಕೋರೆಗಳನ್ನು ತಿಳಿಸುತ್ತಾ ಓದುಗರು ಮೂಲಕೃತಿಯನ್ನು ಓದಲೇ ಬೇಕೆನ್ನುವಂತೆ ಪ್ರೇರೇಪಿಸುವ ರಹಮತ್ ತರೀಕೆರೆಯವರ ಈ ಮೂವರ ಪುಸ್ತಕ ವಿಮರ್ಶೆಯ ನಿಲುವುಗಳನ್ನು ತೌಲನಿಕವಾಗಿ ಈ ಕೆಳಗೆ ಚರ್ಚಿಸಲಾಗಿದೆ.

ಟಿ.ಪಿ. ಅಶೋಕರ ಪ್ರಕಾರಾದಿತ ಪುಸ್ತಕ ವಿಮರ್ಶೆಯ ನಿಲುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ವಿಮರ್ಶಕರ ಹೇಳಿಕೆಗಳ ಮೂಲಕ ಕೃತಿ ವಿಮರ್ಶೆ
೨. ಕೃತಿಯಲ್ಲಿನ ಕೇಂದ್ರ ವಸ್ತು ಮತ್ತು ಕೇಂದ್ರ ಪಾತ್ರಗಳ ಜೊತೆಗೆ ಚರ್ಚೆ
೩. ಕಾದಂಬರಿ ಜೊತೆಗೆ ಇತರೆ ಕಾದಂಬರಿಗಳನ್ನು ಹೋಲಿಸುವಂತಹದ್ದು.
೪. ನಾಟಕ ಕೃತಿ ವಿಮರ್ಶೆ ಮಾಡುವಾಗ ಯಾವ ಪ್ರಕಾರಕ್ಕೆ ಸೇರಿದೆ ಎಂಬುದರ ಮೂಲಕ ವಿಮರ್ಶೆಗೆ ಪ್ರಾರಂಭಿಸುತ್ತಾರೆ.
೫. ಕೃತಿಯ ಕಾಲದ ಬಗ್ಗೆ ಮತ್ತು ಸಾಂಸ್ಕೃತಿಕ ಪರಿಚಯದ ಬಗ್ಗೆ ಚರ್ಚೆ.
೬. ಕೃತಿಯು ಒಳಗೊಂಡಿರುವ ಪುಟಸಂಖ್ಯೆ, ಮುದ್ರಣ, ಪ್ರಕಾಶನದ ಬಗ್ಗೆ ಚರ್ಚೆ
೭. ಲೇಖಕರ ಸಮಾಜದಿಂದ ಬಂದ ಇತರ ಲೇಖಕರನ್ನು ಸೂಚಿಸುವುದು.
೮. ಕೃತಿಯಲ್ಲಿ ವರ್ಗ, ವರ್ಣ, ಸಂಘರ್ಷದ ಬಗ್ಗೆ ಚರ್ಚಿಸುವುದು.
೯. ಕೃತಿಯ ಶೀರ್ಷಿಕೆಯ ಬಗ್ಗೆ ಚರ್ಚಿಸುತ್ತಾರೆ.
೧೦. ಕೃತಿಯಲ್ಲಿನ ಭಾಷೆಯ ಬಗ್ಗೆ ಚರ್ಚಿಸುತ್ತಾರೆ.

ನರಹಳ್ಳಿ ಬಾಲಸುಬ್ರಹ್ಮಣ್ಯರವರ ಪುಸ್ತಕ ವಿಮರ್ಶೆಯ ನಿಲುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು

೧. ಮುಖ್ಯವಾದ ಒಂದು ಭಾಗವನ್ನು ಉದ್ಧರಿಸಿ ಅದರ ವಿಮರ್ಶೆಗೆ ತೊಡುಗುತ್ತಾರೆ.
೨. ಹಲವಾರು ಹೇಳಿಕೆಗಳನ್ನು ಹಾಕುತ್ತ ವಿಮರ್ಶೆ ಮಾಡುವುದು.
೩. ಖ್ಯಾತ ಲೇಖಕರ ಜೊತೆ ಮತ್ತು ಅವರ ಕೃತಿಗಳ ಜೊತೆ ಹೋಲಿಸುವುದು.
೪. ಪುಸ್ತಕದ ಕರ್ತೃವಿನ ಅಭಿಪ್ರಾಯಗಳನ್ನು ಇಟ್ಟುಕೊಂಡು ಪುಸ್ತಕ ವಿಮರ್ಶೆಗೆ ತೊಡುಗುವುದು.
೫. ಕೃತಿಯ ವಸ್ತುವನ್ನು ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ಹೇಳುವುದು.
೬. ಅನಗತ್ಯ ವಿವರಗಳ ಚರ್ಚೆಯನ್ನು ಕಾಣಬಹುದು.
೭. ಲೇಖಕರ ವಿವರಗಳ ಪ್ರಸ್ತಾಪ ಹೆಚ್ಚಾಗಿ ಇರುತ್ತದೆ.
೮. ಇತರ ಕೃತಿಯ ಪಾತ್ರಗಳ ಜೊತೆ ತುಲನಾತ್ಮಕವಾಗಿ ಚರ್ಚೆ ಮಾಡುವುದು.

ರಹಮತ್ ತರೀಕೆರೆರವರ ಪುಸ್ತಕ ವಿಮರ್ಶೆಯ ನಿಲುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು

೧. ಕರ್ತೃನಿಷ್ಠ ವಿಮರ್ಶೆ ಕಂಡುಬರುತ್ತದೆ.
೨. ಕರ್ತೃವಿನ ಪರಿಸರದ ಬಗ್ಗೆ ಮಾಹಿತಿ ಕಂಡುಬರುತ್ತದೆ.
೩. ಕೃತಿಯ ಹುಟ್ಟುವಿನ ಬಗೆಯನ್ನು ಅಥವಾ ಕರ್ತೃವಿನ ಕಾರಣ.
೪. ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ಮಾಹಿತಿ ಕಂಡುಬರುತ್ತದೆ.

ಟಿ.ಪಿ. ಅಶೋಕರವರು ವಿಮರ್ಶಕರ ಹೇಳಿಕೆಗಳ ಮೂಲಕ ಕೃತಿ ವಿಮರ್ಶೆಗೆ ತೊಡಗಿರುವುದನ್ನು ಕಾಣಬಹುದಾಗಿದೆ.

"ಜ್ಞಾನಪೀಠ ಪ್ರಶಸ್ತಿ ವಿಜೇತ 'ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರ ಐತಿಹಾಸಿಕ ಕಾದಂಬರಿ 'ಚಿಕವೀರ ರಾಜೇಂದ್ರ' ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲಿ ಒಂದು 'ನಾಡಿ ಪರೀಕ್ಷೆಯಿಂದ ಇಡೀ ದೇಹದ ಸ್ಥಿತಿಯನ್ನು ತಿಳಿಯಬಲ್ಲಂಥ ಮಾಸ್ತಿಯವರ ಸೂಕ್ಷ್ಮಕಲೆ ವಿಶ್ವ ಸಾಹಿತ್ಯದಲ್ಲಿ ಒಂದು ಒಳ್ಳೆಯ ಕೃತಿಯೆನಿಸುವ 'ಚಿಕವೀರ ರಾಜೇಂದ್ರ'ವನ್ನು ನಮಗೆ ಕೊಟ್ಟಿದೆ ಎನ್ನಬಹುದು' ಎಂದು ಡಾ. ಯು. ಆರ್. ಅನಂತಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ; ಮಾಸ್ತಿಯವರನ್ನು ಬ್ರೆಕ್ಟ್, ಥಾಮಸ್‌ಮನ್, ಕಾಫ್ಕಾ, ಕಮೂ, ಬಸವ, ಆರ್ವೆಲ್, ಯೇಟ್ಸ್ ಇಂಥವರ ಸಾಲಿಗೆ ಸೇರಿದ್ದಾರೆ. ಈ ಕಾದಂಬರಿಯ ಕೆಲವು ಭಾಗಗಳಲ್ಲಿ ಮಾಸ್ತಿಯವರ ಬರವಣಿಗೆ ಶೇಕ್ಸ್‌ಪಿಯರ್‌ನ ಮಟ್ಟದ್ದು ಎಂದು ಕೀರ್ತಿನಾಥ ಕುರ್ತಕೋಟಿಯವರೂ, ಕೆ.ಪಿ. ವಾಸುದೇವನ್ ಅವರೂ ಹೇಳಿದ್ದಾರೆ. ವಿ. ಎನ್. ಇನಾಂದಾರರು 'ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ' ಎಂಬ ಪುಸ್ತಕದಲ್ಲಿ ಮಾಸ್ತಿಯವರ ಕಾದಂಬರಿಯನ್ನು ಚರ್ಚಿಸಿದ್ದಾರೆ."[೧]

ನರಹಳ್ಳಿ ಬಾಲಸುಬ್ರಹ್ಮಣ್ಯರವರು ಮುಖ್ಯವಾದ ಒಂದು ಭಾಗವನ್ನು ಉದ್ಧರಿಸಿ ವಿಮರ್ಶೆಗೆ ತೊಡಗುತ್ತಾರೆ.

"ಕನ್ನಡ ಸಾಹಿತ್ಯ ನಮ್ಮೆಲ್ಲರಿಗಿಂತಲೂ ದೊಡ್ಡದು. ವಿಮರ್ಶೆಯಲ್ಲಿ ವ್ಯಕ್ತಿ ದ್ವೇಷಕ್ಕೆ ಮತ್ತು ಗುಂಪುಗುಳಿತನಕ್ಕೆ ಜಾಗವಿಲ್ಲ; ಕೇವಲ ಜನರ ಅಭಿಪ್ರಾಯಗಳಲ್ಲಿ ಹೋಲಿಕೆಗಳಿದ್ದ ಮಾತ್ರಕ್ಕೆ ಅವರೆಲ್ಲ ಒಂದು ಗುಂಪು, ಬೇರೆಯವರನ್ನು ದ್ವೇಷಿಸುತ್ತಾರೆ ಎಂದು ಹೇಳುವುದು ಸಾಹಿತ್ಯ ವಿಮರ್ಶೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಒಬ್ಬ ವಿಮರ್ಶಕನ ಅಭಿಪ್ರಾಯ ತಪ್ಪಿದ್ದರೆ ಅದು ತಪ್ಪೆಂದು ಸಿದ್ಧಮಾಡಿ ತೋರಿಸುವುದು, ಆ ಅಭಿಪ್ರಾಯಗಳಿಗೆ ಆಧಾರವೇನು ಎಂದು ಕೇಳುವುದು ಮತ್ತೊಬ್ಬ ವಿಮರ್ಶಕನ ಕೆಲಸ ಆ ಕೆಲಸ ಮಾಡಿದ ವಿಮರ್ಶಕ ವಿಮರ್ಶೆ ಮಾಡದೆ ಇರುವುದೇ ಒಳ್ಳೆಯದು. ಈ ಹೊಣೆಗಾರಿಕೆಯನ್ನು ನಾವು ಒಪ್ಪಿಕೊಳ್ಳದಿದ್ದರೆ ಸಾಹಿತ್ಯ ವಿಮರ್ಶೆ ಬೀದಿ ಜಗಳವಾಗುತ್ತದೆ; ಅತಿಮುಖ್ಯವಾಗಿ ಬೌದ್ಧಿಕ ಕೆಲಸವೊಂದು ನಿಂತು ಹೋಗದಿದ್ದರೂ ಆ ಕೆಲಸಕ್ಕೆ ಅನವಶ್ಯಕ ಅಡಚಣೆಯುಂಟಾಗುತ್ತದೆ."[೨]

ರಹಮತ್ ತರೀಕೆರೆಯವರಲ್ಲಿ ಕರ್ತೃನಿಷ್ಠ ವಿಮರ್ಶೆ ಕಂಡುಬರುತ್ತದೆ.

"ಕತೆ ಹೇಳುವ ಕಾಯಕದಲ್ಲಿ (ಕುಂ.ವೀ.ಯವರ 'ಬರೀಕತೆಯಲ್ಲೋ ಅಣ್ಣಾ) ಈ ಕೃತಿಯನ್ನು ಕುರಿತು ನೋಡುವುದಾದರೆ ಕುಂ.ವೀ. ಸಣ್ಣಕಥೆಗಳ ಜೊತೆಗೆ ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಸಾಧಾರಣ ಮಟ್ಟದ ಕಾದಂಬರಿಗಳು, ಅವುಗಳಲ್ಲಿ ಕೆಲವು

ಸಿನಿಮಾ ಕೂಡ ಆದವು. ೧೯೯೮ರಲ್ಲಿ ಬಂದ ಬೃಹತ್ ಕಾದಂಬರಿ 'ಶಾಮಣ್ಣ' ಅವರ ಮಹತ್ತರ ಪ್ರಯತ್ನಗಳಲ್ಲಿ ಒಂದಾಗಿದೆ. ಈಗ 'ಅರಮನೆ' ಎಂಬ ಮತ್ತೊಂದು ಬೃಹತ್ ಕಾದಂಬರಿ ಪ್ರಕಟವಾಗುತ್ತಿದೆ. ಸಣ್ಣಕಥೆಗಾರರೊಬ್ಬರು, ಯಾಕೆ ಹೀಗೆ ಬೃಹತ್ ಕಾದಂಬರಿ ಬರೆಯಲು ಹವಣಿಸುತ್ತಿದ್ದಾರೋ ತಿಳಿಯದು. ಅವು ಮಹತ್ತಿಗೆ ಮಾಡಿದ ಯತ್ನಗಳೇ ಹೊರತು, ನಮ್ಮ ಮಹತ್ವದ ಕಾದಂಬರಿಗಳಾಗುತ್ತಿಲ್ಲ ಎನ್ನುವುದು ವಿಚಿತ್ರ ಸತ್ಯವಾಗಿದೆ. ಇದನ್ನೆಲ್ಲಾ ನೋಡಿದಾಗ ಕುಂ.ವೀ. ಪ್ರತಿಭೆ ಸಮರ್ಥವಾಗಿ ವ್ಯಕ್ತವಾಗುವ ಪ್ರಕಾರ ಸಣ್ಣಕಥೆಯೇ ಇರಬಹುದು ಅನಿಸುತ್ತದೆ. ನೂರು ಕಥೆಗಳನ್ನು ರಾಶಿ ಹಾಕಿದರೂ ಇದು ಕುಂ.ವೀ.ಯವರದೇ ಕತೆ ಎಂದು ಗುರುತಿಸುವಂತೆ ಕತೆಗಳು ತಮ್ಮ ಚಹರೆಯನ್ನು ಪಡೆದುಕೊಂಡು ಬಿಟ್ಟಿವೆ. ಕುಂ.ವೀ. ಕತೆಗಳ ಮುಖ್ಯ ಲಕ್ಷಣಗಳೆಂದರೆ: ಹಳ್ಳಿಗಾಡಿನ ಜಮೀನ್ದಾರಿ ವ್ಯವಸ್ಥೆಯನ್ನು ಶಾಕ್ ಕೊಡುವಂತೆ ಚಿತ್ರಿಸುವುದು; ಆ ವ್ಯವಸ್ಥೆಯ ಒಳಗಿನಿಂದಲೇ ಅದಕ್ಕೆ ಸವಾಲು ಹಾಕಿ ಅಲ್ಲಾಡಿಸುವಂತಹ ಅಧೋಲೋಕದ ಪ್ರತಿರೋಧಿ ನಾಯಕರನ್ನು ಚಿತ್ರಿಸುವುದು; ಆ ಪ್ರತಿರೋಧದ ಚಿತ್ರಣಕ್ಕಾಗಿ ವಿಡಂಬನೆಯಿಂದ ತುಂಬಿದ ಒಂದು ತಮಾಶೆಯ ಕಥನ ಕ್ರಮವನ್ನು ಬಳಸುವುದು."[೩]

ಟಿ.ಪಿ. ಅಶೋಕರವರು ಖ್ಯಾತ ಲೇಖಕರ ಕೃತಿಗಳನ್ನು ವಿಮರ್ಶೆ ಮಾಡುವಾಗ ನೇರವಾಗಿ ಕೃತಿಯನ್ನು ವಿಮರ್ಶೆ ಮಾಡದೆ ಅದಕ್ಕೆ ಬದಲಾಗಿ ಇತರ ವಿಮರ್ಶಕರ, ಲೇಖಕರ, ಹೇಳಿಕೆಗಳ ಮೂಲಕ ವಿಮರ್ಶೆಗೆ ತೊಡಗುವುದನ್ನು ಕಾಣುತ್ತೇವೆ ಇಲ್ಲಿ ಇದರ ಅವಶ್ಯಕವೇ? ಕೃತಿಯ ಕರ್ತೃವನ್ನು ಕುರಿತು ಬೇರೆಯವರು ಆತನನ್ನು ಹೊಗಳುವುದು, ವೈಭವೀಕರಿಸುವುದು ಇದರ ಅವಶ್ಯಕತೆ ಇಲ್ಲ ಎಂದು ಹೇಳಬಹುದು. ನೇರವಾಗಿ ಕೃತಿಯನ್ನು ಪ್ರವೇಶಿಸಿ ಕೃತಿಯಲ್ಲಿರುವ ಅಂಶಗಳ ಜೊತೆಗೆ ಚರ್ಚಿಸಬಹುದಾಗಿತ್ತು. ಆದರೆ ಅಶೋಕರವರು ಲೇಖಕರ, ವಿಮರ್ಶಕರ ಹೇಳಿಕೆಗಳ ಮೂಲಕ ವಿಮರ್ಶೆ ಆರಂಭಿಸಿದ್ದಾರೆ. ನಂತರ ನರಹಳ್ಳಿಯವರು ಮುಖ್ಯವಾದ ಒಂದು ಭಾಗವನ್ನು ಉದ್ಧರಿಸಿ ವಿಮರ್ಶೆಗೆ ತೊಡಗುವುದನ್ನು ಗಮನಿಸಿದರೆ ಇದರಲ್ಲಿ ಕೃತಿಯ ಬಗೆಗೆ ಯಾವುದೇ ವಿವರಗಳಿಲ್ಲ ಆದರೆ ಈ ಕೃತಿ ಸೇರಿರುವ ಪ್ರಕಾರವನ್ನು ಕುರಿತು ವಿಶ್ಲೇಷಣೆ ಮಾಡುವುದನ್ನು ಸಮರ್ಥಿಸಿಕೊಳ್ಳುವ ದಾಟಿಯಲ್ಲಿ ಈ ಉಲ್ಲೇಖವನ್ನು ಮಾಡಿದ್ದಾರೆ. ಇದರ ಮುಖೇನ ಕೃತಿ-ಸಂಸ್ಕೃತಿ, ಕೃತಿಯೊಳಗಿನ ವಿಶ್ಲೇಷಣೆಯನ್ನು ಒಪ್ಪಿಕೊಳ್ಳುತ್ತಾ ಪುಸ್ತಕ ವಿಮರ್ಶೆ ಆರಂಭವಾಗಿದೆ. ಇದರ ಜೊತೆಯಲ್ಲಿ ಸ್ವವಿಶ್ಲೇಷಣೆಯನ್ನು ಸೇರಿಸುವ ಯತ್ನವಿದೆ ಮತ್ತು ಅಪ್ರಸ್ತುತತೆಯಿಂದ ಪ್ರಸ್ತುತದೆಡೆಗೆ ಗಮನ ಸೆಳೆಯುವ ಮನೋಭಾವವು ಕೂಡ ಇದೆ. ನಂತರ ರಹಮತ್ ತರೀಕೆರೆಯವರಲ್ಲಿ ಕರ್ತೃನಿಷ್ಠ ವಿಮರ್ಶೆಯನ್ನು ಕಾಣಬಹುದಾಗಿದೆ. ಕೃತಿಯನ್ನು ಕುರಿತು ನೋಡುವುದಾದರೆ ಕುಂ.ವೀ. ಅವರು ಬರೆದಂತಹ 'ಬರೀಕತೆಯಲ್ಲೋ ಅಣ್ಣ' ಕಥಾಸಂಕಲನದಲ್ಲಿರುವ ಕಥೆಗಳ ಬಗ್ಗೆ ವಿವರವಾಗಿ ತಿಳಿಸಿದರೆ ಸಾಕಾಗುತ್ತಿತ್ತು. ಆದರೆ ಅದಕ್ಕಿಂತ

ಹೆಚ್ಚು ಆಧ್ಯತೆಯನ್ನು ಅದನ್ನು ರಚಿಸಿದಂತಹ ಕರ್ತೃವಿಗೆ ಮತ್ತು ಕರ್ತೃವಿನ ಪರಿಚಯಕ್ಕೆ ಆಧ್ಯತೆ ನೀಡಿರುವುದನ್ನು ಗಮನಿಸಬಹುದಾಗಿದೆ. ಹಾಗಾಗಿ ತರೀಕೆರೆಯವರು ಕರ್ತೃವನ್ನು ಬಿಟ್ಟು ಕೃತಿಯ ಬಗ್ಗೆ ಹೆಚ್ಚು ಮಾಹಿತಿ ನೀಡಿದ್ದರೆ ಒಳ್ಳೆಯದಿತ್ತು ಎಂದು ಅಭಿಪ್ರಾಯ ಪಡಬಹುದು.

ಟಿ.ಪಿ. ಅಶೋಕರವರು ಕೃತಿಯಲ್ಲಿನ ಕೇಂದ್ರವಸ್ತು ಮತ್ತು ಕೇಂದ್ರ ಪಾತ್ರಗಳ ಜೊತೆಗೆ ಚರ್ಚೆ ಪ್ರಾರಂಭಿಸುತ್ತಾರೆ.

"ತಲೆದಂಡ ಮೂರು ಅಂಕಗಳ ಒಟ್ಟು ಹದಿನಾರು ದೃಶ್ಯಗಳ ಒಂದು ಪೂರ್ಣ ಪ್ರಮಾಣದ ನಾಟಕ. ಮೊದಲ ಅಂಕದಲ್ಲಿ ಭಂಡಾರಿಯಾಗಿದ್ದ ಬಸವಣ್ಣ ಎದುರಿಸುವ ಆಪಾದನೆಗಳು ಮತ್ತು ಅದರ ಪರಿಣಾಮಗಳ ಸುತ್ತ ದೃಶ್ಯಗಳು ಕಟ್ಟಿಕೊಳ್ಳುತ್ತಿವೆ. ಎರಡನೆಯ ಅಂಶದಲ್ಲಿ ಮಧುವರಸನ ಮಗಳನ್ನು ಹರಳಯ್ಯನ ಮಗ ಮದುವೆಯಾಗುವ ಸಂದರ್ಭದ ಪರಿಶೀಲನೆ ಇದೆ. ಮೂರನೆಯ ಅಂಕದಲ್ಲಿ ಸೋವಿದೇವ ತನ್ನ ಬಿಜ್ಜಳನನ್ನು ಬಂಧಿಸಿ ತಾನು ರಾಜನಾಗುವ ಪ್ರಸಂಗ ವರ್ಣನೆ ಇದೆ."[೪]

ನರಹಳ್ಳಿಯವರು ಹಲವಾರು ಹೇಳಿಕೆಗಳನ್ನು ಹಾಕುತ್ತಾ ವಿಮರ್ಶೆ ಮಾಡುತ್ತಾರೆ.

"ಕನ್ನಡದಲ್ಲಿ ಉತ್ತಮ ವಿಮರ್ಶೆ ಬರುತ್ತಿಲ್ಲ ನಿಜವಾಗಿ ವಿಮರ್ಶಾ ಸಾಹಿತ್ಯ ಸರಿಯಾಗಿ ಬೆಳೆಯಲೇ ಇಲ್ಲ. ಇದೊಂದು ದೊಡ್ಡ ಕೊರತೆ ಎಂಬ ಮಾತು ಈಗ್ಗೆ ಅನೇಕ ವರ್ಷಗಳಿಂದ ಕೇಳಿಬರುತ್ತಿದೆ. ಈ ಮಾತು ಬಹಳ ಮಟ್ಟಿಗೆ ನಿಜವೂ ಹೌದು. ಇದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಉತ್ತಮ ಸಾಹಿತ್ಯ ವಿಮರ್ಶೆಗೆ ಸಮರ್ಥರಾದವರು ಇಲ್ಲ ಎಂಬುದಲ್ಲ, ಅಂಥ ವಿಮರ್ಶೆಗೆ ಬೇಕಾದ ನೈತಿಕ ಧೈರ್ಯ ಬೆಳೆಯಲಿಲ್ಲ ಎಂಬುದೇ ಆಗಿದೆ. . . . ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ–ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ."[೫]

"ನವ್ಯ ಸಾಹಿತ್ಯದ ಮೊದಲ ದಿನಗಳಲ್ಲಿ ನನ್ನಂಥವರಿಗೆ ಇದ್ದ ಪರಿಪೂರ್ಣ ಓದುಗರೆಂದರೆ – ಎಂ.ಜಿ.ಕೆ.– ಸತತವಾಗಿ ಆತ್ಮವಿಮರ್ಶೆ ಇಲ್ಲದೇ ಒಬ್ಬ ಲೇಖಕ ಬರೆಯಲಾರ ಎಂಬುದನ್ನು ನಮಗೆ ಮನದಟ್ಟು ಮಾಡಿದವರು. ತಮ್ಮ ಸ್ವಂತದ ಉದಾಹರಣೆಯಿಂದಲೇ – ಮುಖ್ಯವಾಗಿ ಇಬ್ಬರು. ಎಂ.ಜಿ.ಕೆ. ಮತ್ತು ಅಡಿಗರು, ಹೀಗೆ ಸಹಸ್ರಾರು ಓದುಗರು ಕೊಡಲಾರದ ಪೋಷಣೆಯನ್ನು ನಮ್ಮ ಬರವಣಿಗೆಯ ಪ್ರಾರಂಭದಲ್ಲಿ ಕೊಟ್ಟವರು."[೬]

"ಕಾದಂಬರಿ ಒಂದು ಕಲಾಸೃಷ್ಟಿ ಎಂದು ನಾವು ಒಪ್ಪಿಕೊಂಡಿಲ್ಲ ಉಳಿದ ಕಲಾಸೃಷ್ಟಿಗಳಂತೆ ಕಾದಂಬರಿಯೂ ಕೂಡ ಒಂದು 'ಬಂಧ' (Form). ವಿಮರ್ಶಕ ತಾನು ವಿಮರ್ಶಿಸುವ ಕಾದಂಬರಿಯ ಒಟ್ಟು ಶಿಲ್ಪಕ್ಕೂ ಗಮನ ಕೊಡಬೇಕು; ಒಂದು ಕಾದಂಬರಿಯ ಶಿಲ್ಪ ಮತ್ತು

ಅದರ ಅರ್ಥ, ಅದರ ವಿವರಗಳೆಲ್ಲ, ಆ ವಿವರಗಳನ್ನೆಲ್ಲಾ ಒಳಗೊಂಡು ಅವಕ್ಕೆಲ್ಲ ಒಂದು ಅರ್ಥಪೂರ್ಣ ಸಂಬಂಧ ಕಲ್ಪಿಸುವ ಕಲ್ಪನೆ ಮತ್ತು ಶಕ್ತಿಯಲ್ಲಿದೆ ಎಂದು ಒಪ್ಪಿಕೊಂಡಂತಾಗುತ್ತದೆ."[೭]

ರಹಮತ್ ತರೀಕೆರೆಯವರು ಕರ್ತೃವಿನ ಪರಿಸರದ ಬಗ್ಗೆ ಕುರಿತು ವಿಮರ್ಶೆ ಪ್ರಾರಂಭಿಸುತ್ತಾರೆ.

"ನಾನು ಕಡಲ ತಡಿಯಲ್ಲಿ ಬೆಳೆದವಳು. ತುಳುನಾಡಿನ ಸಿರಿಯನ್ನು ಕಂಡವಳು. ನಾನು ಹುಟ್ಟಿದ್ದು ಬೆಳೆದದ್ದೂ ಹೊರಜಗತ್ತನ್ನು ನೋಡಿದ್ದು ಎಲ್ಲ ಅಲ್ಲೇ, ಭೂತ–ಕೋಲ, ಕಂಬಳ, ತಾಳಮದ್ದಲೆ, ಯಕ್ಷಗಾನ ದಿಗಿಣದ ಜೊತೆ ಕಡಲು, ತೀರ, ಅಲೆ–ಬಲೆ, ಕರೆಗಾಳಿ, ಮೀನಿನ ವಾಸನೆ....... ಎಲ್ಲವೂ ನನ್ನ ಒಳಹೊರಗನ್ನು ತುಂಬಿಕೊಂಡಿತ್ತು. ಅದು ನನ್ನ ಒಳಗೋ ನಾನು ಅದರ ಒಳಗೋ......... ಹೀಗಿರುವಾಗ ನಾನು ಕಾರ್ಯ ನಿಮಿತ್ತ ಈ ಕಡಲಿನಿಂದ ತುಳುಮಣ್ಣಿನಿಂದ ದೂರ ಸರಿದೆ. ನೆಲ, ನೀರು, ಆಕಾಶ, ಬಟ್ಟೆ, ರುಚಿ, ವಾಸನೆ, ಜನ ಎಲ್ಲದಕ್ಕೂ ಅರ್ಥ–ಮಹತ್ವ ಇರುತ್ತದೆಂದು ನನಗೆ ಗೊತ್ತಾಗಿದ್ದೇ ಆವಾಗ. ನನ್ನ ಕಾಲ ಕೆಳಗಿನ ನೆಲವೇ ಕುಸಿದು ಅತಂತ್ರ ಸ್ಥಿತಿಯಲ್ಲಿ ನಾನು ತಬ್ಬಲಿಯಾಗಿ ನರಳಿದೆ. ಮಾತಿನಿಂದ ಮೌನಕ್ಕೆ ಬಹಿರ್ಮುಖದಿಂದ ಅಂತರ್ಮುಖಕ್ಕೆ ನಾನು ನಡೆದದ್ದೂ ಆಗ. ಆ ಅಂತರ್ಮುಖತೆಯೇ ಇಲ್ಲಿನ ಕಥೆಗಳಿಗೆ ಜೀವ ತುಂಬಿದೆ."[೮]

"ಅಮೃತಾರ ವೈಯಕ್ತಿಕ ಜೀವನವೂ ಹಲವಾರು ವೈಪರಿತ್ಯಗಳಿಂದ ಕೂಡಿತ್ತು. ಅವರು ಪ್ರೇಮಿಸಿದ್ದು ಯಾರನ್ನೋ; ಲಗ್ನವಾಗಿದ್ದು ಮತ್ಯಾರನ್ನೊ, ಬಾಳಿನ ಹೆಚ್ಚು ಕಾಲ ಕಳೆದಿದ್ದು ಯಾರ ಜೊತೆಯೋ – ಪ್ರತಿಭಾನಂದಕುಮಾರ್ ಅವರ 'ನಾವು ಹುಡುಗಿಯರೇ ಹೀಗೆ' ಕವನದ ನಾಯಕಿಯಂತೆ. ತಾವು ಮದುವೆಯಾದ ಗಂಡ ಪ್ರೀತಮ್‌ಸಿಂಗ್, ತಮ್ಮ ಮನೋಭಾವಕ್ಕೆ ಸರಿಹೋಗುವುದಿಲ್ಲ ಎಂಬ ಕಾರಣದಿಂದ ಅಮೃತಾ ವಿಚ್ಛೇದನ ಕೊಟ್ಟರು. ಅವರು ಉರ್ದು ಲೇಖಕ ಸಾಹಿರ್ ಲೂದಿಯಾನ್ವಿ ಅವರನ್ನು ಗಾಢವಾಗಿ ಪ್ರೇಮಿಸುತ್ತಿದ್ದರು. ಸಾಹಿರ್ ಅವರಿಗೆ ದಕ್ಕಲಿಲ್ಲ. ಕೊನೆಗೆ ಅಮೃತಾಗೆ ಬದುಕಿನಲ್ಲಿ ಸಿಕ್ಕ ಸಂಗಾತಿ, ಕಲಾವಿದ ಅಮ್ರೋಜ್, ತಮ್ಮ ಬಗ್ಗೆ ಜಗತ್ತು ಏನನ್ನುತ್ತದೆ ಎಂದು ಲೆಕ್ಕಿಸದೆ ಅಮೃತಾ ಬದುಕಿದ್ದರು; ಅದಕ್ಕೆ ಪ್ರತಿಯಾಗಿ ಬಂದ ಟೀಕೆಗೆ ನೊಂದುಕೊಂಡರು. ನೊಂದ ನೋವನೆಲ್ಲ ಸಾಹಿತ್ಯದಲ್ಲಿ ತೋಡಿಕೊಂಡರು – ನಮ್ಮ ಅಕ್ಕಮಹಾದೇವಿಯಂತೆ."[೯]

ಟಿ.ಪಿ. ಅಶೋಕರವರು ಕೃತಿಯಲ್ಲಿನ ಕೇಂದ್ರವಸ್ತು ಮತ್ತು ಕೇಂದ್ರಪಾತ್ರಗಳನ್ನು ಇಟ್ಟುಕೊಂಡು ಚರ್ಚೆಗೆ ಪ್ರಾರಂಭಿಸುತ್ತಾರೆ. ಇದು ನಿಜವಾದಂತಹ ವಿಮರ್ಶೆ ಯಾಕೆಂದರೆ ನಾವು ಕೃತಿಯನ್ನು ಕುರಿತು ವಿಮರ್ಶೆಗೆ ಬಂದರೆ ಮುಖ್ಯವಾಗಿ ಅದರ ತಿರುಳು ಕೇಂದ್ರ ವಸ್ತುವಿನಲ್ಲಿ ಇರುತ್ತದೆ.

ಅದನ್ನು ಪಾತ್ರಗಳ ಮೂಲಕ ಚರ್ಚಿಸಿದಾಗ ಕೃತಿಯು ಅರ್ಥಪೂರ್ಣವಾಗುತ್ತದೆ. ಮತ್ತು ಓದುಗರಿಗೂ, ಸಹೃದಯರಿಗೂ, ಆನಂದವನ್ನು ಕೊಟ್ಟ ಹಾಗೆ ಆಗುತ್ತದೆ. ನಂತರ ನರಹಳ್ಳಿಯವರೂ ಹಲವಾರೂ ಹೇಳಿಕೆಗಳನ್ನು ಹಾಕುತ್ತಾ ವಿಮರ್ಶೆಗೆ ತೊಡಗಿದ್ದಾರೆ. ಎಂ.ಜಿ. ಕೃಷ್ಣಮೂರ್ತಿಯವರ ಕೃತಿ–ಸಂಸ್ಕೃತಿ ವಿಮರ್ಶಾ ಲೇಖನಗಳ ಸಂಕಲನವನ್ನು ಕೈಗೆತ್ತಿಕೊಂಡು ಅದನ್ನು ಏಳು ಪುಟದಷ್ಟು ವಿಮರ್ಶೆ ಮಾಡಿದ್ದಾರೆ. ಆದರೆ ಅದರಲ್ಲಿ ಎಂಟು ಜನರ ಹೇಳಿಕೆಗಳು ಕಂಡುಬಂದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಏಕೆಂದರೆ 'ಮೂಗಿಗೆ ಮೂಗುತಿಭಾರ' ಎನ್ನುವ ಹಾಗೆ ಏಳುಪುಟದ ವಿಮರ್ಶೆಗೆ ಎಂಟು ಜನರ ಹೇಳಿಕೆಗಳು ಭಾರವೆನಿಸಿವೆ. ಇಡೀ ಕೃತಿ ವಿಷಯಕ್ಕೆ ಕೈ ಹಾಕದೆ ಕೇವಲ ಬರೀ ವಿವಿಧ ಲೇಖಕರ, ಕೃತಿಕಾರರ ಹೇಳಿಕೆಗಳನ್ನು ತಿಳಿಸುತ್ತಾ ಹೋಗಿದ್ದಾರೆ. ಈಗಾದರೆ 'ಪುಸ್ತಕ ವಿಮರ್ಶೆ' ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದು ನಿಲ್ಲುತ್ತದೆ. ಹಾಗಾಗಿ ವಿಮರ್ಶಕರು ನೇರವಾಗಿ ಕೃತಿಗೆ ಪ್ರವೇಶಿಸಿ ಕೃತಿಯ ಕುರಿತು ಚಿಂತನೆ ನಡೆಸಿದರೆ ಚೆನ್ನಾಗಿರುತ್ತಿತ್ತು ಈ ಇಲ್ಲದ ಸಲ್ಲದ ಹೊಂದಾಣಿಕೆಯೇ ಆಗದ ಹೇಳಿಕೆಗಳನ್ನು ನೀಡುತ್ತಾ ಪುಸ್ತಕ ವಿಮರ್ಶೆಗೆ ತೊಡಗಿರುವುದು ಬಹಳ ನೋವಿನ ಸಂಗತಿಯಾಗಿದೆ. ಹಾಗಾಗಿ ಅನವಶ್ಯಕ ವಿಷಯವನ್ನು ವಿಮರ್ಶೆಗಳಲ್ಲಿ ಬರೆಯುವುದು ಸಲ್ಲ ಎಂದು ಹೇಳುತ್ತೇವೆ. ಮತ್ತು ರಹಮತ್ ತರೀಕೆರೆಯವರು ಕರ್ತೃವಿನ ಪರಿಸರದ ಬಗ್ಗೆ ಕುರಿತು ವಿಮರ್ಶೆ ಪ್ರಾರಂಭಿಸುತ್ತಾರೆ. ಒಂದು ಕೃತಿಯ ವಿಮರ್ಶೆಗೆ ಬಂದಾಗ ಆ ಕೃತಿಯ ತಾತ್ವಿಕ ಚಿಂತನೆಯನ್ನು ಕುರಿತು ವಿಮರ್ಶೆ ಮಾಡುವುದು ಒಳ್ಳೆಯದು ಕೃತಿಯನ್ನು ರಚಿಸಿದಂತಹ ಕರ್ತೃವಿನ ಪರಿಸರದ ಬಗ್ಗೆ ಬರೆಯುತ್ತಾ ಹೋದರೆ ವಿಮರ್ಶೆಯು ಹೊಳಪನ್ನು ಕಳೆದುಕೊಳ್ಳುವುದರ ಮೂಲಕ ಪುಟ ಮೀರುವ ವಿಮರ್ಶೆ ಎನಿಸಿಕೊಳ್ಳುತ್ತದೆ. ಅಮೃತಾರ ಆತ್ಮಚರಿತ್ರೆಯಾದ ಗಾಯಗಳ ಬರಹ (ರಸೀದಿ ತಿಕೇಟು)ದಲ್ಲಿ ಅವರನ್ನು ಕುರಿತು ವಿಮರ್ಶೆ ಮಾಡುವುದು ಅವರು ಬರೆದಂತಹ ಕೃತಿಯ ತಾತ್ವಿಕ ವಿಚಾರ ಮತ್ತು ಅದು ಸಮಾಜಕ್ಕೆ ನೀಡುವ ಸಂದೇಶದ ಬಗ್ಗೆ ಒಳಿತು, ಕೆಡುಕುಗಳ ಬಗ್ಗೆ ಕುರಿತು ಕೃತಿಯನ್ನು ವಿಮರ್ಶೆ ಮಾಡುವುದು ಒಳ್ಳೆಯದು ಆದರೆ ಅಮೃತಾರ ಜೀವನದ ಬಗ್ಗೆ ಅವಳು ಅನುಭವಿಸಿದ ದಾಂಪತ್ಯ ಜೀವನದ ಬಗ್ಗೆಯೇ ಪುಟಗಟ್ಟಲೇ ಹೇಳಿಕೆ ಕೊಡುವುದು ಸರಿಯಲ್ಲ ಎಂದು ಅಭಿಪ್ರಾಯಪಡಬಹುದು.

ಟಿ.ಪಿ. ಅಶೋಕರವರು ಕೃತಿಯು ಒಳಗೊಂಡಿರುವ ಪುಟಸಂಖ್ಯೆ, ಮುದ್ರಣ, ಪ್ರಕಾಶನದ ಕುರಿತು ಚರ್ಚೆ ಮಾಡುತ್ತಾರೆ.

"ಕಾರಂತರು ಈ ಪುಸ್ತಕವನ್ನು ಬರೆದು ಸುಮಾರು ಮೂವತ್ತು ವರ್ಷಗಳೇ ಆಗಿ ಹೋಗಿವೆ. ೧೯೬೨ರಲ್ಲಿ ಎರಡನೆಯ ಮುದ್ರಣ ಕಂಡಿದ್ದು 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕೆಲ ತಿಂಗಳ ಹಿಂದೆ ಮತ್ತೆ ಸಾಗರದ ಪ್ರಕಾಶನದಿಂದ ಹೊರಬಂದಿದೆ. ಇದು ಪರಿಷ್ಕರಿಸಿದ,

ವಿಸ್ತರಿಸದ ಆವೃತ್ತಿ ೧೯೫೦ರ ವರೆಗಿನ ತಮ್ಮ ಅನುಭವಗಳನ್ನು ಮೊದಲ ಆವೃತ್ತಿಯಲ್ಲೂ ೧೯೬೦ರ ವರೆಗಿನ ಅನುಭವಗಳನ್ನು ಎರಡನೆಯ ಆವೃತ್ತಿಯಲ್ಲೂ ಸೇರಿಸಿದ್ದ ಕಾರಂತರು ಮುಂದೆ 'ಸ್ಮೃತಿ ಪಟಲದಿಂದ' ಎಂಬ ಬೇರೊಂದು ಕೃತಿಯು........"[೧೦]

ನರಹಳ್ಳಿ ಬಾಲಸುಬ್ರಹ್ಮಣ್ಯರವರು ಖ್ಯಾತ ಲೇಖಕರ ಜೊತೆ ಅವರ ಕೃತಿಗಳ ಜೊತೆ ಹೋಲಿಸುತ್ತಾ ಚರ್ಚೆ ಮಾಡುತ್ತಾರೆ.

ಉದಾಹರಣೆಯಾಗಿ ನೋಡುವುದಾದರೆ ಯು.ಆರ್. ಅನಂತಮೂರ್ತಿಯವರ 'ಭವ' ಕಾದಂಬರಿ, ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿಕ್ರಾಸ್' ಕಾದಂಬರಿ ಮತ್ತು ಗಿರೀಶ್‌ಕಾರ್ನಾಡ್‌ರ 'ಅಗ್ನಿ ಮತ್ತು ಮಳೆ' ನಾಟಕವನ್ನು ನೋಡಬಹುದು.

ರಹಮತ್ ತರೀಕೆರೆಯವರು ಕೃತಿಯ ಹುಟ್ಟುವಿನ ಬಗೆಯನ್ನು ಅಥವಾ ಕರ್ತೃವಿನ ಕಾರಣದ ಮುಖಾಂತರ ವಿಮರ್ಶೆಗೆ ತೊಡಗುತ್ತಾರೆ.

"ಅಂದು ಗೆಳೆಯ ಎನ್. ಕೆ. ಮೋಹನರಾಂ 'ಸತ್ತವರ ನೆರಳು' ನಾಟಕದೊಂದಿಗೆ ಇದ್ದಾಗ 'ನನ್ನನ್ನೂ ಕೂಡ ನಾಟಕಕ್ಕೆ ಸೇರಿಸಿಕೊಳ್ಳು' ಎಂದು ಕೇಳಿದೆ ಅವನು ನನ್ನನ್ನು ಮೇಲಿನಿಂದ ಕೆಳಗಿನವರೆಗೆ ನೋಡಿದ. ನನ್ನ ಕಾಲನ್ನು ವಿಶೇಷವಾಗಿ ಗಮನಿಸಿ 'ರಂಗಕ್ಕೆ ನಿನ್ನಂಥವನ ಸೇರ್ಪಡೆ ಸಾಧ್ಯವೇ ಇಲ್ಲ' ಅಂದು ಬಿಟ್ಟ. ಈಗ ನಾನು ಏನು ಹೇಳಬಹುದು?"[೧೧]

"ಕನ್ನಡ ರಂಗಭೂಮಿಯಲ್ಲಿ ಸಂಘಟಕರಾಗಿ ನಿರ್ದೇಶಕರಾಗಿ ಪ್ರಸಿದ್ಧರಾದ ಸಿ.ಜಿ. ಕೃಷ್ಣಸ್ವಾಮಿಯವರ ಆತ್ಮಕಥೆ ಶುರುವಾಗುವುದು ಇಂತಹದೊಂದು ಅಪಮಾನದ ನೆನಪಿನಿಂದ ಈ ನೆನಪಿನ ಕೊನೆಯಲ್ಲಿ ಒಂದು ಪ್ರಶ್ನೆಯಿದೆ. ಈ ಪ್ರಶ್ನೆಗೆ ಕೊಟ್ಟ ಉತ್ತರದ ರೂಪದಲ್ಲಿ ಇಡೀ ಆತ್ಮಕತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಈ ಪ್ರಶ್ನೆಯಲ್ಲಿ ಕೆಚ್ಚಿದೆ; ಪ್ರತಿಕೂಲವಾದ ಸನ್ನಿವೇಶಗಳಲ್ಲಿ ನಾನು ಬೆಳೆದೆ ಮತ್ತು ಸಾಧನೆ ಮಾಡಿದೆ ಎಂಬ ಗೆಲುವಿನ ದನಿಯಿದೆ. ಕೃತಿಯ ಶೀರ್ಷಿಕೆಯಾಗಿರುವ 'ಕತ್ತಾಲೆ ಬೆಳದಿಂಗಳೊಳಗೆ' ಎಂಬುದೇ ಒಂದು ರೂಪಕವಾಗಿದ್ದು, ಲೇಖಕರ ಗೆಲುವುಗಳ ದನಿಯನ್ನು ಇಟ್ಟುಕೊಂಡಿರುವಂತಿದೆ."[೧೨]

"ಒಮ್ಮೆ ಪಂಜಾಬಿ ಲೇಖಕಿ ಅಮೃತಾ ಪ್ರೀತಂ ಆತ್ಮಕತೆ ಬರೆಯುವ ಆಶಯವನ್ನು ಸಹಲೇಖಕ ಖುಶವಂತಸಿಂಗ್ ಎದುರು ತೋಡಿಕೊಂಡರಂತೆ. ಅದಕ್ಕೆ ಖುಶವಂತ್ ತಮಾಷೆಯಿಂದ 'ನಿನ್ನ ಜೀವನದಲ್ಲಿ ಆತ್ಮಕಥೆ ಬರೆಯುವಂತಹದ್ದು ಏನಿದೆ? ಇರುವಷ್ಟನ್ನು ರಸೀದಿ ತಿಕೇಟಿನ ಒಂಬದಿಯಿರುವ ಜಾಗದಲ್ಲಿ ಬರೆಯಬಹುದು' ಎಂದರಂತೆ, ಈ ಕೆಣಕು ಮಾತನ್ನೇ ಪ್ರೇರಣೆಯಾಗಿ ಮಾಡಿಕೊಂಡು ಅಮೃತಾ ತಮ್ಮ ಆತ್ಮಕಥೆ ಬರೆದರು ಮತ್ತು ಅದಕ್ಕೆ 'ರಸೀದಿ ತಿಕೇಟು' ಎಂದೇ ಹೆಸರಿಟ್ಟರು. ಹೀಗಾಗಿ ಈ ಆತ್ಮಕಥೆ ಒಂದರ್ಥದಲ್ಲಿ ಖುಶವಂತರ ಸವಾಲಿಗೆ ಕೊಟ್ಟ ಜವಾಬು."[೧೩]

ಟಿ.ಪಿ. ಅಶೋಕರವರು ಕೃತಿಯು ಒಳಗೊಂಡಿರುವ ಪುಟಗಳ ಸಂಖ್ಯೆ ಮತ್ತು ಅದು ಯಾವ ಮುದ್ರಣದಿಂದ ಪ್ರಕಟಗೊಂಡಿದೆ ಮತ್ತು ಪ್ರಕಟಗೊಂಡ ವರ್ಷ, ಮತ್ತು ಪ್ರಕಾಶನದ ಹೆಸರನ್ನು ತಿಳಿಸಿದ್ದಾರೆ. ಈ ರೀತಿ ವಿಮರ್ಶೆ ಮಾಡಿರುವುದನ್ನು ನಮಗೆ ಕೃತಿ ಪರಿಚಯ ಎಂದು ಅನಿಸುತ್ತದೆ. ಆದರೆ ಓದುಗರಿಗೆ ಪರಿಚಯವಾಗಲೆಂದು ತಿಳಿಸುತ್ತಾ ನಂತರ ಕೃತಿ ವಿಮರ್ಶೆಗೆ ತೊಡಗಿರುವುದನ್ನು ಗಮನಿಸಬಹುದಾಗಿದೆ.

ನಂತರ ನರಹಳ್ಳಿಯವರು ತಮ್ಮ ಪುಸ್ತಕ ವಿಮರ್ಶೆ ಪ್ರಸ್ತುತ ಕೃತಿಯನ್ನು ಚರ್ಚಿಸುವಾಗ ಬೇರೆ ಖ್ಯಾತ ಲೇಖಕರ ಜೊತೆ ಹೋಲಿಸುವುದು, ಅವರ ಕೃತಿಗಳ ವೈಶಿಷ್ಟ್ಯವನ್ನು ಕುರಿತು ಹೇಳುವುದು ಬೇರೆ ಬೇರೆ ಲೇಖಕರ ಕೃತಿಗಳ ಪ್ರಮುಖ ಅಂಶಗಳನ್ನು ಗುರುತಿಸಿ ಅದರ ಮುಖೇನ ಪ್ರಸ್ತುತ ಕೃತಿಯನ್ನು ವಿಶ್ಲೇಷಿಸುವುದು ಮಾಡುತ್ತಾರೆ.

ಉದಾಹರಣೆಯಾಗಿ ನಾವು ನೋಡುವುದಾದರೆ ಯು. ಆರ್. ಅನಂತಮೂರ್ತಿಯವರು 'ಭವ' ಕಾದಂಬರಿಯನ್ನು ವಿಮರ್ಶಿಸುವಾಗ ಕೃತಿಯ ಕರ್ತೃವಿನ ಇತರ ಕಾದಂಬರಿಗಳ ಜೊತೆಗೆ ಅಂದರೆ ಅನಂತಮೂರ್ತಿಯವರ ಸಂಸ್ಕಾರ, ಭಾರತೀಪುರ, ಅವಸ್ಥೆ. ಈ ಕಾದಂಬರಿಯಲ್ಲಿ ಬರುವ ಪಾತ್ರಗಳಾದ ಪ್ರಾಣೇಶಾಚಾರ್ಯ, ಜಗನ್ನಾಥ ಅಥವಾ ಕೃಷ್ಣಪ್ಪ ಎನ್ನುವಂತಹ ಪ್ರಾತಿನಿಧಿಕ ಪಾತ್ರಗಳಿಲ್ಲ ಎನ್ನುವಂತೆ ಹೇಳುತ್ತಾ 'ಭವ' ಕಾದಂಬರಿಯಲ್ಲಿ ಬರುವಂತಹ ಪಾತ್ರಗಳ ಕುರಿತು ಹೇಳುತ್ತಾರೆ. ಮತ್ತು ಇತರ ಖ್ಯಾತ ಲೇಖಕರಾದ ಶಿವರಾಮ ಕಾರಂತರ 'ಮರಳಿಮಣ್ಣಿಗೆ' ಕೃತಿಯ ಬಂಧದ ಬಗ್ಗೆ, 'ಭವ' ಕಾದಂಬರಿಯನ್ನು ವಿಮರ್ಶಿಸುವುದನ್ನು ಕಾಣಬಹುದು. ಪೂರ್ಣಚಂದ್ರ ತೇಜಸ್ವಿಯವರ 'ಜುಗಾರಿಕ್ರಾಸ್' ಕೃತಿಯೊಂದಿಗೆ ಯಶವಂತ ಚಿತ್ತಾಲರ 'ಪುರುಷೋತ್ತಮ' ಕೃತಿಯ ಬಗ್ಗೆ ಚರ್ಚಿಸಿದ್ದಾರೆ. ಕೆಲವೊಮ್ಮೆ ಅದೇ ಲೇಖಕರ ಹಿಂದಿನ ಕೃತಿಗಳಲ್ಲಿನ ವಸ್ತುವನ್ನು ಕುರಿತು ಚರ್ಚಿಸುತ್ತಾರೆ.

ಗಿರೀಶ್ ಕರ್ನಾಡ್‌ರ 'ಅಗ್ನಿ ಮತ್ತು ಮಳೆ' ನಾಟಕವನ್ನು ವಿಮರ್ಶಿಸುವಾಗ ಅದರಲ್ಲಿ ಬರುವ ವಿಶಾಖಳ ಪಾತ್ರದ ಜೊತೆಗೆ ಸಂಸ್ಕಾರ ಕಾದಂಬರಿಯಲ್ಲಿ ಬರುವ ಚಂದ್ರಿಯ ಪಾತ್ರಕ್ಕೆ ಹೋಲಿಸುವುದು ಮತ್ತು ನೆನಪಿಸಿಕೊಳ್ಳುವುದನ್ನು ಕಾಣಬಹುದು ಮತ್ತು 'ಅಗ್ನಿ ಮತ್ತು ಮಳೆ' ಕೃತಿಯ ಜೊತೆಗೆ ಅದರ ಮೂಲಕೃತಿ ಯವಕ್ರೀತ ಅಖ್ಯಾನದ ವಸ್ತು ಬಂಧದ ಜೊತೆಗೆ ಹೋಲಿಸುವುದನ್ನು ಕಾಣುತ್ತೇವೆ.

ನಂತರ ರಹಮತ್ ತರೀಕೆರೆಯವರು ಕೃತಿಯ ಹುಟ್ಟುವಿನ ಬಗೆಯನ್ನು ಕುರಿತು ವಿಮರ್ಶೆಗೆ ತೊಡಗಿದ್ದಾರೆ. ರಂಗಕರ್ಮಿಯ ಸಂಸಾರ (ಸಿ.ಜಿ.ಕೆಯವರ ಕತ್ತಾಲೆ ಬೆಳದಿಂಗಳೊಳಗೆ) ಈ ಕೃತಿಯಲ್ಲಿ ಆರಂಭದ ಸಾಲುಗಳಲ್ಲಿಯೇ ಈ ಕೃತಿ ಹುಟ್ಟುವ ಬಗೆ ಮತ್ತು ಲೇಖಕರ ಕಾರಣಗಳನ್ನು

ಕೊಡುತ್ತಾ ಹೋಗಿದ್ದಾರೆ. ಈ ಕೃತಿ ಅಥವಾ ಆತ್ಮಚರಿತ್ರೆ ಹುಟ್ಟಲು ಕಾರಣ ಅವರು ಪಟ್ಟಂತಹ ಕಷ್ಟ ಮತ್ತು ನೋವುಗಳು, ಕಾರಣ ಅವರೊಬ್ಬ ನಾಟಕಕಾರರಾಗಲೂ ಅವರಿಗೆ ತಮ್ಮ ಕಾಲು ಸರಿ ಇಲ್ಲದೆ ಇರುವುದು ಆದಕಾರಣ ನಾಟಕಕ್ಕೆ ಅವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ ಹಾಗಾಗಿ ಅವರು ತಮ್ಮಲ್ಲಿರುವ ಪ್ರತಿಭೆಯನ್ನು ತೋರಿಸಿ ಈ ನಾಟಕ ರಂಗದಲ್ಲಿ ಅಪಾರ ಸಾಧನೆ ಮಾಡಿ ಮೇಲಕ್ಕೆ ಬಂದಿರುವಂತಹದ್ದು, ಈ ಮೇಲಿನ ಸಾಲುಗಳಲ್ಲಿಯೇ ಕಾಣಿಸುತ್ತದೆ.

ನಂತರ ಅಮೃತಾ ಪ್ರೀತಂ ಕೃತಿಯನ್ನು ರಚಿಸಲು ಕಾರಣವನ್ನು ಕೊಡುತ್ತಾ ಹೋಗುತ್ತಾಳೆ ಮತ್ತು ಈ ಆತ್ಮಚರಿತ್ರೆ ಬರೆಯಲು ಸಮಾಜವು ಕಾರಣ ಎಂಬುದನ್ನು ನೇರವಾಗಿ ಹೇಳದೆ ತನ್ನ ಆತ್ಮಚರಿತ್ರೆಯಲ್ಲಿ ತೋರಿಸಿದ್ದಾಳೆ. ಪುರುಷ ಪ್ರಧಾನ ಸಮಾಜದ ಎದುರು ಹೆಣ್ಣು ಹೇಗೆ ಇರಬೇಕು ಮತ್ತು ಅವರು ತಮ್ಮ ಯಾವ ದೃಷ್ಟಿಕೋನದಿಂದ ನೋಡುತ್ತಾರೆ ಎಂಬುದನ್ನು ಹೇಳಲು ಪ್ರಯತ್ನಿಸಿದ್ದಾರೆ. ಕೃತಿಯ ಹುಟ್ಟುವಿಕೆಗೆ ಮತ್ತು ಕಾರಣಗಳಿಗೆ ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ನಮಗೆ ತಿಳಿದುಬರುತ್ತದೆ.

ಟಿ.ಪಿ. ಅಶೋಕರವರು ವರ್ಗ, ವರ್ಣ, ಸಂಘರ್ಷದ ಬಗ್ಗೆ ಮತ್ತು ಕೃತಿಯ ಶೀರ್ಷಿಕೆಯ ಬಗ್ಗೆ ಚರ್ಚಿಸುತ್ತಾರೆ.

"ಸಮಾಜದಲ್ಲಿನ ವರ್ಗ, ವರ್ಣ, ಸಂಘರ್ಷದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಪ್ರಬಲರು, ಸಶಕ್ತರು, ಕ್ರೂರಿಗಳು ಆದ ಇನ್ನೊಬ್ಬರ ಮೇಲೆ ಅಧಿಕಾರ ಚಲಾಯಿಸಬಲ್ಲಂಥ ಜನರು ತುತ್ತ ತುದಿಯಲ್ಲಿದ್ದಾರೆ. ಕೆಳಸ್ಥರದಲ್ಲಿ ದುರ್ಬಲರೂ, ಸಭ್ಯರು, ಆದಂಥ ಜನ ಹೋರಾಡುತ್ತ ಹೆಣಗುತ್ತಿದ್ದಾರೆ. ಇದಕ್ಕೆ ಲೇಖಕರು ಒಂದು ಉದಾಹರಣೆಯನ್ನು ನೀಡಿದ್ದಾರೆ. 'ಒಂದು ಮರದ ಬಗ್ಗೆ ವಿಚಾರ ಮಾಡಿ ಅದರ ಬಲ ಹಾಗೂ ವೈಭವ ಕೆಳಗೆ ಆಳದಲ್ಲಿ ಹುದುಗಿರುವ ಬೇರುಗಳಿಂದ ಬಂದಿದೆ; ಮರದ ಮೇಲ್ಭಾಗ ಕೋಮಲ ಎಲೆಗಳಿಂದ, ಮೃದು ಚಿಗುರುಗಳಿಂದ, ಅತ್ಯಂತ ದುರ್ಬಲವಾದ ರೆಂಬೆ ಕೊಂಬೆಗಳಿಂದ ಅಚ್ಛಾದಿತವಾಗಿದೆ."[೧೪]

"ಖ್ಯಾತ ಕವಿ, ವಿಮರ್ಶಕ ಡಾ। ಜಿ. ಎಸ್. ಶಿವರುದ್ರಪ್ಪನವರು ಕಳೆದ ವರ್ಷ ಮೇ ತಿಂಗಳಲ್ಲಿ ಹಿಮಾಲಯದ ನಾಲ್ಕು ಧಾಮಗಳೆಂದು ಹೆಸರಾದ ಗಂಗೋತ್ರಿ, ಯಮನೋತ್ರಿ, ಬದರೀ, ಕೇದಾರಗಳಿಗೆ ಹತ್ತು ದಿನಗಳ ಕಾಲ ಪ್ರವಾಸವನ್ನು ಕೈಗೊಂಡಿದ್ದರು. ಆ ಪ್ರವಾಸದ ಒಂದು ಪುಟ್ಟ ಕಥನವೇ, 'ಗಂಗೆಯ ಶಿಖರಗಳಲ್ಲಿ' ಎನ್ನುವಂತಹ ಶೀರ್ಷಿಕೆಯನ್ನು ಕೊಟ್ಟರು."[೧೫]

ನರಹಳ್ಳಿ ಬಾಲಸುಬ್ರಹ್ಮಣ್ಯರವರು ಪುಸ್ತಕದ ಕರ್ತೃವಿನ ಅಭಿಪ್ರಾಯಗಳನ್ನು ಇಟ್ಟುಕೊಂಡು ಪುಸ್ತಕ ವಿಮರ್ಶೆಗೆ ತೊಡಗುವುದು.

"ನಮ್ಮ ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಚವರ್ಗ ಮತ್ತು ಜಾತಿಗಳೂ,

ಮಿಕ್ಕುದನ್ನು ಮಧ್ಯಂತರ ವರ್ಗ ಮತ್ತು ಜಾತಿಗಳೂ ತಿಂದು ಹಾಕುತ್ತಿರುವುದರಿಂದ, ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರಣದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟ್ಟೊತ್ತುವ ಪಶುಸದೃಶ ಶೂದ್ರ ಸಮುದಾಯವೊಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಸಾಹಿತ್ಯಾಭಿರುಚಿಯನ್ನು ಮೇಲು ಜಾತಿ ಮತ್ತು ವರ್ಗದವರ ಸೊತ್ತಾಗಿಯೇ ಉಳಿಸುವ ಯತ್ನ ನಮ್ಮ ವಿದ್ಯಾಭ್ಯಾಸದ ಯೋಜನೆಗಳು ಮತ್ತು ವಿದ್ಯಾಭ್ಯಾಸ ಕ್ರಮ, ಭಾಷೆಯು ಹೇಗೆ ಕೇವಲ ಉಳ್ಳವರ ಸೊತ್ತು ಮಾತ್ರವೇ ಆಗತೊಡಗಿದೆಯೆಂದರೆ ಈಗ ಭಾಷೆಯಲ್ಲಿ ಆಲೋಚನೆ ಮತ್ತು ಅಭಿವ್ಯಕ್ತಿ ಬಯಸುವುದೇ ಮೋಸಗಾರಿಕೆಯಾಗುವ ಹೊತ್ತು ಬರುತ್ತಿದೆ. ಅಂಥದರಲ್ಲಿ ಸಾಹಿತ್ಯದಲ್ಲೂ ನಾವು ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡು ಸಹೃದಯ ಸ್ತೋಮವನ್ನು ಸೀಮಿತಗೊಳಿಸಿಕೊಳ್ಳುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ಥ ನಾಗರೀಕತೆಯ ಪರಾಕಾಷ್ಠೆ ಎಂದಷ್ಟೇ ಹೇಳಬಹುದು."[೧೬]

ರಹಮತ್ ತರೀಕೆರೆಯವರು ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ಕುರಿತು ಚರ್ಚಿಸುತ್ತಾರೆ.

"ಬಂಜಗೆರೆಯವರ ಈ ಕೃತಿಯು ಈಗ ವಿವಾದಕ್ಕೆ ಸಿಲುಕಿದೆ ಅಥವಾ ಅದನ್ನು ಸಿಲುಕಿಸಲಾಗಿದೆ. ಲಿಂಗಾಯತ ಮತಕ್ಕೆ ಸಂಬಂಧಪಟ್ಟಂತೆ ಬಂದ ಮಾಸ್ತಿಯವರ 'ಚಿಕವೀರ ರಾಜೇಂದ್ರ', ಶಿವಪ್ರಕಾಶರ 'ಮಹಾಚೈತ್ರ', ಪಿ.ವಿ. ನಾರಾಯಣ ಅವರ 'ಧರ್ಮಕಾರಣ', ಕಲ್ಬುರ್ಗಿಯವರ 'ಮಾರ್ಗ', ಮಾತೆ ಮಹಾದೇವಿ ಅವರ 'ವಚನದೀಪ್ತಿ' ಈ ಕೃತಿ ಸರಣಿಯಲ್ಲಿ ಈಗ ಇದು ಸೇರಿದಂತಾಗಿದೆ. ಆದರೆ ಇಲ್ಲಿನ ಪ್ರತಿಯೊಂದು ಕೃತಿಯ ವಿವಾದಕ್ಕೂ ಬೇರೆ ಬೇರೆ ಕಾರಣವಿದ್ದು, 'ಅನುದೇವಾ' ಕೃತಿ ಲಿಂಗಾಯತ ಸಮುದಾಯದ ಕೆಲವರಲ್ಲಿ ಹುಟ್ಟಿಸಿರುವ ಸಿಟ್ಟು ಆಕ್ರೋಶಗಳಿಗೆ ಕಾರಣಗಳು ಬೇರೆಯಾಗಿವೆ. 'ಈ ಪುಸ್ತಕವನ್ನು ಸರ್ಕಾರ ನಿಷೇದಿಸಬೇಕು, ಮುಟ್ಟುಗೋಲು ಹಾಕಿಕೊಳ್ಳಬೇಕು. ಇಲ್ಲದಿದ್ದರೆ ರಕ್ತದ ಕೋಡಿ ಹರಿಯುತ್ತದೆ, ಪುಸ್ತಕವನ್ನು ಸುಡಬೇಕು, ಲೇಖಕನನ್ನು ಕೊಲ್ಲಬೇಕು' ಎಂಬ ಹೇಳಿಕೆಗಳು ಹೊರಡುತ್ತಿವೆ.[೧೭]

"ಕರ್ನಾಟಕದ ಲಿಂಗಾಯತ ಸಮುದಾಯಕ್ಕೂ ಬಸವಣ್ಣನಿಗೂ ಇರುವ ಧಾರ್ಮಿಕ ಸಂಬಂಧ ಆಳವಾದುದು. ಆದರೆ ಬಸವಣ್ಣನದು ಲಿಂಗಾಯತ ಮತ ಅಥವಾ ಜಾತಿಯ ಆಚೆ ಇರುವ ಹಲವಾರು ಜನರ ಪ್ರೀತಿಗೆ ಗೌರವಕ್ಕೂ ಪಾತ್ರವಾಗಿರುವ ವ್ಯಕ್ತಿತ್ವ. ಇದಕ್ಕೆ ಕಾರಣ, ಅವನೊಬ್ಬ ಕವಿಯಾಗಿರುವುದು; ಕೆಳ ಜಾತಿಗಳ ಮೇಲುಚಲನೆಯ ಪರವಾದ ನಿಲುವನ್ನು ತಳೆದಿದ್ದು; ವೈದಿಕ ಪುರೋಹಿತ ಶಾಯಿಯನ್ನು ನಿರಾಕರಿಸಿದ್ದು; ಅಪಾರ ವಿನಯ ಹಾಗೂ ಮಾತೃತ್ವದ ಮನಸ್ಸನ್ನು ಹೊಂದಿದ್ದು, ಕರ್ನಾಟಕದಲ್ಲೇ ಹುಟ್ಟಿದ ಮಧ್ವಚಾರ್ಯರಿಗಾಗಲಿ, ಕರ್ನಾಟಕದಲ್ಲಿ

ಕೆಲವು ಕಾಲವಿದ್ದ ಶಂಕರಾಚಾರ್ಯ ಹಾಗೂ ರಾಮಾನುಜಚಾರ್ಯ ಅವರಿಗಾಗಲಿ, ಬಸವಣ್ಣನಿಗೆ ಸಿಕ್ಕಷ್ಟು ವ್ಯಾಪಕ ಸ್ವೀಕೃತಿ ಸಿಕ್ಕಿಲ್ಲ."[೧೮]

ಟಿ.ಪಿ. ಅಶೋಕರವರು ಒಂದು ಕೃತಿಯನ್ನು ವಿಮರ್ಶೆ ಮಾಡುವಾಗ ಆ ಕೃತಿಯ ಹೆಸರಿನ ಬಗ್ಗೆ ಚರ್ಚಿಸುತ್ತಾರೆ. ಜಿ. ಎಸ್. ಶಿವರುದ್ರಪ್ಪನವರು ತಮ್ಮ ಪ್ರವಾಸ ಕಥನದಲ್ಲಿ ಚರ್ಚಿಸಿರುವುದನ್ನು ನೋಡಿದ್ದೇವೆ ಏಕೆ? ಹೀಗೆ ವಿಮರ್ಶಕರು ಚರ್ಚಿಸುತ್ತಾರೆಂದರೆ ಅದು ಒಳಗೊಂಡಿರುವ ತಾತ್ವಿಕ ಅಂಶಗಳ ಹಿನ್ನೆಲೆಯಲ್ಲಿ ಅದಕ್ಕೆ ಹೆಸರು ಬಂದಿರುವುದನ್ನು ಓದುವ ವರ್ಗಕ್ಕೆ ತಿಳಿಸಿದ್ದಾರೆ. ನಂತರ ಕೃತಿಯಲ್ಲಿನ ಕೇಂದ್ರ ಅಂಶಗಳಾದ ವರ್ಗ, ವರ್ಣ, ಸಂಘರ್ಷಗಳನ್ನು ಸಮಾಜದಲ್ಲಿನ ಮೇಲ್ವರ್ಗ, ಕೆಳವರ್ಗದವರಲ್ಲಿನ ಅಸಮಾನತೆ ಕೆಳವರ್ಗದವರು, ಮೇಲ್ವರ್ಗದಿಂದ ಶೋಷಣೆಗೆ ಒಳಗಾಗಿರುವುದನ್ನು ಒಂದು ಸಾಹಿತ್ಯಕೃತಿಯನ್ನು ವಿಮರ್ಶೆ ಮಾಡುವಾಗ ಅಶೋಕರವರು ವಿಮರ್ಶೆ ಮಾಡುತ್ತಾ ಹೋಗುತ್ತಾರೆ. ನಂತರ ನರಹಳ್ಳಿ ಬಾಲಸುಬ್ರಹ್ಮಣ್ಯರವರು ಪ್ರಸ್ತುತ ಕೃತಿಯ ಲೇಖಕರು ಬೇರೆ ಯಾವುದೋ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾರೆ. ಇದರ ಮೂಲಕ ಕೃತಿಯನ್ನು ವಿಮರ್ಶೆಗೆ ತೊಡಗಿಸಿಕೊಳ್ಳುವುದನ್ನು ಕಾಣಬಹುದು. ತೇಜಸ್ವಿಯವರ ಕಾದಂಬರಿಯನ್ನು ವಿಮರ್ಶಿಸುವಾಗ ಆರಂಭದಲ್ಲಿ ಮೂಲಭೂತವಾದಂತಹ ಪ್ರಶ್ನೆಯನ್ನು ಎತ್ತುತ್ತಾರೆ. ಲೇಖಕರು ಎತ್ತಿದ ಈ ಪ್ರಶ್ನೆಯನ್ನಿಟ್ಟುಕೊಂಡು ಪುಸ್ತಕ ವಿಮರ್ಶಕರು ಅದಕ್ಕೆ ಮೂಲಭೂತವಾದ ಕಾರಣವನ್ನು ಹುಡುಕಿಕೊಳ್ಳುವ ಯತ್ನದಲ್ಲಿ ಪುಸ್ತಕ ವಿಮರ್ಶೆಯಿದೆ. ಆದರೂ ಈ ಪುಸ್ತಕ ವಿಮರ್ಶೆಯೂ ಕೃತಿಯ ವಸ್ತು ಹೋದಂತೆ ನಿರೂಪಿಸಲಾಗಿದೆ. ತಮ್ಮ ಚರ್ಚೆಗೆ ಬೇಕಾದ ಸಾಲುಗಳನ್ನು, ಚಿಂತನೆಗಳನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಹಾಗಾಗಿ ಇದು ಪುಸ್ತಕ ವಿಮರ್ಶೆಯಂತೆ ಕಂಡರೂ 'ವೈಯಕ್ತಿಕ ವಿಮರ್ಶೆಯೂ' ಆಗಿದೆ. ಕೆಲವೊಮ್ಮೆ ಮುಖ್ಯ ವಿಚಾರಧಾರೆಗಳನ್ನು ತಿಳಿಸುವ ವಾಹಿನಿಯಾಗಿ ಕೆಲಸ ಮಾಡುತ್ತದೆ. ಈಗೆ ನರಹಳ್ಳಿಯವರು ಪುಸ್ತಕ ವಿಮರ್ಶೆಯನ್ನು ಕೈಗೊಂಡಿದ್ದಾರೆ ಇದು ಸರಿಯಲ್ಲ ಏಕೆಂದರೆ ನೇರವಾಗಿ ಕೃತಿಯ ಆಳಕ್ಕೆ ಇಳಿದು ಕೃತಿಯನ್ನು ಶೋಧಿಸುವ ಕೆಲಸವಾಗಬೇಕು ಮತ್ತು ಕೃತಿಯನ್ನು ಕುರಿತ ವಿವರಣೆ, ವಿಶ್ಲೇಷಣೆಗೆ ಹೆಚ್ಚಿನ ಆಧ್ಯತೆ ನೀಡದೆ ವ್ಯಾಖ್ಯಾನಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ಹೇಳುತ್ತೇವೆ.

ನಂತರ ರಹಮತ್ ತರೀಕೆರೆಯವರು ಬಸವಣ್ಣ ದಲಿತನಾಗುವ ಕಷ್ಟ (ಬಂಜಗೆರೆ ಜಯಪ್ರಕಾಶ ಅವರ 'ಆನುದೇವಾ ಹೊರಗಣವನು') ಈ ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳಿಯುವುದಾದರೆ ಮೊದಲಿಗೆ ಇದೊಂದು ವಿವಾದಿತ ಕೃತಿ ಇದರಂತೆಯೇ ಇದಕ್ಕೆ ಸಂಬಂಧಪಟ್ಟ ಇನ್ನೂ ಅನೇಕ ವಿವಾದಿತ ಕೃತಿಗಳನ್ನು ಹೆಸರಿಸುತ್ತಾ ಹೋಗಿದ್ದಾರೆ. ಇದರ ಅವಶ್ಯಕವೇ ನೇರವಾಗಿ ಕೃತಿನಿಷ್ಠ ವಿಮರ್ಶೆ ಮಾಡಿದ್ದರೆ ಸರಿ ಹೋಗುತ್ತಿತ್ತು ಆದರೆ ಸುತ್ತಿ ಬಳಸಿ ಆ ಕೃತಿಯ ಸುತ್ತಮುತ್ತಲಲ್ಲಿ ತಿರುಗಾಡುವುದು ಅಷ್ಟೇಂದು ಸಮಂಜಸವಲ್ಲ ಎಂದು ಹೇಳಬಹುದು.

ಕೊನೆ ಟಿಪ್ಪಣಿಗಳು

೦೧. ಟಿ.ಪಿ. ಅಶೋಕ, ಪುಸ್ತಕ ಪ್ರೀತಿ, ೧೯೯೩, ಪು – ೧೧

೦೨. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಸಂಸ್ಕೃತಿ, ೧೯೯೮, ಪು – ೧

೦೩. ರಹಮತ್ ತರೀಕರೆ, ಚಿಂತನೆಯ ಪಾಡು, ೨೦೧೦, ಪು – ೧೧೬

೦೪. ಟಿ.ಪಿ. ಅಶೋಕ, ಪೂರ್ವೋಕ್ತ, ಪು – ೪೨೭

೦೫. ನರಹಳ್ಳಿ ಬಾಲಸುಬ್ರಹ್ಮಣ್ಯ, ಪೂರ್ವೋಕ್ತ, ಪು – ೨

೦೬. ಅದೇ., ಪು – ೨, ೩

೦೭. ಅದೇ., ಪು – ೪, ೫

೦೮. ರಹಮತ್ ತರೀಕರೆ, ಪೂರ್ವೋಕ್ತ, ಪು – ೯೬

೦೯. ನರಹಳ್ಳಿ ಬಾಲಸುಬ್ರಹ್ಮಣ್ಯ, ಪೂರ್ವೋಕ್ತ, ಪು – ೫೬

೧೦. ಟಿ.ಪಿ. ಅಶೋಕ, ಪೂರ್ವೋಕ್ತ, ಪು – ೨೫, ೨೬

೧೧. ರಹಮತ್ ತರೀಕರೆ, ಪೂರ್ವೋಕ್ತ, ಪು – ೩೩

೧೨. ಅದೇ., ಪು – ೩೩

೧೩. ಅದೇ., ಪು – ೫೪

೧೪. ಟಿ. ಪಿ. ಅಶೋಕ, ಪೂರ್ವೋಕ್ತ, ಪು – ೧೫೭

೧೫. ಅದೇ., ಪು – ೧೫೭

೧೬. ನರಹಳ್ಳಿ ಬಾಲಸುಬ್ರಹ್ಮಣ್ಯ, ಪೂರ್ವೋಕ್ತ, ಪು – ೩೬

೧೭. ರಹಮತ್ ತರೀಕರೆ, ಪೂರ್ವೋಕ್ತ, ಪು – ೧೬೦

೧೮. ಅದೇ., ಪು – ೧೬೨

ಅಧ್ಯಾಯ ೮

ಸಮಾರೋಪ

ಅಧ್ಯಾಯ ೮

ಸಮಾರೋಪ

ಒಂದು ಶತಮಾನದ ಇತಿಹಾಸವನ್ನು ಹೊಂದಿರುವ ಪುಸ್ತಕ ವಿಮರ್ಶೆಯನ್ನು ಕುರಿತ ಚರ್ಚೆಗಳು ಕನ್ನಡದಲ್ಲಿ ನಡೆದಿರುವುದು ತುಂಬಾ ಕಡಿಮೆ. ಅಲ್ಲೊಂದು ಇಲ್ಲೊಂದು ಕೆಲವು ಲೇಖನಗಳನ್ನು ಬಿಟ್ಟರೆ, ತುಂಬಾ ಗಂಭೀರವಾದ ಒಳನೋಟಗಳನ್ನು ಕೊಡುವ ಅಧ್ಯಯನ ಇಲ್ಲಿಯವರೆಗೂ ನಡೆದಿಲ್ಲ. ಒಂದು ಶತಮಾನದ ಚಾರಿತ್ರಿಕ ಹಿನ್ನೆಲೆಯನ್ನು ಕಡೆಗಾಣಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ಥೂಲ ವಿಶ್ಲೇಷಣೆಗೆ ತೊಡಗಿದಾಗ, ಪುಸ್ತಕ ವಿಮರ್ಶೆಯು ಒಂದು ಮಹತ್ವದ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆ ಇಂದು ಅರಿವಾಗುತ್ತಿದೆ. ಪುಸ್ತಕ ವಿಮರ್ಶೆಯು ಕನ್ನಡ ಸಾಹಿತ್ಯದಲ್ಲಿ ಚಿಂತನೆ ಕೆರಳಿಸುವ ವಿಚಾರವಾಗಿ ಇಂದು ಬೆಳೆದಿದೆ. ಈ ಹಿನ್ನೆಲೆಯ್ಲಲಿ 'ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ' ಎಂಬ ಶೀರ್ಷಿಕೆಯ ಅಡಿಯಲ್ಲಿ ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆ ಇವರನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಪುಸ್ತಕ ಪರಂಪರೆ ಬೆಳೆದು ಬಂದ ಬಗೆಯನ್ನು ಸವಿಸ್ತಾರವಾಗಿ ತಿಳಿಯಲು ಪ್ರಯತ್ನಿಸಲಾಗಿದೆ. ಆರಂಭದಲ್ಲಿ ಪುಸ್ತಕ ವಿಮರ್ಶೆಯ ಮುನ್ನುಡಿ, ಬೆನ್ನುಡಿಗಳೇ ಪುಸ್ತಕ ವಿಮರ್ಶಾ ಸ್ವರೂಪಗಳಾಗಿದ್ದವು. ನಂತರದ ಕಾಲದಲ್ಲಿ ಸಾಹಿತ್ಯ ಬೆಳೆದಂತೆಲ್ಲಾ ವಿಮರ್ಶಾ ಸ್ವರೂಪವೂ ಪರಿವರ್ತನೆ ಆಗತೊಡಗಿತು. ದಶದಿಂದೀಚೆಗೆ ಪುಸ್ತಕ ವಿಮರ್ಶಾ ಪರಂಪರೆಯು ರಸಪ್ರಧಾನ, ರೂಪನಿಷ್ಠ, ಆಶಯ ಪ್ರಧಾನವಾಗಿ ಬೆಳೆದು ಬಂದಿರುವುದು ಗಮನಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯನ್ನು ಕುರಿತು ಬೇರೆ ಬೇರೆ ಕಾಲಘಟ್ಟದಲ್ಲಿ ಪುಸ್ತಕ ವಿಮರ್ಶಕರ ಸ್ವತಃ ಅಭಿಪ್ರಾಯಗಳನ್ನು ಮತ್ತು ಪರಸ್ಪರ ಭಿನ್ನ ಭಿನ್ನ ಧೋರಣೆಗಳಿಂದ ಕೂಡಿರುವ ಇವರ ಆಲೋಚನೆಗಳು, ಚಿಂತನೆಗಳು, ತಾತ್ವಿಕ ವಿಚಾರಗಳನ್ನು ಮತ್ತು ಮನೋಧರ್ಮಗಳನ್ನು ಒಟ್ಟಿಗೆ ಇಟ್ಟು ಪರೀಕ್ಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ವಿಮರ್ಶಕರುಗಳಾದ ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆಯವರ ಒಂದೊಂದು ಪುಸ್ತಕವನ್ನು ಇಟ್ಟುಕೊಂಡು ಅವುಗಳಾದ ಪುಸ್ತಕ ಪ್ರೀತಿ, ಸಾಹಿತ್ಯ ಸಂಸ್ಕೃತಿ, ಚಿಂತನೆಯ ಪಾಡು ಇವುಗಳ ಪುಸ್ತಕ ವಿಮರ್ಶೆಯ ಸ್ವರೂಪವನ್ನು ಕುರಿತು ಅಧ್ಯಯನ ನಡೆಸಲಾಗಿದೆ. ಟಿ.ಪಿ. ಅಶೋಕರವರ ವಿಮರ್ಶಾ ಸ್ವರೂಪವು ಕೃತಿ ಕೇಂದ್ರಿತವಾಗಿದೆ. ಕೃತಿಯನ್ನು ವಿಮರ್ಶೆ ಮಾಡುವುದರ ಜೊತೆಗೆ ಕೃತಿಯಲ್ಲಿನ ಪುರಾವೆಗಳನ್ನು ಕುರಿತು ಹುಡುಕುವುದನ್ನು ಕಾಣಬಹುದಾಗಿದೆ. ಅವರು ವಿಮರ್ಶೆಯನ್ನು ಪ್ರಾರಂಭಿಸುವ ಮುನ್ನ ಖ್ಯಾತ ವಿಮರ್ಶಕರ ಹೇಳಿಕೆಗಳ ಮೂಲಕ ಕೃತಿ ವಿಮರ್ಶೆ ಮತ್ತು ಇತರ ಕೃತಿಗಳ ಜೊತೆಗೆ ಹೋಲಿಸುವಂತಹದ್ದನ್ನು ಕಾಣುತ್ತೇವೆ.

ನರಹಳ್ಳಿ ಸುಬ್ರಹ್ಮಣ್ಯರವರ ವಿಮರ್ಶಾ ಸ್ವರೂಪವು ಕೃತಿ ಕೇಂದ್ರಿತವಾಗಿದೆ. ಇವರು ವಿಮರ್ಶೆಯನ್ನು ಆರಂಭಿಸುವ ಮುನ್ನ ಮುಖ್ಯವಾದ ಒಂದು ಭಾಗವನ್ನು ಉದ್ಧರಿಸಿ ಅದರ ವಿಮರ್ಶೆಗೆ ತೊಡಗಿರುವುದನ್ನು, ಹಲವಾರು ಹೇಳಿಕೆಗಳನ್ನು ಹಾಕುತ್ತಾ ವಿಮರ್ಶೆ ಮಾಡಿರುವುದನ್ನು, ಖ್ಯಾತ ಲೇಖಕರ ಜೊತೆ ಮತ್ತು ಅವರ ಕೃತಿಗಳ ಜೊತೆ ಹೋಲಿಸಿರುವುದನ್ನು ಮತ್ತು ಪುಸ್ತಕದ ಲೇಖಕರ ಅಭಿಪ್ರಾಯಗಳನ್ನು ಇಟ್ಟುಕೊಂಡು ಪುಸ್ತಕ ವಿಮರ್ಶೆಗೆ ತೊಡಗಿರುವುದನ್ನು ಅಧ್ಯಯನ ಮಾಡಲಾಗಿದೆ.

ರಹಮತ್ ತರೀಕೆರೆ ಅವರ ವಿಮರ್ಶಾ ಸ್ವರೂಪವೂ ಲೇಖಕ ಕೇಂದ್ರಿತವಾಗಿದ್ದು, ಒಂದು ಕೃತಿಯನ್ನು ಅರ್ಥಮಾಡಿಕೊಳ್ಳುವ ಬಗೆಯನ್ನು, ಅದರ ಒಳ ಹೂರಣವನ್ನು ಅರ್ಥಮಾಡಿಸುತ್ತಾ, ಜೊತೆಗೆ ಕೃತಿಯ ಓರೆಕೋರೆಗಳನ್ನು ತಿಳಿಸುತ್ತಾ ಓದುಗರು ಮೂಲ ಕೃತಿಯನ್ನು ಓದಲೇ ಬೇಕೆನ್ನುವಂತೆ ಪ್ರೇರೇಪಿಸುವಂತಹದ್ದಾಗಿದೆ. ಇವರು ವಿಮರ್ಶೆಯನ್ನು ಆರಂಭಿಸುವ ಮುನ್ನ ಲೇಖಕನ ಕಾಲಘಟ್ಟ, ಅಂದಿನ ಪರಿಸರ, ಕೃತಿಯ ಹುಟ್ಟುವಿಗೆ ಕಾರಣಗಳು, ಕೃತಿಯ ಸುತ್ತಮುತ್ತಲಿನ ಪರಿಸರದ ಬಗ್ಗೆ ತಿಳಿಸುತ್ತಾ ಪುಸ್ತಕ ವಿಮರ್ಶೆಗೆ ತೊಡಗಿರುವುದನ್ನು ಕಾಣುತ್ತೇವೆ.

ಪುಸ್ತಕ ವಿಮರ್ಶೆ ಹಿಂದಿಗಿಂತ ಇಂದು ಹೆಚ್ಚು ವ್ಯಾಪಕ ಆಯಾಮವನ್ನು ಪಡೆದುಕೊಳ್ಳುತ್ತಿದೆ. ಅದು ಒಂದೆ ಕೇವಲ ಕೆಲವೇ ಪತ್ರಿಕೆಗಳಲ್ಲಿ ಪುಟ ತುಂಬುವ, ಜನಪ್ರಿಯವಲ್ಲದ ಭಾಗವಾಗಿದ್ದು, ಈಗ ತೀರ ಗಂಭೀರವಾದ ಆಸಕ್ತರ ಅಂಕಣವಾಗಿ ಬೆಳೆದಿದೆ. ಅಲ್ಲದೆ ಈಗ ಯಾವುದೇ ಕಿರು ಪತ್ರಿಕೆಯನ್ನು ಗಮನಿಸಿದರೂ ಪುಸ್ತಕ ವಿಮರ್ಶೆಯ ಮಹತ್ವ ತಿಳಿಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಪ್ರಬಂಧವು ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಧಾನವಾಗಿ ವಿಮರ್ಶಕರುಗಳಾದ ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ರಹಮತ್ ತರೀಕೆರೆಯವರ ವಿಮರ್ಶಾ ನಿಲುವುಗಳನ್ನು ಹೋಲಿಕೆ ಮಾಡುತ್ತಾ ಪರಸ್ಪರ ಭಿನ್ನವಾದ ಮತ್ತು ಸಮಾನ ಅಂಶಗಳನ್ನು ಚರ್ಚಿಸಲು ಈ ಅಧ್ಯಯನದಲ್ಲಿ ಯತ್ನಿಸಲಾಗಿದೆ. ಇದರ ಜೊತೆಗೆ ಇತರ ಪುಸ್ತಕ ವಿಮರ್ಶಕರುಗಳ ಅಧ್ಯಯನವನ್ನು ಕೈಗೊಳ್ಳಲು ಈ ಸಂಪ್ರಬಂಧವು ಒಂದು ಮಾದರಿಯಾಗಿದೆ.

ಅನುಬಂಧಗಳು

ಅನುಬಂಧ – ೧

ಮೂಲ ಪಠ್ಯಗಳು

೦೧. **ಟಿ.ಪಿ. ಅಶೋಕ** – **ಪುಸ್ತಕ ಪ್ರೀತಿ**
ವಸಂತ ಪ್ರಕಾಶನ, ಬೆಂಗಳೂರು
೧೯೯೩

೦೨. **ನರಹಳ್ಳಿ ಬಾಲಸುಬ್ರಹ್ಮಣ್ಯ** – **ಸಾಹಿತ್ಯ ಸಂಸ್ಕೃತಿ**
ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
೧೯೯೮

೦೩. **ರಹಮತ್ ತರೀಕೆರೆ** – **ಚಿಂತನೆಯ ಪಾಡು**
ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
೨೦೧೦

ಅನುಬಂಧ – ೨

ಪರಾಮರ್ಶನ ಗ್ರಂಥಗಳು

೦೧. ಅನಂತಮೂರ್ತಿ ಯು. ಆರ್ – **ಪ್ರಜ್ಞೆ ಮತ್ತು ಪರಿಸರ**
ಅಕ್ಷರ ಪ್ರಕಾಶನ, ಹೆಗ್ಗೋಡು
೧೯೯೨

೦೨. ಅನಂತಮೂರ್ತಿ ಯು. ಆರ್ – **ಬೆತ್ತಲೆ ಪೂಜೆ ಯಾಕೆ ಕೂಡದು?**
ಅಕ್ಷರ ಪ್ರಕಾಶನ, ಹೆಗ್ಗೋಡು
೧೯೯೬

೦೩. ಅಮರೇಶ ಎನ್ – **ಕನ್ನಡ ಸಂಶೋಧನೆಯ ವೈಧಾನಿಕತೆಗಳು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮

೦೪. ಅಮೂರ ಜಿ. ಎಸ್. – **ವ್ಯವಸಾಯ**
ಸ್ನೇಹ ಪ್ರಕಾಶನ, ಬೆಂಗಳೂರು
೧೯೯೨

೦೫. ಅಮೂರ ಜಿ. ಎಸ್. – **ಕೃತಿ ಪರೀಕ್ಷೆ**
ಸಮಾಜ ಪುಸ್ತಕಾಲಯ, ಧಾರವಾಡ
೧೯೯೭

೦೬. ಆರ್ಕೆ ಮಣಿಪಾಲ – **ಸಾಹಿತ್ಯ : ಆಶಯ ಮತ್ತು ವಿನ್ಯಾಸ**
ಸಂಕ್ರಮಣ ಪ್ರಕಾಶನ, ಧಾರವಾಡ
೧೯೮೮

೦೭. ಆರ್ಕೆ ಮಣಿಪಾಲ – **ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ**
ಸಂಕ್ರಮಣ ಪ್ರಕಾಶನ, ಧಾರವಾಡ
೧೯೯೫

೦೮. ಆರ್ಕೆ ಮಣಿಪಾಲ – **ಸಾಹಿತ್ಯ ಪ್ರಕ್ರಿಯೆ**
ನವಕರ್ನಾಟಕ ಪ್ರಕಾಶನ, ಬೆಂಗಳೂರು
೧೯೯೫

೦೯. ಕೀರ್ತಿನಾಥ ಕುರ್ತಕೋಟಿ – **ನವ್ಯಕಾವ್ಯ ಪ್ರಯೋಗ**
ಮನೋಹರ ಗ್ರಂಥಮಾಲ, ಧಾರವಾಡ. ೧೯೯೫

೧೦. ಕೀರ್ತಿನಾಥ ಕುರ್ತಕೋಟಿ – **ಯುಗಧರ್ಮ ಮತ್ತು ಸಾಹಿತ್ಯ ದರ್ಶನ**
ಮನೋಹರ ಗ್ರಂಥಮಾಲ, ಧಾರವಾಡ. ೧೯೯೧

೧೧. ಕೀರ್ತಿನಾಥ ಕುರ್ತಕೋಟಿ – **ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ**
ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಲಯ, ಬೆಂಗಳೂರು. ೧೯೯೫

೧೨. ಕೀರ್ತಿನಾಥ ಕುರ್ತಕೋಟಿ – **ಕನ್ನಡ ಸಾಹಿತ್ಯ ಸಂಗಾತಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೫

೧೩. ಕುವೆಂಪು – **ತಪೋನಂದನ**
ಉದಯಕವಿ ಪ್ರಕಾಶನ, ಮೈಸೂರು. ೧೯೯೮

೧೪. ಕುವೆಂಪು – **ಕಾವ್ಯವಿಹಾರ**
ಉದಯಕವಿ ಪ್ರಕಾಶನ, ಮೈಸೂರು. ೧೯೯೨

೧೫. ಕೇಶವಶರ್ಮ ಕೆ. – **ಕ್ರಿಯೆ–ಪ್ರತಿಕ್ರಿಯೆ**
ಅನ್ವೇಷಣೆ ಪ್ರಕಾಶನ, ಬೆಂಗಳೂರು. ೧೯೯೨

೧೬. ಗಿರಡ್ಡಿ ಗೋವಿಂದರಾಜು – **ಸಾತತ್ಯ**
ಸ್ನೇಹ ಪ್ರಕಾಶನ, ಬೆಂಗಳೂರು. ೧೯೯೨

೧೭. ಗಿರಡ್ಡಿ ಗೋವಿಂದರಾಜು – **ಕಾದಂಬರಿ : ವಸ್ತು ಮತ್ತು ತಂತ್ರ**
ಸ್ನೇಹ ಪ್ರಕಾಶನ, ಬೆಂಗಳೂರು ೧೯೮೭

೧೮. ಗಿರಡ್ಡಿ ಗೋವಿಂದರಾಜು – **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದಿ ವಿಮರ್ಶೆ**
ವೈಶಾಖ ಪ್ರಕಾಶನ, ಬೆಂಗಳೂರು. ೧೯೯೫

೧೯. ಚಂದ್ರಶೇಖರ ಪಾಟೀಲ – **ಸಾಹಿತ್ಯ ಸೃಷ್ಟಿ, ಸಾಹಿತ್ಯ ವಿಮರ್ಶೆ**
ಸಂಕ್ರಮಣ ಪ್ರಕಾಶನ, ಧಾರವಾಡ ೧೯೯೨

೨೦. ನರಹಳ್ಳಿ ಬಾಲಸುಬ್ರಹ್ಮಣ್ಯ – **ಇಹದ ಪರಿಮಳದ ಹಾದಿ**
ಬಿ.ಪಿ. ಪ್ರಕಾಶನ, ಬೆಂಗಳೂರು
೧೯೯೫

೨೧. ನಾಗರಾಜ ಡಿ. ಆರ್ – **ಅಮೃತ ಮತ್ತು ಗರುಡ**
ಅಕ್ಷರ ಪ್ರಕಾಶನ, ಹೆಗ್ಗೋಡು
೧೯೮೭

೨೨. ನಾಗರಾಜ ಡಿ. ಆರ್ – **ಸಾಹಿತ್ಯ ಕಥನ**
ಅಕ್ಷರ ಪ್ರಕಾಶನ, ಹೆಗ್ಗೋಡು
೧೯೯೬

೨೩. ನಾಗರಾಜ ಡಿ. ಆರ್ – **ಶಕ್ತಿ ಶಾರದೆಯ ಮೇಳ**
ಅಕ್ಷರ ಪ್ರಕಾಶನ, ಹೆಗ್ಗೋಡು

೨೪. ನಾಗಭೂಷಣಸ್ವಾಮಿ ಓ.ಎಲ್ – **ವಿಮರ್ಶೆಯ ಪರಿಭಾಷೆ**
ಅಂಕಿತ ಪುಸ್ತಕ, ಬೆಂಗಳೂರು
೧೯೯೮

೨೫. ನಾಯಕ ಜಿ. ಎಸ್ – **ನಿರಪೇಕ್ಷೆ**
ಅಕ್ಷರ ಪ್ರಕಾಶನ, ಹೆಗ್ಗೋಡು
೧೯೮೪

೨೬. ನಾಯಕ ಹಾ.ಮಾ (ಸಂ.) – **ವಿಮರ್ಶೆಯ ಮಾರ್ಗ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು. ೧೯೮೪

೨೭. ನಾರಾಯಣ ಕೆ. ವಿ. – **ಬೇರು ಕಾಂಡ ಚಿಗುರು**
ವಿವೇಕ ಪ್ರಕಾಶನ, ವಿಚಾರವಾದಿ ವೇದಿಕೆ
ಬೆಂಗಳೂರು. ೧೯೯೭

೨೮. ಪುಟ್ಟಯ್ಯ ಬಿ. ಎಂ. – **ಕಾಲ್ನಡಿಗೆ**
ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು
೧೯೯೯

೨೯. ಬಸವರಾಜ ಸಬರದ – **ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೯೯೨

೩೦. ಮುಗಳಿ ರಂ. ಶ್ರೀ – **ವಿಮರ್ಶೆಯ ವ್ರತ**
ಉಷಾ ಸಾಹಿತ್ಯ ಮಾಲೆ, ಮೈಸೂರು. ೧೯೭೦

೩೧. ರಹಮತ್ ತರೀಕೆರೆ – **ಪ್ರತಿ ಸಂಸ್ಕೃತಿ**
ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು ೧೯೯೩

೩೨. ರಹಮತ್ ತರೀಕೆರೆ – **ಮರದೊಳಗಣ ಕಿಚ್ಚು**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೬

೩೩. ರಾಘವೇಂದ್ರರಾವ್ ಎಚ್. ಎಸ್ – **ಪ್ರಗತಿಶೀಲತೆ**
ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೦

೩೪. ರಾಘವೇಂದ್ರರಾವ್ ಎಚ್. ಎಸ್ – **ಸಾಹಿತ್ಯ ವಿಮರ್ಶೆ**
ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೪

೩೫. ರಾಮಚಂದ್ರನ್ ಸಿ. ಎನ್. – **ಸಾಹಿತ್ಯ ವಿಮರ್ಶೆ**
ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೯

೩೬. ವೆಂಕಟಾಚಲ ಶಾಸ್ತ್ರಿ – **ವಿಮರ್ಶೆಯ ಮಾರ್ಗ**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೯೨

೩೭. ಶಿವರುದ್ರಪ್ಪ ಜಿ. ಎಸ್ – **ವಿಮರ್ಶೆಯ ಪೂರ್ವ ಪಶ್ಚಿಮ**
ಸಾಹಿತ್ಯ ಭಂಡಾರ, ಬೆಂಗಳೂರು ೧೯೯೦

೩೮. ಶಿವರುದ್ರಪ್ಪ ಜಿ. ಎಸ್ – **ಕನ್ನಡ ಸಾಹಿತ್ಯ ಸಂದರ್ಭ**
ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೦

೩೯. ಶಿವಾನಂದ ಎಸ್ – **ವಿಮರ್ಶೆಯ ಸವಾಲುಗಳು**
ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ ೧೯೯೧